ನವೆಂಬರ್ 17, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1959
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಸಮಾಧಿಯಿಂದ ಜೀವಂತ ಎದ್ದು ಬಂದ ಯೋಗ ಶಿಕ್ಷಕಿ

# 5 ಜನ ಸುಫಾರಿ ಕಿಡ್ನಾಪರ್ಸ್ ಅರೆಸ್ಟ್





## ಗಂಡನ ಕೊಂದವಳು ಗೆಣೆಕಾರರ ಸಹಿತ ಅಂದರ್!

## ದುನಿಯಾ ವಿಜಯ್ ಜೈಲಿಂದ ಬಿಡಿಸಿದ್ದ ಆರೋಪಿಯಿಂದ ಡಬಲ್ ಮರ್ಡರ್!






## ರೌಡಿಯಿಂದಲೇ ಹತನಾದ ರೌಡಿ ವಿಶ್ವನಾಥ!

## ಪ್ರೇಯಸಿಯ ಗಂಡನ ಹತ್ಯೆಗೆ ಸ್ಕೆಚ್ ಹಾಕಿದ ಪೇದೆ ಜೈಲಿಗೆ!



# ಕುಡಿತಕ್ಕೆ ಹಣ ಕೊಡದ ಪತ್ನಿಯನ್ನು ದೊಣ್ಣೆಯಿಂದ ಹೊಡೆದು ಕೊಂದ!


ಆರೋಪಿ ನಂಜುಂಡಪ್ಪ


ಶಾಂತಮ್ಮ ಬದುಕಿದ್ದಾಗ

**ಪತ್ನಿ ಕೂಲಿ ಕೆಲಸದಿಂದ ಸಂಪಾದನೆ ಮಾಡುತ್ತಿದ್ದ ಹಣದಿಂದ ಬದುಕುತ್ತಿದ್ದ ಮದ್ಯವ್ಯಸನಿ ಗಂಡನೊಬ್ಬ, ಕೆಲಸ ಕಾರ್ಯ ಮಾಡದೆ ಕುಡಿದುಕೊಂಡು ಮನೆಯಲ್ಲಿಯೇ ಇರುವವನಿಗೆ ಕುಡಿತಕ್ಕೆ ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಪತ್ನಿಯ ಮೇಲೆ ಜಗಳ ತೆಗೆದು, ಹಲ್ಲೆ ಮಾಡಿ, ದೊಣ್ಣೆಯಿಂದ ಹೊಡೆದು ಸಾಯಿಸಿ ಪರಾರಿಯಾಗಿದ್ದ ಆರೋಪಿ ಗಂಡನನ್ನು ಶಿಡ್ಲಘಟ್ಟ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**

**ಕೋಲಾರ**

✎ ಕೋಲಾರ ಮಂಜು

ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕಿನ ತಿಮ್ಮನಾಯಕನಹಳ್ಳಿ ಗ್ರಾಮಪಂಚಾಯ್ತಿಗೆ ಸೇರಿರುವ ತೋಕಲಹಳ್ಳಿ ಗ್ರಾಮದ ವಾಸಿ ಲೇಟ್ ಹನುಮಪ್ಪನ ಮಗ ಕಲ್ಲು ಕುಟುಕ ನಂಜುಂಡಪ್ಪ ಇವರ ಶಾಂತಮ್ಮ ಇವರಿಗೆ ರಾಮಾಂಜಿನಪ್ಪ, ಲಕ್ಷ್ಮಿ ದೇವಮ್ಮ, ಗಾಯತ್ರಿಮ್ಮ, ಸುಜಾತಮ್ಮ, ಸುಶೀಲಮ್ಮ ಎಂಬ ಐದು ಜನ ಮಕ್ಕಳಿದ್ದು, ಇವರೆಲ್ಲರಿಗೂ ಮದುವೆಗಳಾಗಿರುತ್ತವೆ. ಹೆಣ್ಣು ಮಕ್ಕಳು ಅವರವರ ಗಂಡಂದಿರ ಊರುಗಳಲ್ಲಿ ವಾಸವಾಗಿರುತ್ತಾರೆ. ದೊಡ್ಡ ಮಗ ರಾಮಾಂಜಿನಪ್ಪ ಸರಸಮ್ಮ ಎಂಬುವವರನ್ನು ಮದುವೆಯಾಗಿದ್ದು, ಇವರಿಗೆ ಇಬ್ಬರು ಮಕ್ಕಳಿರುತ್ತಾರೆ. ಮಗ ರಾಮಾಂಜಿನಪ್ಪ ಮದುವೆಯಾದಾಗಿನಿಂದ ಹೆಂಡತಿ, ಮಕ್ಕಳೊಂದಿಗೆ ತಂದೆ, ತಾಯಿಯ ಜೊತೆಯಲ್ಲಿ ಇದ್ದಿದ್ದು ಕಳೆದ ಎಂಟು ವರ್ಷದ ಹಿಂದೆ ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿ ಸರಸಮ್ಮ ಗಂಡ ರಾಮಾಂಜನಪ್ಪನೊಂದಿಗೆ ಜಗಳ ಮಾಡಿಕೊಂಡು ಮಕ್ಕಳೊಂದಿಗೆ ತವರುಮನೆ ಸೇರಿಕೊಂಡಿದ್ದರು. ಅಂದಿನಿಂದ ರಾಮಾಂಜಿನಪ್ಪ ಬಾಗೇಪಲ್ಲಿ ತಾಲ್ಲೂಕಿನ ಕದಿರನ್ನಗಾರಿಪಲ್ಲಿ ಗ್ರಾಮದಲ್ಲಿ ವಾಸವಾಗಿರುವ ತನ್ನ ತಂಗಿಯ ಮನೆಯಲ್ಲಿದ್ದುಕೊಂಡು ಗ್ರಾಮದ ಸಮೀಪ ಇರುವ ಕಲ್ಲು ಕೋರೆಯಲ್ಲಿ ಕಲ್ಲು ಕುಟುಕ ಕೆಲಸ ಮಾಡಿಕೊಂಡಿದ್ದರು. ತಂದೆ, ತಾಯಿಯನ್ನು ನೋಡಬೇಕೆಂದಾಗ ತೋಕಲಹಳ್ಳಿಗೆ ಬಂದು ಅವರ ಜೊತೆ ಎರಡು-ಮೂರು ದಿನಗಳ ಕಾಲ ಇದ್ದು ನಂತರ ತಂಗಿ ಮನೆಗೆ ಬಂದು ಬಿಡುತ್ತಿದ್ದರು.

ಗ್ರಾಮದಲ್ಲಿರುವ ತಂದೆ ನಂಜುಂಡಪ್ಪ ಮತ್ತು ತಾಯಿ ಶಾಂತಮ್ಮ ಇಬ್ಬರು ಕಲ್ಲು ಕುಟುಕ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಬೆಳಿಗ್ಗೆ ಅಡಿಗೆ ಮಾಡಿ ಬುತ್ತಿಯೊಂದಿಗೆ ಗಂಡ ಹೆಂಡತಿ ಕೆಲಸಕ್ಕೆ ಹೋದರೆ ಮತ್ತೆ ರಾತ್ರಿ ಮನೆಗೆ ಬರುತ್ತಿದ್ದರು. ನಂಜುಂಡಪ್ಪನಿಗೆ ಯಾವುದೇ ಕೆಟ್ಟ ಅಭ್ಯಾಸ ಇರಲಿಲ್ಲ. ಬಂಡೆ ಕೆಲಸಕ್ಕೆ ಹೋಗುತ್ತಿದ್ದಾಗ ಕೆಲವು ಜನ ಕೂಲಿ ಆಳುಗಳ ಜೊತೆ ಸೇರಿ ನಂಜುಂಡಪ್ಪ ಮದ್ಯ ಸೇವನೆ ಮಾಡುವುದನ್ನು ಕಲಿತುಕೊಂಡಿದ್ದು, ಜೊತೆಗಾರರ ಬಲವಂತಕ್ಕೆ ಶೋಕಿಗಾಗಿ ಕುಡಿಯುತ್ತಿದ್ದವನು ದಿನಕಳೆದಂತೆ ದಿನವು ಕುಡಿದುಕೊಂಡು ಮನೆಗೆ ಬರುತ್ತಿದ್ದರು. ಗಂಡ ನಂಜುಂಡಪ್ಪನ ವರ್ತನೆಯಿಂದ ಬೇಸತ್ತಿದ್ದ ಪತ್ನಿ ಶಾಂತಮ್ಮ ಸಾಕಷ್ಟು ಬಾರಿ ಬುದ್ಧಿ ಹೇಳಿದ್ದರು. ಆದರೆ ಗಂಡ ಕುಡಿದ ನಶೆಯಲ್ಲಿ ಮನೆಗೆ ಬರುವುದು ತಪ್ಪಲಿಲ್ಲ. ಆಗ ಶಾಂತಪ್ಪ ಮದ್ಯವ್ಯಸನಿಯಾಗಿ ಗಂಡ ನಂಜುಂಡಪ್ಪನ ಬಗ್ಗೆ ಮಗನ ಬಳಿ ಹೇಳಿಕೊಂಡಳು. ತಾಯಿ ಮಾತಿನಂತೆ ಮಗ ರಾಮಾಂಜಿನಪ್ಪ ಕುಡಿತ ಬಿಡುವಂತೆ ಸಾಕಷ್ಟು ಸಾರಿ ಹೇಳಿದರೂ ತಂದೆ ನಂಜುಂಡಪ್ಪ ಮಾತ್ರ ತನ್ನ ಚಾಳಿಯನ್ನು ಬಿಟ್ಟಿರಲಿಲ್ಲ. ಜೊತೆಗೆ ಏನೋ ತಂದೆಗೆ ಬುದ್ಧಿ ಹೇಳುವಷ್ಟು ಬೆಳೆದುಬಿಟ್ಟಿದ್ದೀಯ. ಮೊದಲು ಊರಿಗೆ ಹೋಗಿ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಬಂದು ನಮ್ಮುಂದೆ ನೆಟ್ಟಗೆ ಸಂಸಾರ ಮಾಡು ಎಂದು ತಂದೆ ನಂಜುಂಡಪ್ಪ ಮಗನಿಗೆ ಬುದ್ಧಿ ಹೇಳಿ ಕಳುಹಿಸಿದರು. ಕೂಲಿ ಕೆಲಸಕ್ಕೆ ಹೋಗದೆ ಪತ್ನಿಯ ವಾರದ ಬಟವಾಡೆ ಹಣದಲ್ಲಿ ಬದುಕುತ್ತಿದ್ದ ನಂಜುಂಡಪ್ಪನಿಗೆ ಪತ್ನಿ ಕೊಡುತ್ತಿದ್ದ ಹಣ ಕುಡಿತಕ್ಕೆ ಸಾಕಾಗದೆ, ತಾನು ಕೆಲಸ ಮಾಡುತ್ತಿದ್ದ ಕಲ್ಲು ಕೋರೆಯವರ ಬಳಿ ಹಾಗೂ ಗ್ರಾಮದ ಕೆಲವರ ಬಳಿ ಸಾಲ ಮಾಡಿಕೊಂಡಿದ್ದು, ಅವರಿಗೆ ಹಣವನ್ನು ಹಿಂದಿರುಗಿಸಲಾರದೆ, ಕೆಲಸಕ್ಕೂ ಹೋಗದೆ ಕುಡಿದುಕೊಂಡು ಮನೆಯಲ್ಲಿಯೇ ಇರುತ್ತಿದ್ದರು. ಎಷ್ಟು ದಿನ ಕುಡಿದುಕೊಂಡು ಮನೆಯಲ್ಲಿರಲು ಸಾಧ್ಯ. ಕೈಯಲ್ಲಿ ಕಾಸಿರುವತನಕ ಕುಡಿದುಕೊಂಡಿದ್ದು, ಹಣ ಖಾಲಿಯಾದ ನಂತರ ಪತ್ನಿ ಶಾಂತಮ್ಮನ ಬಳಿ ಕಾಡಿ, ಬೇಡಿ ಹಣ ತೆಗೆದುಕೊಂಡು ಹೋಗಿ ಕುಡಿದುಕೊಂಡು ಮನೆಗೆ ಬಂದು ಪತ್ನಿ ಶಾಂತಮ್ಮನ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹಿಂಸೆ ನೀಡುತ್ತಿದ್ದ ಗಂಡ ನಂಜುಂಡಪ್ಪ ಮರುದಿನ ಬೆಳಿಗ್ಗೆ ಪತ್ನಿ ಜೊತೆ ಎಂದಿನಂತೆ ಅನ್ಯೋನ್ಯವಾಗಿ ಇರುತ್ತಿದ್ದನು. ಆದರೆ ಇದೇ ರೀತಿ ಎಷ್ಟು ದಿನಗಳ ಕಾಲ ಪತ್ನಿ ಶಾಂತಮ್ಮ ನಡೆದುಕೊಂಡು ಹೋಗ'ಲು ಸಾಧ್ಯ. 'ಗಂಡ' ನಂಜುಂಡಪ್ಪನಿಗೆ ಕುಡಿತ ಬಿಟ್ಟು ಸರಿಯಾಗಿ ಕೆಲಸಕ್ಕೆ ಹೋಗಿ ಹಣ ಸಂಪಾದನೆ ಮಾಡಿಕೊಂಡು ಬರುವಂತೆ ತಿಳಿಸಿದಳಲ್ಲದೆ ಇನ್ನು ಮುಂದೆ ಒಂದು ಬಿಡಿಕಾಸು ಕೊಡುವುದಿಲ್ಲ. ನೀವು ಏನಾದರು ಕುಡಿತಕ್ಕೆ ಹಣ ಕೊಡಲಿಲ್ಲವೆಂದು ನನ್ನ ಮೇಲೆ ಜಗಳ ತೆಗೆದರೆ ಮಕ್ಕಳು ಮತ್ತು ಅಳಿಯಂದಿರಿಗೆ ಹೇಳುತ್ತೇನೆಂದು ಹೇಳಿದರು. ಪತ್ನಿ ಮಾತಿನಿಂದ ಕೋಪಗೊಂಡ ನಂಜುಂಡಪ್ಪ ತಾಯಿ, ಮಕ್ಕಳು ಒಂದಾಗಿ ನನ್ನ ವಿರುದ್ಧ ತಿರುಗಿಬಿದ್ದರೆ, ನನಗೆ ಉಳಿಗಾಲವಿಲ್ಲವೆಂದು ತಿಳಿದು ಇನ್ನು ಮುಂದೆ ನಾನು ಸರಿಯಾಗಿ ನಡೆದುಕೊಳ್ಳುವುದಾಗಿ ಹೇಳಿದ ಗಂಡ ಕೆಲಸಕ್ಕೆ ಹೋಗುತ್ತೇನೆಂದು ಹೇಳಿ ಸಂಜೆವರೆಗೂ ತಿರುಗಾಡಿಕೊಂಡಿದ್ದು, ರಾತ್ರಿ ಮನೆಗೆ ಬರುವಾಗ ಜೊತೆಗಾರರೊಡನೆ ಒಂದು ಪೆಗ್ ಹಾಕಿಕೊಂಡು ಬಂದು ಮನೆಯಲ್ಲಿ ಪತ್ನಿ ಮುಂದೆ ಏನು ಗೊತ್ತಿಲ್ಲದವನಂತೆ ನಾಟಕವಾಡಿಕೊಂಡಿದ್ದನು. ಗಂಡನ ಬದಲಾವಣೆಯನ್ನು ನೋಡಿದ ಪತ್ನಿ ಶಾಂತಮ್ಮ ಸಂತೋಷಪಟ್ಟಳು. ಆದರೆ ಗಂಡನ ಕುತಂತ್ರ ಬುದ್ಧಿ ಗೊತ್ತಾಗಲಿಲ್ಲ.



ಎಸ್ಪಿ ಕುಶಾಲ್ ಚೌಕ್ಸೆ


ಶಾಂತಮ್ಮನ ಶವ

**ತಾಯಿ ಕೊಲೆಗೆ ಬಗ್ಗೆ ದೂರು**

ತೋಕಲಹಳ್ಳಿ ಗ್ರಾಮದ ವಾಸಿ ರಾಮಾಂಜಿನಪ್ಪ ನವೆಂಬರ್ 4ರಂದು ಬೆಳಿಗ್ಗೆ ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ಬಾಗೇಪಲ್ಲಿ ತಾಲ್ಲೂಕಿನ ಕದಿರನ್ನಗಾರಿಪಲ್ಲಿಯಲ್ಲಿರುವ ನನ್ನ ತಂಗಿಯರ ಮನೆಯಲ್ಲಿ ವಾಸವಾಗಿರುವ ನಾನು ಆಗಾಗ ನಮ್ಮೂರಿಗೆ ಬಂದು ಹೋಗುತ್ತಿದ್ದೆನು. ನಮ್ಮ ತಂದೆ ನಂಜುಂಡಪ್ಪನವರಿಗೆ ಕುಡಿತದ ಅಭ್ಯಾಸ ಇದ್ದು ಮನೆಯಲ್ಲಿಯೇ ಕುಡಿದುಕೊಂಡು ಇದ್ದರು. ಕಲ್ಲು ಕುಟುಕ ಕೆಲಸಕ್ಕೆ ಹೋಗದೆ ತಾಯಿ ಬಳಿ ಹಣಕ್ಕಾಗಿ ಪೀಡಿಸುತ್ತಾ ಇದ್ದರು. ಅವರು ಕುಡಿಯುವುದಕ್ಕೆ ಹಣ ಕೊಡದೆ ಇದ್ದರೆ, ಅವರ ಮೇಲೆ ಗಲಾಟೆ ಮಾಡಿ ಹೊಡೆಯುತ್ತಿದ್ದರು. ಈ ಬಗ್ಗೆ ನಾವೆಲ್ಲರೂ ತಂದೆ ನಂಜುಂಪ್ಪನಿಗೆ ಬುದ್ಧಿ ಹೇಳಿದ್ದೆವು. ನವೆಂಬರ್ 4ರಂದು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಮ್ಮ ದೊಡ್ಡಪ್ಪನಾದ ಮುನಿನಾರಾಯಣಪ್ಪನವರ ಮಗ ಮುನಿಕೃಷ್ಣರವರು ನನಗೆ ಫೋನ್ ಮಾಡಿ ರಾತ್ರಿ ನಿಮ್ಮ ಮನೆಯಲ್ಲಿ ಜೋರಾಗಿ ಗಲಾಟೆ ನಡೆಯುವ ಕೂಗುಗಳು ಕೇಳಿಸುತ್ತಿತ್ತು. ನಿಮ್ಮ ತಂದೆ, ತಾಯಿ ನಡುವೆ ಯಾವಾಗಲು ಗಲಾಟೆ ಇದ್ದಿದ್ದೇ ಎಂದು ನಾನು ಗಮನಿಸಲಿಲ್ಲ. ಬೆಳಿಗ್ಗೆ ನೋಡಿದ್ದಾಗ ಮನೆ ಬಾಗಿಲು ತೆರೆದಿದ್ದು, ಹೋಗಿ ನೋಡಲಾಗಿ ನಿಮ್ಮ ತಾಯಿ ಶಾಂತಮ್ಮನವರು ರಕ್ತದ ಮಡುವಿನಲ್ಲಿದ್ದು ಪರೀಕ್ಷಿಸಲಾಗಿ ಅವರು ಮೃತಪಟ್ಟಿರುತ್ತಾರೆಂದು ಹೇಳಿದರು. ಕೂಡಲೇ ನಾನು ನನ್ನ ತಂಗಿ ಗಾಯಿತ್ರಮ್ಮ ಮತ್ತು ಇತರರೊಂದಿಗೆ ಬಾಗೇಪಲ್ಲಿಯಿಂದ ಹೊರಟು ಬಂದು ನೋಡಲಾಗಿ ತಲೆ ಮತ್ತು ಮೈಮೇಲೆ ಗಾಯಗಳಾಗಿ ತಾಯಿಯವರು ಮೃತಪಟ್ಟಿದ್ದರು. ನೆನ್ನೆ ರಾತ್ರಿ ತಾಯಿ ಶಾಂತಮ್ಮ ಅಪ್ಪನಿಗೆ ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಅವರ ಮೇಲೆ ಗಲಾಟೆ ಮಾಡಿ, ದೊಣ್ಣೆಯಿಂದ ಹೊಡೆದು ಮತ್ತು ಕೈಗಳಿಂದ ಮುಖದ ಮೇಲೆ ಗುದ್ದಿ ಕೊಲೆ ಮಾಡಿ ಪರಾರಿಯಾಗಿರುವ ನಮ್ಮ ತಂದೆ ನಂಜುಂಪ್ಪರವರ ಮೇಲೆ ಕಾನುನುರೀತ್ಯ ಕ್ರಮ ಜರುಗಿಸಲು ಕೋರಿ ನೀಡಿದ ದೂರನ್ನು ಪಡೆದ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಶ್ರೀಮತಿ ಶ್ಯಾಮಲರವರು ಠಾಣಾ ಮೊ.ಸಂ. 12/2024 ಕಲಂ 103 ಬಿಎನ್ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಮೇಲಾಧಿಕಾರಿಗಳಲ್ಲಿ ನಿವೇದಿಸಿಕೊಂಡರು.


ಡಿವೈಎಸ್ಪಿ ಮುರುಳೀಧರ


ಪಿಐ ಎಂ. ಶ್ರೀನಿವಾಸ್

ಸ್ಥಳಕ್ಕೆ ಚಿಕ್ಕಬಳ್ಳಾಪುರ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ರಾಜಾ ಇಮಾಮ್ ಖಾಸಿಂ, ಡಿವೈಎಸ್ಪಿ ಮುರುಳಿಧರ, ಪಿಐ ಎಂ. ಶ್ರೀನಿವಾಸ್ ಮತ್ತು ಸಿಬ್ಬಂದಿಯು ಹಾಜರಾಗಿ ಪರಿಶೀಲಿಸಿದ ನಂತರ ಊರಿನ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಮೃತದೇಹವನ್ನು ಸಾಗಿಸಿ ಅಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ಮೇಲೆ

☞ 5

# ಗಂಡನ ಕೊಂದವಳು ಗೆಣೆಕಾರರ ಸಹಿತ ಅರೆಸ್ಟ್!


ಕೊಲೆಯಾದ ಸದಾಶಿವ

**ಗಂಡನಿದ್ದರೂ ಆತನಿಗೆ ಗೋಲಿ ಹೊಡೆದು ಲವ್ವಿಡವ್ವಿ ಆಡುತ್ತಿದ್ದ ಕಾಮುಕಿಯೊಬ್ಬಳು ತನಗಿಷ್ಟದಂತೆ ಬದುಕಲು ಅಡ್ಡಿಯಾಗಿದ್ದ ಗಂಡನನ್ನು ಗೆಣೆಕಾರರಿಬ್ಬರ ಸಹಾಯದಿಂದ ನಿರ್ಜನ ಪ್ರದೇಶದಲ್ಲಿ ಕತ್ತು ಕೊಯ್ದು ಕೊಲೆ ಮಾಡಿ ಅಲ್ಲಿ ಕಾಣಿಕೆ ಎಲೆಅಡಿಕೆ, ಅರಿಶಿಣ, ಕುಂಕುಮ, ನಿಂಬೆಹಣ್ಣಿಟ್ಟು ವಾಮಾಚಾರಕ್ಕಾಗಿ ಕೊಲೆ ಮಾಡಲಾಗಿದೆ ಎಂಬಂತೆ ಬಿಂಬಿಸಿ ಪೊಲೀಸರ ತನಿಖೆಯ ಹಾದಿ ತಪ್ಪಿಸುವಂತೆ ಮಾಡಿದ್ದಳು... ಮುಂದೇನಾಯಿತು? ಇಲ್ಲಿದೆ ಸಂಪೂರ್ಣ ಸ್ಟೋರಿ.**


ಆರೋಪಿ ರಾಜೇಶ್ವರಿ

**ಮೈಸೂರು**

✍ಬಿ.ಎಂ. ಲವಕುಮಾರ್

ಅಕ್ರಮ ಸಂಬಂಧದ ವಿಚಾರಕ್ಕೆ ಸಂಬಂಧಿಸಿದಂತೆ ಕೊಲೆಗಳಾಗುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಇದರ ಪ್ರಮಾಣ ಹೆಚ್ಚಾಗುತ್ತಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಮೊಬೈಲ್ ಫೋನ್ ಗಳು ಕೈಗೆ ಬಂದ ಮೇಲೆ ಸಂಪರ್ಕ ಸುಲಭವಾಯಿತು. ಅದರಲ್ಲೂ ಇತ್ತೀಚೆಗೆ ಇಂಟರ್‌ನೆಟ್ ಅಗ್ಗವಾಗಿ ಸೋಷಿಯಲ್ ಮೀಡಿಯಾಗಳು ಆಕ್ಟೀವ್ ಆದ ನಂತರವಂತು ಸಂಬಂಧಗಳು ಕುದುರುವುದು ಬಲು ಸುಲಭವಾಯಿತು.

ಎಲ್ಲವನ್ನೂ ಒಳ್ಳೆಯದಕ್ಕೆ ಬಯಸಿದರೆ ಯಾವುದೇ ತೊಂದರೆಗಳು ಬರಲಾರವು. ಎಲ್ಲವೂ ನಮ್ಮ ಅನುಕೂಲಕ್ಕಾಗಿಯೇ ಇವೆ. ಆದರೆ ಯಾವುದನ್ನು ಹೇಗೆ ಬಳಸಿಕೊಳ್ಳುತ್ತೀರ ಎಂಬುದರ ಮೇಲೆ ನಿಂತಿದೆ. ಈ ವಿಚಾರದಲ್ಲಿ ಸಂಬಂಧಗಳು ಕೂಡ ಅಷ್ಟೇ... ಅವುಗಳನ್ನು ನೈತಿಕ ನೆಲಗಟ್ಟಿನಲ್ಲಿ ಮುಂದುವರೆಸಿದರೆ ನಾವೆಲ್ಲವೂ ಸುಖವಾಗಿರಲು ಸಾಧ್ಯವಾಗುತ್ತದೆ. ಆದರೆ ಅದು ಅಕ್ರಮದ ಕಡೆಗೆ ತಿರುಗಿದರೆ ಅದರಿಂದ ಯಾರಿಗೂ ನೆಮ್ಮದಿಯಿಲ್ಲ ಎಂಬುದನ್ನು ಮರೆಯಬಾರದು.


ಎಸ್ಪಿ ವಿಷ್ಣುವರ್ಧನ

ಗಂಡ, ಮಕ್ಕಳು, ಸಂಸಾರ ಎಂದು ತಮ್ಮದೇ ಲೋಕದಲ್ಲಿ ಸಾಗುತ್ತಿರುವ ವಿವಾಹಿತ ಮಹಿಳೆಯರ ಪೈಕಿ ಕೆಲವರು ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಪರಿಚಯವಾಗುವ ಯುವಕರು ಅಥವಾ ಪುರುಷರ ಜತೆ ಕ್ಲೋಸ್ ಆಗಿ ಮೂವ್ ಆಗಿ ಮನೆ ತನಕ ಕರೆಯಿಸಿಕೊಳ್ಳುವ ಮಟ್ಟಕ್ಕೆ ಹೋಗಿ ಅವರೊಂದಿಗೆ ಅಕ್ರಮ ಸಂಬಂಧ ಹೊಂದಿ ಬಳಿಕ ಗಂಡನಿಗೆ ತಮ್ಮ ನಡತೆಯಲ್ಲಿ ಅನುಮಾನ ಹುಟ್ಟಿ ಮನೆಯಲ್ಲಿ ಸದಾ ಕಿರಿಕಿರಿಗಳಾಗಿ ಕೊನೆಗೆ ಗಂಡನನ್ನು ಮುಗಿಸಿದರೆ ನೆಮ್ಮದಿಯಾಗಿರಬಹುದೆಂಬ ತೀರ್ಮಾನಕ್ಕೆ ಬಂದು ಪ್ರಿಯಕರನ ಜತೆಗೆ ಸೇರಿ ಗಂಡನಿ ಮುಹೂರ್ತ ಫಿಕ್ಸ್ ಮಾಡುವ ಘಟನೆಗಳು ಬೇಕಾದಷ್ಟು ನಡೆಯುತ್ತಿವೆ.

ಪ್ರತಿನಿತ್ಯವೂ ಅನೈತಿಕ ಸಂಬಂಧದ ಕೊಲೆಗಳು ನಡೆಯುತ್ತಿದ್ದು, ಎಷ್ಟೇ ಚಾಣಕ್ಯತನ ತೋರಿದರೂ ಕೊನೆಗೆ ಪೊಲೀಸರಿಗೆ ಸಿಕ್ಕಿ ಬಿದ್ದು ಜೈಲ್ ಸೇರುವ ಘಟನೆಗಳು ನಡೆಯುತ್ತಲೇ ಇದ್ದು, ಇದೆಲ್ಲವನ್ನು ನೋಡಿದ ಮೇಲೆಯೂ ಒಬ್ಬರನ್ನು ಕೊಲೆ ಮಾಡಿ ನಾವು ಸುಖವಾಗಿರಬಹುದೆಂದು ಬಯಸುವವರ ಭ್ರಮೆ ಮಾತ್ರ ದೂರವಾಗಿಲ್ಲ, ಹೀಗಾಗಿಯೇ ಕೊಲೆಗಳು ನಡೆಯುತ್ತಿವೆ. ಬಹಳಷ್ಟು ಕೊಲೆಗಳಲ್ಲಿ ಹೆಂಡತಿಯೇ ಹಂತಕಿಯಾಗಿರುವುದು ಮಾತ್ರ ಬೇಸರದ ಸಂಗತಿಯಾಗಿದೆ.


ಸದಾಶಿವನ ಮೃತದೇಹ

ಇಲ್ಲಿ ಕೊಲೆ ಮಾಡಿದವರು, ಮಾಡಿಸಿದವರು ಯಾರೂ ಕೂಡ ನೆಮ್ಮದಿಯಾಗಿ ಬಾಳಲು ಸಾಧ್ಯವೇ ಇಲ್ಲ, ಒಬ್ಬರನ್ನು ಸಾಯಿಸಿ ಸುಖವಾಗಿ ಬದುಕುತ್ತೇವೆ ಎನ್ನುವುದು ಭ್ರಮೆಯಷ್ಟೆ. ಗಂಡನೊಂದಿಗೆ ಬದುಕಲು ಸಾಧ್ಯವಿಲ್ಲ, ಆತ ಇಷ್ಟವಾಗಿಲ್ಲ, ಹಿಂಸೆ ಕೊಡುತ್ತಾನೆ ಎನ್ನುವುದಾದರೆ ಸಂಬಂಧ ಕಿತ್ತುಕೊಂಡು ಹೊರಬರಬೇಕು ಅದು ಬಿಟ್ಟು ಕೊಲೆ ಮಾಡಿ ತನಗೇನು ಗೊತ್ತೇ ಇಲ್ಲ ಎಂಬಂತೆ ನಾಟಕವಾಡಿದರೆ ಪೊಲೀಸರಾಗಲೀ, ಸತ್ತವನ ಕುಟುಂಬವಾಗಲೀ ನಂಬುವುದಿಲ್ಲ.

### ಮಾಡುವ ಕರ್ಮಕ್ಕೆ ಕಂದಾಯ ಕಟ್ಟಲೇ ಬೇಕು...


ಈ ಭೂಮಿ ಮೇಲೆ ನಾವು ಮಾಡುವ ಎಲ್ಲ ಕರ್ಮಗಳಿಗೂ ಕಂದಾಯ ಕಟ್ಟಲೇ ಬೇಕಾಗುತ್ತದೆ. ಹೀಗಿರುವಾಗ ಕೊಲೆ ಮಾಡಿ ಬದುಕಲು ಸಾಧ್ಯನಾ? ಇದ್ಯಾವುದನ್ನು ಅರಿತುಕೊಳ್ಳದೆ, ಕಾಮದ ಮತ್ತಿನಲ್ಲಿ ಗೆಣೆಕಾರನೊಂದಿಗೆ ಲವ್ವಿಡವ್ವಿ ಆಡಲು ಗಂಡ ಅಡ್ಡಗಾಲು ಆಗುತ್ತಾನೆ ಎಂಬ ಕಾರಣಕ್ಕೆ ಅವನನ್ನು ಕೊಲೆ ಮಾಡಿದರೆ ಮುಂದೆ ನಾವು ಯಾವುದೇ ತೊಂದರೆಯಿಲ್ಲದೆ ನಮ್ಮಿಷ್ಟದಂತೆ ಹೇಗೆ ಬೇಕೋ ಹಾಗೆ ಇರಬಹುದೆಂದುಕೊಳ್ಳುವುದು ಭ್ರಮೆಯಲ್ಲದೆ ಮತ್ತೇನಲ್ಲ.

ವಿವಾಹಿತರ ಅಕ್ರಮ ಸಂಬಂಧದ ಕೊಲೆ ಪ್ರಕರಣಗಳಲ್ಲಿ ಏನೂ ತಪ್ಪು ಮಾಡದ ಮಕ್ಕಳು ತಬ್ಬಲಿಯಾಗುತ್ತಿವೆ. ಕೊಲೆ ಮಾಡಿದ ಬಳಿಕ ಹೆತ್ತವರ ಪೈಕಿ ಒಬ್ಬರು ಸಾವನ್ನಪ್ಪಿರುತ್ತಾರೆ. ಮತ್ತೊಬ್ಬರು ಜೈಲ್ ಸೇರಿರುತ್ತಾರೆ. ಇಂತಹವರಿಗೆ ಹುಟ್ಟಿದ ತಪ್ಪಿಗೆ ಮಕ್ಕಳು ಅನಾಥರಾಗಬೇಕಾಗುತ್ತದೆ.


ಆರೋಪಿಗಳಾದ ಶಿವಯ್ಯ ಹಾಗೂ ರಂಗಸ್ವಾಮಿ

ಇದೆಲ್ಲವನ್ನು ಏಕೆ ಹೇಳಬೇಕಾಯಿತೆಂದರೆ ಮದುವೆಯಾಗಿ ಸಂಸಾರ ಕಟ್ಟಿಕೊಂಡಿದ್ದ ಹೆಂಗಸೊಬ್ಬಳು ಸಂಬಂಧಿಕರಾಗಿದ್ದ ತನ್ನದೇ ವಯಸ್ಸಿನ ಒಬ್ಬ ಸಾಲದು ಎಂಬಂತೆ ಇಬ್ಬಿಬ್ಬರೊಂದಿಗೆ ಅನೈತಿಕ ಸಂಬಂಧವನ್ನಿಟ್ಟುಕೊಂಡು ಗಂಡನಿಲ್ಲದಾಗ ಮನೆಗೆ ಕರೆಯಿಸಿಕೊಂಡು ಡಿಂಗ್‌ಡಾಂಗ್ ಆಡುತ್ತಾ ಖುಷಿಯಾಗಿದ್ದಳು. ಗಂಡನ ಮುಂದೆ ಮಹಾಪ್ರತಿವೃತೆಯಂತೆ ಪೋಸ್ ನೀಡುತ್ತಿದ್ದ ಆಕೆ ಅವನಿಲ್ಲದಾಗ ಹಾಸಿಗೆಗೆ ಇಬ್ಬಿಬ್ಬರನ್ನು ಕೆಡವಿಕೊಳ್ಳುತ್ತಿದ್ದಳು. ಆಕೆ ನಡವಳಿಕೆಯ ಬಗ್ಗೆ ಅನುಮಾನ ಮೂಡಿದ್ದರಿಂದ ಗಂಡ ಸದಾ ಕುಡಿದು ಬಂದು ಆಕೆಯೊಂದಿಗೆ ಜಗಳ ತೆಗೆಯುತ್ತಿದ್ದನು.

ಪ್ರತಿದಿನವೂ ಗಂಡ ಕಿರಿಕ್ ಮಾಡುತ್ತಿದ್ದರಿಂದ ಆಕೆ ರೋಷಿ ಹೋಗಿದ್ದಳು. ಅವಳು ಅಕ್ರಮ ಸಂಬಂಧ ಬಿಟ್ಟು ಗಂಡನಿಗೆ ನಿಯತ್ತಾಗಿ ಇರುವ ಪರಿಸ್ಥಿತಿಯಲ್ಲಿ ಅವಳು ಇರಲಿಲ್ಲ, ಗಂಡ ಹೋದ್ರು ಪರ್ವಾಗಿಲ್ಲ, ಗೆಳೆಯರಿಬ್ಬರು ನನಗೆ ಬೇಕು ಎಂಬ ಮನಸ್ಥಿತಿಗೆ ಬಂದಿದ್ದಳು. ಪ್ರತಿದಿನವೂ ಕಿರಿಕ್ ಮಾಡುವ ಗಂಡನ ಮುಗಿಸಿಬಿಟ್ಟರೆ, ಗೆಣೆಕಾರರ ಜತೆ ಹೇಗೆ ಬೇಕೋ ಹಾಗೆ ಚಕ್ಕಂದ ಆಡುತ್ತಾ ಸುಖವಾಗಿರಬಹುದೆಂಬ ನಿರ್ಧಾರಕ್ಕೆ ಆಕೆ ಬಂದು ಬಿಟ್ಟಿದ್ದಳು. ಅದಕ್ಕಾಗಿಯೇ ಆಕೆ ಗೆಣೆಕಾರರಿಬ್ಬರ ಜತೆ ಹಾಸಿಗೆಯಲ್ಲಿ ಮಲಗಿಕೊಂಡೇ ಸ್ಕೆಚ್ ಹಾಕಿ ಬಿಟ್ಟಿದ್ದಳು.


ಮೃತದೇಹವನ್ನು ಪರಿಶೀಲಿಸುತ್ತಿರುವ ಪೊಲೀಸರು

### ಆಕೆಗೆ ಇಬ್ಬಿಬ್ಬರೊಂದಿಗೆ ಅಕ್ರಮ ಸಂಬಂಧ

ಇಂತಹದೊಂದು ಕ್ರೈಂ ಸ್ಟೋರಿ ನಡೆದಿರುವುದು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ. ಗಂಡನಿಗೆ ಮುಹೂರ್ತವಿಟ್ಟವಳು ಅದೇ ಗ್ರಾಮದ ನಿವಾಸಿ ರಾಜೇಶ್ವರಿ(35). ಈಕೆ

☞ 4

# ಗಂಡನ ಕೊಂದವಳು ಗೆಣೆಕಾರರ ಸಹಿತ ಅರೆಸ್ಟ್!

3 ☞

ತನಗಿಂತ 13 ವರ್ಷ ಹೆಚ್ಚು ವಯಸ್ಸಿನ ಮಲ್ಕುಂಡಿ ಗ್ರಾಮದ ಸದಾಶಿವ(48) ಎಂಬಾತನನ್ನು ಮದುವೆಯಾಗಿದ್ದಳು. ನೋಡಲು ಸುಂದರಿಯಾಗಿ ತೆಳ್ಳಗೆ ಬೆಳ್ಳಗೆ ಇದ್ದ ಈಕೆಯ ಒಳಗೆ ಒಬ್ಬ ಹಂತಕಿ ಇದ್ದಾಳೆ ಎಂಬುದು ಯಾರಿಗೂ ಗೊತ್ತೇ ಆಗಿರಲಿಲ್ಲ.

ಗಂಡ ಸದಾಶಿವನೊಂದಿಗೆ ಸಪ್ತಪದಿ ತುಳಿದು ಸಂಸಾರ ನಡೆಸಿಕೊಂಡು ಬಂದಿದ್ದ ರಾಜೇಶ್ವರಿ ಮನೆ, ಸಂಸಾರ ಅಂಥ ಜವಬ್ದಾರಿಯ ಜೀವನ ನಡೆಸುವ ಸಮಯದಲ್ಲಿಯೇ ಕಾಮವನ್ನು ಮೈಗೇರಿಸಿಕೊಂಡಿದ್ದಳು. ಇವಳ ಸೌಂದರ್ಯಕ್ಕೆ ಮರುಳಾಗಿದ್ದವರು ಬೇರೆ ಯಾರೂ ಅಲ್ಲ ಗಂಡ ಸದಾಶಿವನ ಅಕ್ಕನ ಮಗ ಆಟೋ ಓಡಿಸುತ್ತಿದ್ದ ಶಿವಯ್ಯ ಅಲಿಯಾಸ್ ಶಿವಪ್ಪ(33) ಮತ್ತೊಬ್ಬ ಸದಾಶಿವನ ಅಣ್ಣನ ಮಗ ಸೆಟ್ರಿಂಗ್ ಕೆಲಸ ಮಾಡುತ್ತಿದ್ದ ರಂಗಸ್ವಾಮಿ (38). ಇವರಿಬ್ಬರು ರಕ್ತಸಂಬಂಧಿಗಳು. ಹೀಗಾಗಿ ಇವರೇ ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಬೆಳೆಸುತ್ತಾರೆ ಎಂಬುದು ಸದಾಶಿವನಿಗೆ ತಾನೆ ಹೇಗೆ ಗೊತ್ತಾಗಬೇಕು.




ಒಂದು ವೇಳೆ ಇವರಿಬ್ಬರು ಕಾಮುಕ ದೃಷ್ಟಿಯಿಂದ ನೋಡಿದರೂ ಅವರನ್ನು ಕ್ಯಾಕರಿಸಿ ಉಗಿದು ರಾಜೇಶ್ವರಿ ಹೊರಗೆ ಹಾಕಬೇಕಿತ್ತು. ಆದರೆ ಹಾಗೆ ಮಾಡದೆ ಅವಳು ಅವರಿಬ್ಬರನ್ನು ಹಾಸಿಗೆ ತನಕವೂ ಬಿಟ್ಟುಕೊಂಡಿದ್ದಳು. ಅವರಿಂದಲೇ ಬೇಕು ಬೇಡವನ್ನು ತೀರಿಸಿಕೊಳ್ಳುತ್ತಿದ್ದ ಆಕೆ ಗಂಡ ಸದಾಶಿವನನ್ನು ತನ್ನ ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ. ಈ ವಿಷಯದಲ್ಲಿಯೇ ಮನೆಯಲ್ಲಿ ಗಲಾಟೆಗಳಾಗುತ್ತಿದ್ದವು. ಆದರೆ ಹೆಂಡತಿ ಅವರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ವಿಚಾರ ಮಾತ್ರ ಸದಾಶಿವನಿಗೆ ಗೊತ್ತಿರಲಿಲ್ಲ.

**ಹೆಂಡತಿಯಿಂದ ಗಂಡನಿಗೆ ಮುಹೂರ್ತ ಫಿಕ್ಸ್**

ಸದಾಶಿವ ಮನೆಗೆ ಹೆಂಡ ಕುಡಿದು ಬಂದು ಕಿರಿಕ್ ಮಾಡುವುದನ್ನು ಮುಂದುವರೆಸಿದ್ದನು. ಗಂಡನಿಂದಾಗುತ್ತಿರುವ ಹಿಂಸೆಯನ್ನು ಅವಳು ಗೆಣೆಕಾರರಾದ ಶಿವಯ್ಯ ಮತ್ತು ರಂಗಸ್ವಾಮಿಗೆ ಹೇಳಿ ಅಳಲು ತೋಡಿಕೊಂಡಿದ್ದಳು. ಆತ ನನ್ನ ಪಾಲಿಗೆ ಸತ್ತು ಹೋದರೆ ನೆಮ್ಮದಿಯಾಗಿರಬಹುದೆಂದು ಹೇಳಿದ್ದಳು. ಅವಳ ಕಣ್ಣೀರು ನೋಡಿದ್ದ ಅವರಿಬ್ಬರಿಗೆ ಮನಸ್ಸು ಕರಗಿತ್ತಲ್ಲದೆ, ಒಂದು ವೇಳೆ ಸದಾಶಿವ ಇಲ್ಲದಿದ್ದರೆ ನಾವು ಯಾವುದೇ ಭಯವಿಲ್ಲದೆ ಆಕೆಯೊಂದಿಗೆ ಎಂಜಾಯ್ ಮಾಡಬಹುದೆಂಬ ಕಾಮುಕ ಮನಸ್ಸು ಮಂಡಿಗೆ ತಿನ್ನಲು ಆರಂಭಿಸಿತ್ತು.

ರಾಜೇಶ್ವರಿ ಜತೆ ಸೇರಿ ಅವರಿಬ್ಬರು ಸದಾಶಿವನನ್ನು ಮುಗಿಸುವ ತೀರ್ಮಾನಕ್ಕೆ ಬಂದರಲ್ಲದೆ, ಯಾರಿಗೂ ಗೊತ್ತಾಗದಂತೆ ಮತ್ತು ಪೊಲೀಸರ ಹಾದಿ ತಪ್ಪಿಸುವಂತೆ ಕೊಲೆ ಮಾಡಲು ನಿರ್ಧರಿಸಿ ಅಕ್ಟೋಬರ್ 17ರಂದು ಹುಣ್ಣಿಮೆಯ ದಿನ ಮುಹೂರ್ತ ಫಿಕ್ಸ್ ಮಾಡಿಯೇ ಬಿಟ್ಟಿದ್ದರು. ಸಾಮಾನ್ಯವಾಗಿ ಹುಣ್ಣಿಮೆಯ ದಿನ ವಾಮಾಚಾರಗಳು ಅಲ್ಲಲ್ಲಿ ನಡೆಯುತ್ತವೆ ಎಂಬ ಮಾತುಗಳಿವೆ. ಜತೆಗೆ ಮೂರು ರಸ್ತೆ ಸೇರುವಲ್ಲಿ ತಡೆ ಒಡೆಯುವುದು, ದೃಷ್ಟಿ ತೆಗೆಯುವುದು, ಮೊಟ್ಟೆ ಒಡೆಯುವುದು ಹೀಗೆ ಮಾಡುತ್ತಿರುತ್ತಾರೆ.

ಇನ್ನೊಂದೆಡೆ ಹುಣ್ಣಿಮೆಯ ದಿನ ನಂಜನಗೂಡು ಶ್ರೀಕಂಠೇಶ್ವರನ ದರ್ಶನಕ್ಕೆ ಜನಸಾಗರವೇ ಹರಿದು ಬರುತ್ತದೆ. ಇದೇ ವೇಳೆ ಕೊಲೆ ಮಾಡಿದರೆ ನಾವು ಸಿಕ್ಕಿಬೀಳಲ್ಲ ಎಂಬುದು ಅವರ ಆಲೋಚನೆಯಾಗಿತ್ತು. ಅವತ್ತು ಎಂದಿನಂತೆ ಹೊರಗೆ ಹೋಗಿದ್ದ ಸದಾಶಿವ ಮನೆಗೆ ಬಂದಾಗ ಸತ್ಕಾರ ರೆಡಿಯಾಗಿತ್ತು. ಆದರೆ ತನಗೆ ಹೆಂಡತಿ ಸೇರಿದಂತೆ ತನ್ನ ಅಣ್ಣನ ಮಗ ಮತ್ತು ಅಕ್ಕನ ಮಗ ಮುಹೂರ್ತ ಫಿಕ್ಸ್ ಮಾಡಿದ್ದಾರೆ ಎಂಬ ಸಣ್ಣ ಸಂಶಯವೂ ಆತನಿಗೆ ಬರದಂತೆ ನೋಡಿಕೊಂಡಿದ್ದರು.

ಅವತ್ತು ರಾತ್ರಿ ಬೇಡ, ಬೇಡವೆಂದರೂ ಸದಾಶಿವನಿಗೆ ಹೆಂಡ ಕುಡಿಸಿದ್ದರು. ಕಂಠಪೂರ್ತಿ ಕುಡಿದ ಅವರು ಅರೆಪ್ರಜ್ಞಾ ಸ್ಥಿತಿಗೆ ಹೋಗಿದ್ದನು. ಆಗ ಸಮಯ ಮಧ್ಯರಾತ್ರಿ ಎರಡು ಗಂಟೆ ಇಡೀ ಊರಿಗೆ ಊರೇ ಸವಿ ನಿದ್ದೆಯಲ್ಲಿ ಮಲಗಿತ್ತು. ಎಲ್ಲೆಲ್ಲೂ ನಿಶಬ್ದ ಮನೆ ಮಾಡಿತ್ತು. ಇದೇ ಸೂಕ್ತ ಸಮಯ ಎಂದರಿತ ಹೆಂಡತಿ ರಾಜೇಶ್ವರಿ ಮತ್ತು ಗೆಣೆಕಾರರಾದ ಶಿವಯ್ಯ ಮತ್ತು ರಂಗಸ್ವಾಮಿ ಸದಾಶಿವನನ್ನು ಎಳೆದು ಆಟೋಗೆ ಹಾಕಿಕೊಂಡಿದ್ದರು. ಇದೇ ವೇಳೆ ಮನೆಯಲ್ಲಿದ್ದ ಹಳೆಯ ಚಾಕು(ಚೂರಿ) ಎತ್ತಿಕೊಂಡಿದ್ದಳು.

ಮಲ್ಕುಂಡಿಯಿಂದ ಆಟೋದಲ್ಲಿ ಹೊರಟವರು ನಂಜನಗೂಡು ತಾಲೂಕಿನ ಮಡುವಿನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಸಮೀಪದ ನೀರು ಹರಿಯುವ ಹಳ್ಳದ ನಿರ್ಜನ ಪ್ರದೇಶಕ್ಕೆ ಬಂದಿದ್ದರು. ಅಲ್ಲಿ ಆಟೋ ನಿಲ್ಲಿಸಿ ಆಟೋದಲ್ಲಿದ್ದ ಸದಾಶಿವನನ್ನು ಹೊರಗೆ ಎಳೆದು ಹಾಕಿದ್ದರು. ಆಗಲೂ ಆತ ಅರೆ ಪ್ರಜ್ಞಾಸ್ಥಿತಿಯಲ್ಲಿದ್ದನು. ಆತನಿಗೆ ಏನು ನಡೆಯುತ್ತಿದೆ ಎಂಬುದೇ ಗೊತ್ತಾಗುತ್ತಿರಲಿಲ್ಲ.

**ಕೊಲೆ ನಂತರ ವಾಮಾಚಾರದ ನಾಟಕ**

ಇದೇ ವೇಳೆ ಹೆಂಡತಿ ರಾಜೇಶ್ವರಿ ತನ್ನೊಂದಿಗೆ ಮನೆಯಿಂದ ತಂದಿದ್ದ ಚೂರಿಯಿಂದ ಆತನ ಕತ್ತನ್ನು ಕೊಯ್ದರೆ, ಶಿವಯ್ಯ ಮತ್ತು ರಂಗಸ್ವಾಮಿ ಅವನ ಕೈಗಳನ್ನು ಹಿಡಿದುಕೊಂಡಿದ್ದರು. ರಕ್ತ ಹೊಳೆಯಾಗಿ ಹರಿದಿತ್ತು. ಆತ ಸತ್ತೇ ಹೋದ ಎಂದರಿತ ಅವರು ಕೊಲೆಯ ದಿಕ್ಕು ತಪ್ಪಿಸುವ ಸಲುವಾಗಿ ಮತ್ತು ಮೇಲ್ನೋಟಕ್ಕೆ ಇದು ವಾಮಾಚಾರಕ್ಕಾಗಿ ನಡೆದ ಕೊಲೆ ಎಂದು ಜನ ನಂಬಲಿ ಎಂದು ಕೊಲೆಯಾದ ಸ್ಥಳದಲ್ಲಿ 101 ರೂಪಾಯಿ, ಎಲೆಅಡಿಕೆ, ಅರಿಶಿಣ, ಕುಂಕುಮ, ನಿಂಬೆಹಣ್ಣು ಎಲ್ಲವನ್ನೂ ಅಲ್ಲಿಟ್ಟು ತಮಗೇನು ಗೊತ್ತೇ ಇಲ್ಲ ಎಂಬಂತೆ ಕೊಲೆ ನಡೆದ ಸ್ಥಳದಿಂದ ಮನೆಗೆ ಬಂದಿದ್ದರು.




ಮಾರನೆಯ ದಿನ ಅಂದರೆ ಅಕ್ಟೋಬರ್ 18ರಂದು ಅತ್ತ ಹೋದ ವ್ಯಕ್ತಿಯೊಬ್ಬರಿಗೆ ಯಾರೋ ನರಳುತ್ತಿರುವ ಶಬ್ದ ಕೇಳಿಸಿದೆ. ಅಲ್ಲಿ ಹೋಗಿ ನೋಡಿದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ವ್ಯಕ್ತಿ ಕಾಣಿಸಿದ್ದು ಅವರು ಊರಿನವರಿಗೆ ತಿಳಿಸಿದ ಮೇರೆಗೆ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಠಾಣೆಯ ಪಿಎಸ್ಐ ಚೇತನ್ ಕುಮಾರ್ ತಮ್ಮ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಬಂದು ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಸದಾಶಿವನನ್ನು ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಲಾಯಿತಾದರೂ ಆತ ಮಾರ್ಗಮಧ್ಯೆ ಸಾವನ್ನಪ್ಪಿದ್ದನು.

ಅಷ್ಟರಲ್ಲಿಯೇ ಆತ ಮಲ್ಕುಂಡಿ ಗ್ರಾಮದ ಸದಾಶಿವ ಎಂಬುದು ಗೊತ್ತಾಗಿತ್ತು. ಅದರಂತೆ ಹೆಂಡತಿ ರಾಜೇಶ್ವರಿ ಸೇರಿದಂತೆ ಎಲ್ಲರೂ ಓಡೋಡಿ ಬಂದಿದ್ದರು. ಎದೆ ಬಡಿದುಕೊಂಡು ಅತ್ತಿದ್ದೇ ಅತ್ತಿದ್ದು, ಯಾರೋ ವಾಮಾಚಾರಕ್ಕೆ ಗಂಡನ ಬಲಿಕೊಟ್ಟಿದ್ದಾರೆ ಅವರ ಮನೆ ಹಾಳಾಗಿ ಹೋಗಲಿ ಎಂದು ಹಿಡಿಶಾಪ ಹಾಕಿದ್ದೂ ಆಯಿತು. ಈ ವೇಳೆಗಾಗಲೇ ಸೋಷಿಯಲ್ ಮೀಡಿಯಾಗಳಲ್ಲಿ ವಾಮಾಚಾರದ ಕೊಲೆ ಎಂಬಂತೆ ಸುದ್ದಿಗಳು ಹರಿದಾಡಿತ್ತು. ಇಲ್ಲಿ ಏನೋ ವಿಚಿತ್ರ ನಡೆದಿದೆಯಲ್ಲ ಎಂದು ಖುದ್ದು ಎಸ್ಪಿ ವಿಷ್ಣುವರ್ಧನ, ನಂಜನಗೂಡು ಡಿವೈಎಸ್ಪಿ ರಘು ಸೇರಿದಂತೆ ಎಲ್ಲರೂ ಭೇಟಿ ಕೊಲೆಯಾದ ಸ್ಥಳ ಪರಿಶೀಲನೆ ನಡೆಸಿ ಆಸ್ಪತ್ರೆ, ಶವಗಾರಕ್ಕೂ ತೆರಳಿ ಪರಿಶೀಲಿಸಿ, ಅಗತ್ಯ ಮಾಹಿತಿಗಳನ್ನು ಕೂಡ ಕಲೆ ಹಾಕಿದ್ದರು.

ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ನೀಡಲಾಗಿತ್ತು. ಇದು ಉದ್ದೇಶ ಪೂರ್ವಕ ಕೊಲೆಯಾಗಿದ್ದು, ವಾಮಾಚಾರದಂತೆ ಬಿಂಬಿಸಲಾಗಿದೆ ಎಂಬುದು ಪೊಲೀಸರಿಗೂ ಗೊತ್ತಾಗಿತ್ತು. ಆದರೆ ಗ್ರಾಮಸ್ಥರಲ್ಲಿ ಅದಾಗಲೇ ವಾಮಾಚಾರದ ಭಯ ಮನೆ ಮಾಡಿತ್ತು. ಹೀಗಾಗಿ ಗ್ರಾಮಸ್ಥರು ಯಾರೂ ಭಯ ಪಡಬೇಕಾಗಿಲ್ಲ. ಈ ಘಟನೆಯ ರಹಸ್ಯ ಬಯಲು ಮಾಡುವುದಾಗಿ ಪೊಲೀಸರು ಧೈರ್ಯ ಹೇಳಿದ್ದರು.

ಕೊಲೆ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಸ್ಪಿ ವಿಷ್ಣುವರ್ಧನ ಅವರು ಎಎಸ್ಪಿ ಎಲ್. ನಾಗೇಶ್ ನೇತೃತ್ವದಲ್ಲಿ ನಂಜನಗೂಡು ಡಿವೈಎಸ್ಪಿ ರಘು ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಮನೋಜ್ ಕುಮಾರ್, ಪಿಎಸ್ಐ ಚೇತನ್‌ಕುಮಾರ್ ಮತ್ತು ಸಿಬ್ಬಂದಿ ರಸೂಲ್ ಪಾಗೇವಾಲ, ಸತೀಶ್, ಅಬ್ದುಲ್ ಲತೀಫ್, ಭಾಸ್ಕರ್, ಅಶೋಕ್, ಶಿವಕುಮಾರ್, ದೊಡ್ಡಯ್ಯ, ಮಹಿಳಾ ಸಿಬ್ಬಂದಿ ಆಶಾ ಹಾಗೂ ಶ್ರೀದೇವಿ ಅವರನ್ನೊಳಗೊಂಡ ತಂಡ ವಾಮಾಚಾರದ ರಹಸ್ಯ ಬೇಧಿಸಲು ತನಿಖೆ ಆರಂಭಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಗಳನ್ನು ಕಲೆಹಾಕ ತೊಡಗಿದ್ದರು.

**ಪೊಲೀಸರ ಅತಿಥಿಯಾದ ಮೂವರು ಹಂತಕರು**

ತನಿಖೆ ವೇಳೆ ಕೊಲೆಯಾದ ಸದಾಶಿವ ಮನೆಗೆ ಸದಾ ಕುಡಿದು ಬರುತ್ತಿದ್ದನೆಂದೂ, ಆತನ ಹೆಂಡತಿ ರಾಜೇಶ್ವರಿಗೆ ಅನೈತಿಕ ಸಂಬಂಧವಿತ್ತು ಎಂಬ ಮಾಹಿತಿಗಳು ಪೊಲೀಸರಿಗೆ ಲಭ್ಯವಾಗಿತ್ತು. ಅಲ್ಲದೆ ಕೊಲೆ ನಡೆದ ಸ್ಥಳದಲ್ಲಿ ಸಿಕ್ಕಿದ್ದ ಚಾಕು ರಾಜೇಶ್ವರಿ ಮನೆಯದ್ದು ಎಂಬುದು ಕೂಡ ಬೆಳಕಿಗೆ ಬಂದಿತ್ತು. ಹೀಗಾಗಿ ರಾಜೇಶ್ವರಿ ಮತ್ತು ಆಕೆಯ ಗೆಣೆಕಾರರಾದ ಶಿವಯ್ಯ ಹಾಗೂ ರಂಗಸ್ವಾಮಿಯನ್ನು ವಶಕ್ಕೆ ಪಡೆದು ಪೊಲೀಸ್ ಭಾಷೆಯಲ್ಲಿ ವಿಚಾರಣೆ ನಡೆಸಿದಾಗ ಸದಾಶಿವನನ್ನು ಕೊಲೆ ಮಾಡಿದ ವಿಚಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಸದ್ಯ ಗೆಣೆಕಾರರ ಜತೆ ಸೇರಿ ಗಂಡನ ಕತ್ತು ಕೊಯ್ದು ರಾಕ್ಷಸೀ ಪವೃತ್ತಿ ಮೆರೆದ ಕಾಮುಕಿ, ಹಂತಕಿ ಜೈಲ್ ಸೇರಿದ್ದಾಳೆ ಅವರ ಜತೆ ಗೆಣೆಕಾರರಾದ ಶಿವಯ್ಯ ಮತ್ತು ರಂಗಸ್ವಾಮಿ ಕೂಡ ಜೈಲ್ ಪಾಲಾಗಿದ್ದಾರೆ. ಈ ವಿಚಾರ ಹೊರ ಬರುತ್ತಿದ್ದಂತೆಯೇ ಗ್ರಾಮಕ್ಕೆ ಗ್ರಾಮವೇ ಕಾಮುಕಿ ರಾಜೇಶ್ವರಿಗೆ ಹಿಡಿಶಾಪ ಹಾಕುತ್ತಿದೆ. ಕ್ಷಣಿಕ ದೈಹಿಕ ಸುಖಕ್ಕಾಗಿ ಹೆಣ ಬೀಳಿಸಿ ಸುಖವಾಗಿರುತ್ತೇವೆ ಎಂದು ಕೊಂಡವರು ಕೊಲೆ ನಡೆದ ಕೆಲವೇ ದಿನಗಳಲ್ಲಿ ಪೊಲೀಸರ ಅತಿಥಿಯಾಗಿದ್ದಾರೆ. ಅನೈತಿಕ ಸಂಬಂಧಕ್ಕೆ ಬಿದ್ದವರಿಗೆ ಇದೊಂದು ಪಾಠ ಎಂದರೆ ತಪ್ಪಾಗಲಾರದು.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ದುನಿಯಾ ವಿಜಯ್ ಜೈಲಿಂದ ಬಿಡಿಸಿದ್ದ ಆರೋಪಿಯಿಂದ ಡಬಲ್ ಮರ್ಡರ್!



ಕೊಲೆಯಾದ ನಾಗೇಶ್ ಹಾಗೂ ಮಂಜೇಗೌಡ

ಜೈಲು ಸೇರಿದ್ದ ವ್ಯಕ್ತಿಯೊಬ್ಬನನ್ನು ಕನ್ನಡದ ನಟ ದುನಿಯಾ ವಿಜಯ್ ಅವರು ಜೈಲಿನಿಂದ ಬಿಡಿಸಿ, ಹೊಸ ಬದುಕು ಕಟ್ಟಿಕೊಳ್ಳುವುದಕ್ಕೆ ಪ್ರೇರಣೆ ನೀಡಿದ್ದರು. ಆದರೆ, ಆ ಆರೋಪಿ ವಿಜಯ್ ಅವರ ಉದ್ದೇಶವನ್ನೇ ತಲೆಕೆಳಗಾಗಿಸಿದ್ದಾನೆ. ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆಯಾಗಲು ಹಣವಿಲ್ಲದೆ ಪರದಾಡುವತ್ತಿರುವವರಿಗೆ ಆರ್ಥಿಕ ನೆರವು ನೀಡುವ ಮೂಲಕ ದುನಿಯಾ ವಿಜಯ್ ಅವರು ನೆರವಾಗುತ್ತಿದ್ದಾರೆ. ಆದರೆ, ಇಲ್ಲೊಬ್ಬ ಆರೋಪಿ ಅವರ ಆಶಯಕ್ಕೆ ಮಣ್ಣಾಕ್ಕಿದ್ದಾನೆ. ಇನ್ಮುಂದೆ ದುನಿಯಾ ವಿಜಯ್ ಅವರು ಯಾರನ್ನಾದರೂ ಜೈಲಿನಿಂದ ಬಿಡಿಸಬೇಕು ಎಂದಾದರೂ ಪದೇ ಪದೇ ವಿಚಾರ ಮಾಡುವಂತೆ ಆರೋಪಿ ಮಾಡಿದ್ದಾನೆ.

ಇತ್ತೀಚೆಗೆ ಖಾಸಗಿ ಬಸ್ ಟ್ರಾವೆಲ್ಸ್‌ವೊಂದರ ವರ್ಕ್‌ಶಾಪ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆ ರಾಡ್‌ನಿಂದ ಹೊಡೆದು ಇಬ್ಬರು ಸಹಕಾರ್ಮಿಕರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಹಳ್ಳಿಯ ಸುರೇಶ್ ಅಲಿಯಾಸ್ ಶಶಿ(35) ಬಂಧಿತ. ಈತ ಸಿಂಗಹಳ್ಳಿ ಕೆಐಎಡಿಬಿ ಕೈಗಾರಿಕಾ ಪ್ರದೇಶದ ಎಸ್‌ಆರ್‌ಎಸ್ ಟ್ರಾವೆಲ್ಸ್ ಕಂಪನಿಗೆ ಸೇರಿದ ವರ್ಕ್‌ಶಾಪ್‌ನಲ್ಲಿ ನ.8ರಂದು ರಾತ್ರಿ ಸುಮಾರು 9 ಗಂಟೆಗೆ ಸಹ ಕಾರ್ಮಿಕರಾದ ರಾಮನಗರ ಮೂಲದ ನಾಗೇಶ್ (52) ಮತ್ತು ಮಂಡ್ಯ ಮೂಲದ ಮಂಜೇಗೌಡ (44) ಎಂಬುವರ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆಗೈದು ಕೊಲೆ ಮಾಡಿ ಪರಾರಿಯಾಗಿದ್ದ. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



**ಕಳ್ಳ ಎಂದು ಹೀಯಾಳಿಕೆ**

ಕೊಲೆಯಾದ ನಾಗೇಶ್, ಮಂಜೇಗೌಡ ಹಾಗೂ ಆರೋಪಿ ಸುರೇಶ್ ಸಿಂಗಹಳ್ಳಿ ಎಸ್‌ಆರ್‌ಎಸ್ ಟ್ರಾವೆಲ್ಸ್‌ನ ವರ್ಕ್‌ಶಾಪ್‌ನಲ್ಲಿ ಬಸ್‌ಗಳ ಸ್ವಚ್ಛತೆ ಕೆಲಸ ಮಾಡಿಕೊಂಡಿದ್ದರು. ರಾತ್ರಿ ವೇಳೆ ಮೂವರು ಕಾರ್ಮಿಕರ ಶೆಡ್‌ನಲ್ಲೇ ಮಲಗುತ್ತಿದ್ದರು. ನೀನು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೀಯಾಳಿಸುತ್ತಿದ್ದರು. ನೀನು ಕಳ್ಳ, ಜೈಲಿಗೆ ಹೋಗಿ ಬಂದವನು ಎಂದು ನನ್ನ ಹಿನ್ನೆಲೆ ಪ್ರಸ್ತಾಪಿಸಿ ನಿಂದಿಸುತ್ತಿದ್ದರು ಎಂದು ಸುರೇಶ್ ಪೊಲೀಸರ ವಿಚಾರಣೆ ವೇಳೆ ಹೇಳಿದ್ದಾನೆ.

**ಮದ್ಯ ಸೇವನೆ ವೇಳೆ ನಿಂದಿಸಿದ್ದಕ್ಕೆ ಕೊಲೆ**

ನ.8ರ ರಾತ್ರಿ ವರ್ಕ್‌ಶಾಪ್‌ನ ಶೆಡ್‌ಲ್ಲಿ ಮೂವರು ಮದ್ಯ ಸೇವಿಸಿದ ವೇಳೆ ನಾಗೇಶ್ ಮತ್ತು ಮಂಜೇಗೌಡ ಮತ್ತೆ ನನ್ನ ಕೆಲಸ ಹಾಗೂ ತನ್ನ ಹಿನ್ನೆಲೆ ಬಗ್ಗೆ ಪ್ರಸ್ತಾಪಿಸಿ ನಿಂದಿಸಲು ಆರಂಭಿಸಿದರು. ಇದರಿಂದ ಕೋಪ ಬಂದು ಆರಂಭವಾದ ಜಗಳ ವಿಕೋಪಕ್ಕೆ ತಿರುಗಿ ರೊಚ್ಚಿಗೆದ್ದು ಕಬ್ಬಿಣದ ರಾಡ್‌ನಿಂದ ಇಬ್ಬರ ಮೇಲೂ ಮನಬಂದಂತೆ ಹಲ್ಲೆಗೈದು ಕೊಲೆ ಮಾಡಿ ಪರಾರಿಯಾಗಿದ್ದಾಗಿ ಆರೋಪಿ ಸುರೇಶ್ ಹೇಳಿದ್ದಾನೆ.

**ಕೊಲೆ ಮಾಡಿ ಕೆ.ಆರ್. ಮಾರ್ಕೆಟ್‌ಗೆ ಹೋಗಿದ್ದ**

ಜೋಡಿ ಕೊಲೆ ಬಳಿಕ ಆರೋಪಿ ಸುರೇಶ್ ಸಿಂಗಹಳ್ಳಿಯಿಂದ ನಡೆದುಕೊಂಡೇ ಕೆ.ಆರ್.ಮಾರ್ಕೆಟ್‌ಗೆ ಬಂದಿದ್ದಾನೆ. ಜೋಡಿ ಕೊಲೆ ಘಟನಾ ಸ್ಥಳದಲ್ಲಿ ಸುರೇಶ್ ನಾಪತ್ತೆಯಾಗಿದ್ದ ಹಿನ್ನೆಲೆ ಈತನೇ ಕೊಲೆಗಾರ ಎಂದು ಬಲವಾಗಿ ಶಂಕಿಸಿದ್ದ ಪೊಲೀಸರು, ಘಟನಾ ಸ್ಥಳದ ಸುತ್ತಮುತ್ತಲ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಪರಿಶೀಲನೆ ವೇಳೆ ಆರೋಪಿ ಸುರೇಶ್ ನಡೆದುಕೊಂಡು ಹೋಗುತ್ತಿರುವ ದೃಶ್ಯಾವಳಿಗಳು ಸೆರೆಯಾಗಿದ್ದವು. ಈ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಿ ಸಿಟಿ ಮಾರ್ಕೆಟ್‌ನಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ.

**ಆರೋಪಿ ಮಾಜಿ ರೌಡಿ ಶೀಟರ್:**

ಆರೋಪಿ ಸುರೇಶ್ ಮಾಜಿ ರೌಡಿ ಶೀಟರ್ ಆಗಿದ್ದಾನೆ. ಈತನ ವಿರುದ್ಧ 2010 ಮತ್ತು 2012ರಲ್ಲಿ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಮತ್ತು ಕೊಲೆ ಹಾಗೂ ಜೋಡಿ ಕೊಲೆ ಪ್ರಕರಣಗಳು ದಾಖಲಾಗಿದ್ದವು. ಎರಡೂ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ. ಹೀಗಾಗಿ ಈತನ ವಿರುದ್ಧ ಸುಬ್ರಮಣ್ಯಪುರ ಠಾಣೆ ಪೊಲೀಸರು ರೌಡಿ ಪಟ್ಟಿ ತೆರೆದಿದ್ದರು. ಈ ನಡುವೆ ಜೋಡಿ ಕೊಲೆ ಪ್ರಕರಣದಲ್ಲಿ ಖುಲಾಸೆಯಾಗಿದ್ದ. ಅತ್ಯಾಚಾರ ಮತ್ತು ಕೊಲೆ ಆರೋಪದ ಪ್ರಕರಣದಲ್ಲಿ ಅಪರಾಧಿ ಎಂದು ಸಾಬೀತಾದ ಹಿನ್ನೆಲೆಯಲ್ಲಿ 10 ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿದ್ದ. ಈ ನಡುವೆ ಸುಬ್ರಮಣ್ಯಪುರ ಠಾಣೆ ಪೊಲೀಸರು ರೌಡಿ ಪಟ್ಟಿಯಿಂದ ಆರೋಪಿಯ ಹೆಸರು ಕೈಬಿಟ್ಟಿದ್ದರು ಎಂದು ತಿಳಿದು ಬಂದಿದೆ.



ಆರೋಪಿ ಸುರೇಶ ಅ॥ ಶಶಿ

**9 ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆ**

ಅತ್ಯಾಚಾರ ಮತ್ತು ಕೊಲೆ ಆರೋಪದ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಆರೋಪಿ ಸುರೇಶ್, 2012ರಿಂದ 2024ರ ಜನವರಿಗೆ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ, ಬಳಿಕ ಕೆ.ಆರ್.ಮಾರುಕಟ್ಟೆಯಲ್ಲಿ ಸೊಪ್ಪು ಮಾರಾಟ ಮಾಡಿಕೊಂಡು ಜೀವನ ಮಾಡುತ್ತಿದ್ದ. ಕಳೆದ 5 ತಿಂಗಳ ಹಿಂದೆಯಷ್ಟೇ ಎಸ್‌ಆರ್‌ಎಸ್ ಟ್ರಾವೆಲ್ಸ್‌ನ ವರ್ಕ್‌ಶಾಪ್‌ನಲ್ಲಿ ಬಸ್‌ಗಳ ಸ್ವಚ್ಛತಾ ಕೆಲಸಕ್ಕೆ ಸೇರಿಕೊಂಡಿದ್ದ.

**ತಪ್ಪು ಮಾಡಬೇಡಿ ಎಂದು ಉಪದೇಶ**

ದುನಿಯಾ ವಿಜಯ್ ಅವರು ಜೈಲಿನಿಂದ ಬಿಡಿಸಿದ ಎಲ್ಲರಿಗೂ ಅವರು ಜೈಲಿನಿಂದ ಹೊರಗೆ ಬಂದಾಗ ಹೇಳುತ್ತಿದ್ದ ಮಾತು, ಮತ್ತೆ ತಪ್ಪು ಮಾಡಬೇಡಿ. ಒಳ್ಳೆಯ ಜೀವನ ಕಟ್ಟಿಕೊಳ್ಳಿ, ಒಳ್ಳೆಯದಾಗಲಿ ಅಂತ ಹೇಳ್ತಿದ್ದರು ಆದರೆ, ಈ ಆರೋಪಿ ಅವರ ಒಳ್ಳೆಯ ಆಲೋಚನೆಗೆ ಕಪ್ಪುಮಸಿ ಬಳೆದಂತೆ ಮಾಡಿದ್ದಾನೆ ಎನ್ನಲಾಗಿದೆ. ☯




ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರ ಪರಿಶೀಲನೆ

# ದೊಣ್ಣೆಯಿಂದ ಹೊಡೆದು ಕೊಂದ!

2 ☞

ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ಕುಡಿತಕ್ಕೆ ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಪತ್ನಿಯನ್ನು ದೊಣ್ಣೆಯಿಂದ ಹೊಡೆದು ಸಾಯಿಸಿ ಪರಾರಿಯಾಗಿರುವ ಆರೋಪಿಯ ಪತ್ತೆಗಾಗಿ ಎಸ್ಪಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಮುರುಳಿಧರವರ ಮಾರ್ಗದರ್ಶನದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಎಂ. ಶ್ರೀನಿವಾಸ್‌ರವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಶ್ಯಾಮಲ ಮತ್ತು ವೆಂಕಟರಮಣಪ್ಪ, ಮಾರುತಿ, ನರಸಿಂಹಯ್ಯ , ಕೃಷ್ಣಪ್ಪ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ನವೆಂಬರ್ 4ರಂದು ರಾತ್ರಿ 8.45 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಪಟ್ಟಣದ ಬಸ್ ನಿಲ್ದಾಣದಲ್ಲಿ ಬೆಂಗಳೂರಿಗೆ ಹೋಗಲು ಬಸ್ಸಿಗಾಗಿ ಕಾದಿದ್ದ ಆರೋಪಿ ನಂಜುಂಡಪ್ಪನನ್ನು ಕ್ರೈಂ ತಂಡವು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಯಿತು.



ಪಿಎಸ್‌ಐ ವೆಂಕಟರಮಣಪ್ಪ



ಪಿಎಸ್‌ಐ ಶ್ಯಾಮಲ

**ಹಣ ಕೊಡದಿದ್ದಕ್ಕೆ ಕೊಲೆ**

ನಾನು ಕೆಲಸಕ್ಕೆ ಹೋಗದೆ ಪತ್ನಿ ಶಾಂತಮ್ಮನ ಸಂಪಾದನೆಯಲ್ಲಿ ಬದುಕುತ್ತಿದ್ದೆನು. ಕುಡಿತಕ್ಕೆ ದಾಸನಾಗಿದ್ದ ನಾನು ಹಣ ಇಲ್ಲದಾಗ, ಪತ್ನಿ ಬಳಿ ಕೇಳಿ ತೆಗೆದುಕೊಂಡು ಹೋಗಿ ಜೊತೆಗಾರರೊಂದಿಗೆ ಸೇರಿ ಕುಡಿದುಕೊಂಡು ಬರುತ್ತಿದ್ದೆನು. ಯಾವಾಗಲು ಕೇಳಿದ ತಕ್ಷಣ ಹಣ ಕೊಡುತ್ತಿದ್ದವಳು, ಇತ್ತೀಚಿನ ದಿನಗಳಲ್ಲಿ ಯಾರ ಮಾತೂ ಕೇಳಿಕೊಂಡು ಹಣ ಕೊಡಲು ಹಿಂದೇಟು ಹಾಕುತ್ತಿದ್ದಳು ಜೊತೆಗೆ ಕೇಳಿದಷ್ಟು ಹಣವನ್ನು ಕೊಡದೆ, ಕುಡಿತಕ್ಕೆ ಸಾಕು, ಸಾಲದಷ್ಟು ಹಣವನ್ನು ಕೊಡುತ್ತಿದ್ದಳು. ಈ ಬಗ್ಗೆ ಕೇಳಿದಕ್ಕೆ ನನ್ನ ಸಂಪಾದನೆಯಲ್ಲಿ ಇಷ್ಟೇ ಕೊಡುವುದು, ಕಷ್ಟಪಟ್ಟು ಸಂಪಾದನೆ ಮಾಡಿದ ಹಣದಲ್ಲಿ ಕುಡಿದುಕೊಂಡು ಮನೆಯಲ್ಲಿ ಕಾಲ ಕಳೆಯುವ ಬದಲಿಗೆ ಕೂಲಿಗೆ ಹೋಗಿ ಹಣ ಸಂಪಾದನೆ ಮಾಡುವಂತೆ ಬುದ್ಧಿ ಹೇಳಿದಳು. ಇದರ ಜೊತೆಗೆ ಕುಡಿಯಲು ಕೊಡುತ್ತಿದ್ದ ಹಣವನ್ನು ನಿಲ್ಲಿಸಿ ಹಣಕ್ಕಾಗಿ ಡಿಮ್ಯಾಂಡ್ ಮಾಡುವುದಾಗಲಿ, ಜಗಳ ತೆಗೆಯುವುದಾಗಲಿ ಮಾಡಿದರೆ ಮಕ್ಕಳು, ಅಳಿಯಂದರಿಗೆ ಹೇಳಬೇಕಾಗುವುದೆಂದು ಹೇಳಿ, ಬೆದರಿಸಿದಳು. ಇದರಿಂದ ನನಗೆ ಕೋಪ ಬಂದು ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಲು ಹೋದಾಗ ಅವಳೂ ಸಹ ನನ್ನ ವಿರುದ್ಧವಾಗಿ ನಿಂತುಕೊಂಡಳು. ಆಗ ಮಾತಿಗೆ ಮಾತು ಬೆಳೆಯುತ್ತಾ ಹೋಯಿತು. ಇವಳಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಅಲ್ಲಿಯೇ ಇದ್ದ ದೊಣ್ಣೆಯೊಂದನ್ನು ತೆಗೆದುಕೊಂಡು ಪತ್ನಿಯ ತಲೆಗೆ ಬಲವಾಗಿ ಹೊಡೆದೆನಲ್ಲದೆ ಕೈಗಳಿಂದ ಎದೆ ಮತ್ತು ಹೊಟ್ಟೆಗೆ ಗುದ್ದಿ ತಳ್ಳಿದೆ. ಅವಳು ನೆಲದ ಮೇಲೆ ಬಿದ್ದು ಸತ್ತು ಹೋದಳು. ಇದರಿಂದ ನನಗೆ ಭಯವಾಗಿ ಪರಾರಿಯಾದೆನೆಂದು ಹೇಳಿದನು.

ಆರೋಪಿ ನಂಜುಂಡಪ್ಪನಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ಪರಿಶೀಲಿಸಿದ ನಂತರ ಕೃತ್ಯಕ್ಕೆ ಉಪಯೋಗಿಸಿದ್ದ ದೊಣ್ಣೆಯನ್ನು ತೆಗೆದುಕೊಟ್ಟಿದ್ದು, ಪಂಚರ ಸಮಕ್ಷಮದಲ್ಲಿ ಅದನ್ನು ವಶಕ್ಕೆ ಪಡೆದ ಮೇಲೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. 40 ವರ್ಷಗಳಿಂದ ಪತ್ನಿಯೊಂದಿಗೆ ಜೀವನ ಸಾಗಿಸಿದ ಗಂಡ ಕುಡಿತದ ಚಟಕ್ಕೆ ಬಿದ್ದು ಪತ್ನಿಯನ್ನು ಸಾಯಿಸಿದ್ದರಿಂದ ಕುಡಿತ ಜೈಲಿನಲ್ಲಿ ಮುದ್ದೆ ಮುರಿಯುವಂತೆ ಮಾಡಿತು. ಕುಡಿತ ಬಿಟ್ಟು ಕೆಲಸಕ್ಕೆ ಹೋಗುವಂತೆ ಪತ್ನಿ ಬುದ್ಧಿ ಹೇಳಿದಕ್ಕೆ ಕುಡುಕ ಗಂಡನಿಂದ ಕೊಲೆಯಾಗಿ ಮಸಣ ಸೇರಬೇಕಾಯಿತು. ☯

# ಇದು ಕ್ರೇಜ್ ಅಲ್ಲ ಹುಚ್ಚುತನ

## ಕ್ರೈಂ ಪ್ರಪಂಚ

ಕಳ್ಳತನ ಎಂಬುದು ನಿತ್ಯ ಜೀವನದಲ್ಲಿ ಸರ್ವೇಸಾಮಾನ್ಯ. ನೂರಕ್ಕೆ ಅರವತ್ತೆಂಟು ಮಂದಿ ಒಂದಲ್ಲ ಮತ್ತೊಂದು ರೀತಿ ಕಳ್ಳತನ ಮಾಡುತ್ತಾರೆ ಎಂದು 'ವರ್ಲ್ಡ್ ಸರ್ವೇ ರಿಪೋರ್ಟ್' ತಿಳಿಸುತ್ತದೆ.

ಕಳ್ಳತನಕ್ಕೆ ಕಾರಣ ಎಂಬುದು ಒಂದು ನೆಪ ಮಾತ್ರ. ತುಂಬಾ ಸುಲಭವಾಗಿ ಶ್ರೀಮಂತರಾಗಲು ಕಳ್ಳತನ ಎಂಬುದು ಪ್ರಚೋದನೆ ನೀಡುತ್ತದೆ. ಕೆಲವೇ ಸಾವಿರ ರೂಪಾಯಿ ಸಂಬಳಕ್ಕಾಗಿ ತಿಂಗಳ ಪೂರ್ತಿ, ಬೆಳಿಗ್ಗೆಯಿಂದ ಸಂಜೆತನಕ ಕತ್ತೆ ಚಾಕರಿ ಮಾಡಲು ಎಲ್ಲರೂ ಸಿದ್ದರಾಗಿರುವುದಿಲ್ಲ.

ಶ್ರಮ ಪಡದೆ ತುಂಬಾ ಬೇಗ ಮತ್ತು ಸುಲಭವಾಗಿ ಹಣವನ್ನು ಸಂಪಾದಿಸುವ ಮಾರ್ಗವೇ ಕಳ್ಳತನ.

ಕಳ್ಳತನ ಮಾಡುವವರೆಲ್ಲ ಇದರಲ್ಲಿ ಪೂರ್ಣ ಯಶಸ್ಸನ್ನು ಕಾಣುವುದಿಲ್ಲ. ಕಳ್ಳತನ ಮಾಡಲು ಬುದ್ಧಿವಂತಿಕೆ, ಧೈರ್ಯ, ಚುರುಕುತನ ಮತ್ತು ಸಮಯೋಚಿತ ಜಾಣ್ಮೆ ಇರಬೇಕು.

ಇದೆಲ್ಲಾ ಅಗತ್ಯವಾಗಿ ಬೇಕಾಗಿರೋದು ಆಗಾಗ ಕಳ್ಳತನ ಮಾಡುವವರಿಗೆ ಮತ್ತು ಕೆಲವರು ಇದನ್ನೇ ಪರ್ಮನೆಂಟ್ ಪ್ರೊಫೆಷನ್ ಆಗಿ ಮಾಡಿಕೊಂಡಿರುತ್ತಾರೆ. ಅಂತಹವರಿಗೆ ಇದೆಲ್ಲಾ ಅಗತ್ಯವಾಗಿ ಇರಬೇಕು.

ಈ ಲೇಖನದಲ್ಲಿ ಹೇಳಲಿರುವುದು ಡಿಫರೆಂಟ್ ಕಳ್ಳರಿಗೆ, ಹಣದ ಅಗತ್ಯ ಮತ್ತು ಅನಿವಾರ್ಯತೆ ಇಲ್ಲದಿದ್ದರೂ ಕಳ್ಳತನ ಮಾಡುವವರಿಗೆ. ಇಂತಹವರಿಗೆ ಕಳ್ಳತನ

''ಮೇಡಂ... ಕದಿಯುವ ಅಗತ್ಯ ನಿಮಗೆ ಇಲ್ಲ. ಯಾಕೆ ಅಂದರೆ ಬಾಲಿವುಡ್ ಹೀರೋಯಿನ್‌ಗಳಲ್ಲಿ ನೀವು ಟಾಪ್ ಸೆಕೆಂಡ್‌ನಲ್ಲಿ ಇದ್ದೀರ. ಬೇಕಾದಷ್ಟು ಆಸ್ತಿ ಇದೆ. ನೀವು ಫೋನ್‌ಕಾಲ್ ಮಾಡಿದ್ರೆ, ನಿಮ್ಮ ಅಭಿಮಾನಿಗಳು, ಸೌಂದರ್ಯದ ಆರಾಧಕರು ಎಂತಹ ಬೆಲೆಬಾಳುವ ವಸ್ತುಗಳನ್ನೇ ಆಗಲಿ ಗಿಫ್ಟ್ ಆಗಿ ಕೊಡುತ್ತಾರೆ. ಅಂದ ಮೇಲೆ ನೀವು ತುಂಬಾ ಕಡಿಮೆ ಬೆಲೆಯ ವಸ್ತುಗಳನ್ನು ಕದಿಯುವ ಅಗತ್ಯವಾದರೂ ಇರುವುದೆ?'' ಅವಳಿಂದ ಉತ್ತರ ಬರಲಿಲ್ಲ. ಮತ್ತೊಬ್ಬ ಕಂಪನಿ ಅಧಿಕಾರಿ ''ನೀವು ಕಳ್ಳತನ ಮಾಡಿರೋದು ಸಿ.ಸಿ. ಕ್ಯಾಮರಾದಲ್ಲಿ ರೆಕಾರ್ಡ್ ಆಗಿದೆ. ನಾವೇನಾದರೂ ಅದನ್ನು ಮಾಧ್ಯಮಗಳಿಗೆ ರಿಲೀಸ್ ಮಾಡಿದ್ರೆ, ಬ್ರೇಕಿಂಗ್ ನ್ಯೂಸ್ ಆಗುತ್ತೆ. ನಿಮ್ಮಂತ ಸ್ಟಾರ್ ಹೀರೋಯಿನ್ ಇಮೇಜ್‌ಗೆ ಡ್ಯಾಮೇಜ್ ಆಗುತ್ತೆ'' ಎಂದು ಗಂಭೀರವಾಗಿ ಹೇಳಿದರು.

ಎಂಬುದು ಕ್ರೇಸಿಂಗ್ ಆಗಿರುತ್ತದೆ.

ಕಳ್ಳತನ ಥ್ರಿಲ್ಲಿಂಗ್ ಗೇಮ್ ಆಗಿರುತ್ತದೆ. ಅಷ್ಟೇ ಅಲ್ಲ, ದುರ್ಬಲ ಮನಸ್ಸಿನವರು ಪ್ರಚೋದನೆಗೆ ಒಳಗಾಗಿ, ಮನೋ ದುರ್ಬಲತೆಯ ಕಾರಣದಿಂದ ಕಾರಣದಿಂದ ಕಳ್ಳತನ ಎಂಬುದು ವಿಲಕ್ಷಣ ಆಸೆ ಆಗಿರುತ್ತದೆ. ಇಂತಹವರು ಭಾರತದಲ್ಲಿ ಮಾತ್ರವಲ್ಲ ವಿಶ್ವದ ಹಲವಾರು ದೇಶಗಳಲ್ಲಿವೆ.

ಕ್ರೇಸಿಂಗ್ ಗೇಮ್!

ಆಗಾಗ ಕಳ್ಳತನ ಮಾಡದಿದ್ದರೆ ಕೆಲವರಿಗೆ ಏನನ್ನೋ ಕಳೆದುಕೊಂಡಂತೆ ಆಗಿರುತ್ತದೆ. ಅವರು ಚಡಪಡಿಸುತ್ತಾರೆ. ತಿಂಗಳಲ್ಲಿ ಎರಡು ಸಲವಾದರೂ ಸಹ ಅಗತ್ಯ ಇಲ್ಲದಿದ್ದರೂ ಕಳ್ಳತನ ಮಾಡಲೇಬೇಕಾಗುತ್ತದೆ. ಮಾಡುವುದು ಪ್ರಚೋದನೆಯ ಮೂಲ ಆಗಿರುತ್ತದೆ.

ದೇಶ-ವಿದೇಶದಲ್ಲಿರುವ ಇಂತಹ ವಿಚಿತ್ರ-ವಿಲಕ್ಷಣ ಮನೋಭಾವದ ಕಳ್ಳರ ಬಗ್ಗೆ ತಿಳಿಸುವುದೇ ಈ ಲೇಖನದ ಮೂಲ ಉದ್ದೇಶವಾಗಿದೆ.

ಅವಳು ಹೀಗ್ಯಾಕೆ?

ಅವಳನ್ನು ಮಲ್ಟಿ ಸೇಲ್ ಬಜಾರ್‌ನವರು ಪ್ರತ್ಯೇಕವಾದ ಕೊಠಡಯಲ್ಲಿ ಕೂರಿಸಿದ್ದಾರೆ.

ಅವಳು ಯಾರು?

ಬಾಲಿವುಡ್‌ನ ಪ್ರಖ್ಯಾತ ಹೀರೋಯಿನ್. ಅವಳ ನಿಜವಾದ ಹೆಸರಿನ ಅಗತ್ಯ ಇಲ್ಲ. ಓದುಗರ ರೆಫರೆನ್ಸ್ ಗೋಸ್ಕರ ಆಕೆಗೆ 'ಎಕ್ಸ್‌ಎಕ್ಸ್‌ಎಕ್ಸ್' ಎಂಬ ಹೆಸರಿನಿಂದ ಕರೆಯೋಣ ಅಥವಾ ಪನ್ನಗ ರಾಣಿ ಅಂತ ಬೇಕಾದರೂ ಕರೆಯೋಣ.

ಆಕೆಯನ್ನು ಬಾಂಬೆಯಲ್ಲಿರುವ ಮಲ್ಟಿ ಸೇಲ್ ಬಜಾರ್‌ನವರು, ಆಫೀಸ್ ಚೇಂಬರ್‌ನಲ್ಲಿ ಕೂರಿಸಿದ್ದಾರೆ. ಅವಳ ಎದುರಿಗೆ ಎಂ.ಡಿ. ಸೇಲ್ಸ್ ಮ್ಯಾನೇಜರ್, ಟೆಕ್ನಿಕಲ್ ಸೂಪರ್‌ವೈಸರ್ ಮತ್ತು ಸೆಕ್ಯುರಿಟಿಯ ಚೀಫ್ ಇದ್ದಾರೆ.

ಅವಳು ಆಕರ್ಷಕ ರೂಪವತಿ.

ಸೋಕಾಲ್ಡ್ ಸೆಕ್ಸಿ ಡಾಲ್.

ಅಂತಹ ಚೆಲುವೆ ಈಗ ನಾಚಿಕೆ, ಅವಮಾನದಿಂದ ತಲೆ ತಗ್ಗಿಸಿದ್ದಾಳೆ.

ಮುಖ ಬಿಳುಚಿಕೊಂಡಿದೆ.

ಆ ಕಂಪನಿಯ ಎಂಡಿ ''ಮೇಡಂ... ಯಾಕೆ ಆ ರೀತಿ ಮಾಡಿದ್ರಿ? ನಮ್ಮ ಸೇಲ್ಸ್ ಸೆಕ್ಷನ್‌ಗೆ ನೀವು ಬರುತ್ತಿರೋದು ಎರಡನೆಯ ಸಲ. ಕಳೆದ ವಾರ ಬಂದಿದ್ದಾಗ ಹೊಸ ಮಲ್ಟಿ ಬ್ಯಾಂಡೆಡ್ ಸೋಪನ್ನ ಕಳ್ಳತನ ಮಾಡಿದ್ರಿ.''

ಮತ್ತೊಬ್ಬ ಅಧಿಕಾರಿ ''ಸಿ.ಸಿ. ಕ್ಯಾಮರ ನಿಮ್ಮ ಕಳ್ಳತನ ಮಾಡಿದ್ರಿ. ಆದರೆ ನಾವು ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಲಿಲ್ಲ. ಆದರೆ ಇವತ್ತು ಸಹ ನಿಮ್ಮ ಕೈಚಳಕ ತೋರಿಸಿದ್ದೀರ.''

ಅವಳಿಂದ ಉತ್ತರ ಬರಲಿಲ್ಲ.

''ಮೇಡಂ... ಕದಿಯುವ ಅಗತ್ಯ ನಿಮಗೆ ಇಲ್ಲ. ಯಾಕೆ ಅಂದರೆ ಬಾಲಿವುಡ್ ಹೀರೋಯಿನ್‌ಗಳಲ್ಲಿ ನೀವು ಟಾಪ್ ಸೆಕೆಂಡ್‌ನಲ್ಲಿ ಇದ್ದೀರ. ಬೇಕಾದಷ್ಟು ಆಸ್ತಿ ಇದೆ. ನೀವು ಫೋನ್‌ಕಾಲ್ ಮಾಡಿದ್ರೆ ನಿಮ್ಮ ಅಭಿಮಾನಿಗಳು, ಸೌಂದರ್ಯದ ಆರಾಧಕರು ಎಂತಹ ಬೆಲೆಬಾಳುವ ವಸ್ತುಗಳನ್ನೇ ಆಗಲಿ ಗಿಫ್ಟ್ ಆಗಿ ಕೊಡುತ್ತಾರೆ. ಅಂದ ಮೇಲೆ ನೀವು ತುಂಬಾ ಕಡಿಮೆ ಬೆಲೆಯ ವಸ್ತುಗಳನ್ನು ಕದಿಯುವ ಅಗತ್ಯವಾದರೂ ಇರುವುದೆ?''

ಆಗಲೂ ಅವಳಿಂದ ಉತ್ತರ ಬರಲಿಲ್ಲ.

ಮತ್ತೊಬ್ಬ ಕಂಪನಿ ಅಧಿಕಾರಿ ''ನೀವು ಕಳ್ಳತನ ಮಾಡಿರೋದು ಸಿ.ಸಿ. ಕ್ಯಾಮರಾದಲ್ಲಿ ರೆಕಾರ್ಡ್ ಆಗಿದೆ. ನಾವೇನಾದರೂ ಅದನ್ನು ಮಾಧ್ಯಮಗಳಿಗೆ ರಿಲೀಸ್ ಮಾಡಿದ್ರೆ ಬ್ರೇಕಿಂಗ್ ನ್ಯೂಸ್ ಆಗುತ್ತೆ. ನಿಮ್ಮಂತ ಸ್ಟಾರ್ ಹೀರೋಯಿನ್ ಇಮೇಜ್‌ಗೆ ಡ್ಯಾಮೇಜ್ ಆಗುತ್ತೆ'' ಎಂದು ಗಂಭೀರವಾಗಿ ಹೇಳಿದರು.

ಕಂಪನಿಯ ಎಂ.ಡಿ. ಮತ್ತೊಮ್ಮೆ ''ಮೇಡಂ... ಯಾಕೆ ಈ ರೀತಿ ಮಾಡಿದ್ರಿ ಅಂತ ಹೇಳ್ತೀರ. ನೀವು ಹೇಳಲೇಬೇಕು'' ಎಂದರು.

''ಸಾರಿ... ನಾನು ಹೇಳಲಾರೆ.''

''ಯಾಕೆ... ವೈ ಮೇಡಂ.''

ಅವಳು ಚಡಪಡಿಸುತ್ತಾ ''ಯಾಕೆ ಅಂತ ನಂಗೆ ಗೊತ್ತಿಲ್ಲ'' ಎಂದಳು.

''ಕಳ್ಳತನ ಮಾಡಿರೋದು ನೀವು. ನಿಮಗೆ ಗೊತ್ತಿಲ್ಲದಿರಲು ಹೇಗೆ ಸಾಧ್ಯ?''

ಅವಳು ಸಿಡುಕುತ್ತಾ ''ಜಾಸ್ತಿ ಪ್ರಶ್ನೆ ಕೇಳಿ ನನ್ನ ಡಿಸ್ಟರ್ಬ್ ಮಾಡ್ಬೇಡಿ. ನಿಮಗೆ ಯಾವ ರೀತಿ ಕಾಂಪನ್ ಸೇಟ್ ಮಾಡ್ಬೇಕು ಅಂತ ಹೇಳಿ. ಎಷ್ಟು ಹಣ ಕೊಡ್ಬೇಕು'' ಎಂದಳು.

ನಮಗೆ ಹಣ ಬೇಡ ಮೇಡಂ. ನಮ್ಮ ಶೋ ರೂಂ ಮತ್ತು ಕಂಪನಿ ಪ್ರಾಡೆಕ್ಟ್ ಬಗ್ಗೆ ಫ್ರೀಯಾಗಿ ಆ್ಯಡ್ ಕೊಡಿ.''

ಅವಳು ಕೂಡಲೇ ಉತ್ತರಿಸಲಿಲ್ಲ. ಅವಳು ಕಂಪನಿ ಪ್ರಾಡಕ್ಟ್‌ಗಳ ಜಾಹೀರಾತು ನೀಡಲು ಕಡಿಮೆ ಅಂದರೂ ಐವತ್ತರಿಂದ ಎಂಭತ್ತು ಲಕ್ಷದತನಕ ಡಿಮ್ಯಾಂಡ್ ಮಾಡಿ ತಗೋತಾ ಇದ್ದಳು.

ಗ್ರೇಟ್ ಲಾಸ್.

ಅವಳು ತನ್ನನ್ನು ತಾನು ಪ್ರಶ್ನೆ ಮಾಡಿಕೊಂಡಳು.

ನಾನು ಹೀಗ್ಯಾಕೆ ಮಾಡ್ದೆ?

ಒಂದು ವಾರ ಕಳೆಯಿತು.

ಈ ಸಿನಿಮಾ ನಟಿ, ಆಡಳಿತ ಪಕ್ಷದ ಪರವಾಗಿ ಕೆಲವು ಅಭ್ಯರ್ಥಿಗಳ ಜೊತೆ ಚುನಾವಣೆಯ ಪ್ರಚಾರ ಮಾಡಲು ಹೊರಟಳು.

ಆಡಳಿತ ಪಕ್ಷದಿಂದ ಮೇಲೆ ಪ್ರಚಾರ ಅದ್ದೂರಿಯಾಗಿರುತ್ತದೆ. ಸಚಿವರುಗಳು ಮತ್ತು ಶಾಸಕರುಗಳು ಸೇರಿದ್ದರು.

ರಾಜ್ಯದ ಮುಖ್ಯಮಂತ್ರಿಗಳು ಭಾಷಣ ಮಾಡುತ್ತಿದ್ದಾಗ ಅವರ ಗೋಲ್ಡ್‌ಫ್ರೇಮ್ ವಾಚ್ ಸಡಿಲಗೊಂಡಿದ್ದರಿಂದ, ಕೈಯಿಂದ ಕಳಚಿ ಟೇಬಲ್ ಮೇಲೆ ಇಟ್ಟರು.

ಈ ಸಿನಿಮಾ ನಟಿ ನೋಡಿದಳು.

ಆ ಕ್ಷಣಗಳಲ್ಲಿ ಬದಲಾದಳು.

ಅಂತರ್ಯದ ಪ್ರಚೋದನೆಯಾಯಿತು.

ಸರ್ರನೆ ಕೈ ಸರಿಯಿತು.

ಫಂಕ್ಷನ್‌ಗೆ ಅಂತ ಟೇಂಬಲ್‌ಅನ್ನು ರೆಡಿ ಮಾಡಿದ್ದರು. ಟೇಬಲ್ ಮೇಲಿದ್ದ ವಾಚ್‌ಅನ್ನು ಸರ್ರನೆ ಎಳೆದು ವ್ಯಾನಿಟಿ ಬ್ಯಾಗಿನೊಳಗೆ ಹಾಕಿಕೊಂಡಳು.

ಇವಳ ಸರದಿ ಬಂದಾಗ ಆಡಳಿತ ಪಕ್ಷದ ಅಭ್ಯರ್ಥಿಯ ಪರವಾಗಿ ಮಾತಾಡಿದಳು.

ಪ್ರಚಂಡ ಕರತಾಡನವಾಯಿತು.

ಪಕ್ಷ ಮತ್ತು ಅಭ್ಯರ್ಥಿಯನ್ನು ಮರೆತು ಈ ಟಾಪ್ ಹೀರೋಯಿನ್ ಪರವಾಗಿ ಜೈಕಾರ ಕೂಗುತ್ತಾ ಚಪ್ಪಾಳೆ ತಟ್ಟಿದರು ಮತ್ತು ಕೆಲವರು ವಿಶಲ್ ಹಾಕಿದರು.

ಮುಖ್ಯಮಂತ್ರಿಗಳ ಪಿ.ಎ. ಹತ್ತಿರ ಬಂದನು. ಸಾಹೇಬರು ಹುಡುಕಾಡುತ್ತಿರುವುದನ್ನು ಕಂಡು ''ನಿಮ್ಮ ವಾಚ್ ಕಳ್ಳ ಯಾರು ಅಂತ ಗೊತ್ತಾಯಿತು.''

''ಯಾರು... ಯಾರದು?'

ವೇದಿಕೆಯ ಮೇಲೆ ಆರಾಮವಾಗಿ ಕುಳಿತಿದ್ದ ಸಿನಿಮಾ ಹೀರೋಯಿನ್ ಕಡೆ ಕೈ ತೋರಿಸುತ್ತಾ ಪಿಸುಗುಟ್ಟಿದನು.

''ಏ... ತಮಾಷೆ ಮಾಡ್ತೀಯ?''

''ಬೇಕಾದ್ರೆ ಅವರ ವ್ಯಾನಿಟಿ ಬ್ಯಾಗ್ ಚೆಕ್ ಮಾಡಿ. ಬೇಕಾದರೆ ವೀಡಿಯೋ ಕ್ಯಾಮರಾ ಚೆಕ್ ಮಾಡಿ ತೋರಿಸಿದರಾಯಿತು. ಆದರೆ ಇದು ನಿಜ.''

ಮುಖ್ಯಮಂತ್ರಿಗಳು ''ಕೇವಲ ಒಂದು ವಾಚ್ ಗೋಸ್ಕರ ಆ ಟಾಪ್ ಹೀರೋಯಿನ್‌ಗೆ ಅವಮಾನ ಮಾಡಬಾರದು.''

''ಬೇಕಾದ್ರೆ ನೀವು ಪರ್ಸನಲ್ ಆಗಿ ಮಾತಾಡಿ ಸಾರ್.''

ಮುಖ್ಯಮಂತ್ರಿಗಳಿಗೆ ಇದು ಸರಿ ಅಂತ ಅನಿಸಿದ್ದರಿಂದ ಕಾರ್ಯಕ್ರಮ ಮುಗಿದ ಮೇಲೆ ಅವಳ ಹತ್ತಿರ ಬಂದರು. ಆದರೆ ಈ ಸಿನಿಮಾ ನಟಿಯನ್ನು ಮೀಟ್ ಮಾಡಲು ಮತ್ತು ಇಂಟರ್‌ವ್ಯೂ ಮಾಡಲು ತುಂಬಾ ಮಂದಿ ಸ್ಟೇಜ್ ಮೇಲೆ ಬಂದರು. ಹಾಗಾಗಿ ಆಕೆಯನ್ನು ಇದರ ಬಗ್ಗೆ ಪ್ರಶ್ನೆ ಮಾಡಲು ಆಗಲಿಲ್ಲ.

ಬಾಂಬೆಯಲ್ಲಿರುವ ಕ್ಲಾಸ್ ವನ್ ಅಪಾರ್ಟ್‌ಮೆಂಟ್‌ನ ಬೆಡ್‌ರೂಮಿನಲ್ಲಿದ್ದಾಳೆ ಈ ಹೀರೋಯಿನ್.

ಅವಳು ಅಂತರ್ಮುಖಿಯಾಗಿದ್ದಾಳೆ.

ಭಾವುಕತೆ ಪರಾಕಾಷ್ಠೆ ತಲುಪಿದೆ.

ಅವಳೀಗ ವ್ಯಾನಿಟಿ ಬ್ಯಾಗಿನಿಂದ ಗೋಲ್ಡ್ ಫ್ರೇಂ ವಾಚ್ ಅನ್ನು ತೆಗೆದಳು. ಹಿಡಿದೆತ್ತಿ ಮುಖದ ತುಂಬಾ ಸವರಿಕೊಂಡಳು.

ಉದ್ವೇಗ, ಉದ್ರೇಕದಿಂದ ಅವಳು ಸಣ್ಣಗೆ ನಡುಗುತ್ತಿದ್ದಾಳೆ.

ಶರೀರ ಬೆವರಾಡುತ್ತಿದೆ.

ಹವಾ ನಿಯಂತ್ರಣ ಕೊಠಡಿಯಲ್ಲಿ ಸಹ ಅವಳು ಬೆವರುತ್ತಿದ್ದಾಳೆ.

ಕದ್ದು ತಂದಿರುವ ವಾಚ್‌ಅನ್ನು ನೋಡಿ ಖುಷಿ ಪಡುತ್ತಿದ್ದಾಳೆ.

ಫೋನ್‌ಕಾಲ್ ಬಂದಿತು.

ಆಕೆ ಈಗ ಈ ಅಂತರ್ಯದ ಉನ್ಮಾದ ಲೋಕದಿಂದ ಹೊರಗೆ ಬಂದಳು. ಮಿನಿಸ್ಟರ್ ಪಿ.ಎ. ಫೋನ್ ಮಾಡಿದ್ದರಿಂದ, ಸಾವರಿಸಿಕೊಂಡು ಈಗ ಅಟೆಂಡ್ ಮಾಡಿದಳು.

''ಮೇಡಂ... ಸಾಹೇಬರು ನಿಮ್ಮ ಜೊತೆ ಮಾತಾಡ್ಬೇಕಂತೆ.''

ಅವಳು ಚಡಪಡಿಸುತ್ತಾ ''ಓಕೆ ಫೋನ್ ಲಿಂಕ್ ಮಾಡಿ'' ಎಂದಳು.

ಬಾಂಬೆಯ ಮುಖ್ಯಮಂತ್ರಿಗಳು ಮಾತಾಡುತ್ತಾ ''ಮೇಡಂ... ನೀವು ನನ್ನ ವಾಚ್ ಕದ್ದಿರೋದು ಗೊತ್ತಾಗಿದೆ. ಆದರೆ ನಾನು ಬಹಿರಂಗ ಪಡಿಸೋಲ್ಲ. ನೀವು ಒಪ್ಪಿಕೊಂಡ್ರೆ ಇಂತಹ ನೂರು ವಾಚುಗಳನ್ನು ಕೊಡುಸ್ತೀನಿ. ಅಷ್ಟೇ ಅಲ್ಲ ಇಂತಹ ಸಾವಿರ ವಾಚುಗಳನ್ನು ಖರೀದಿ ಮಾಡಿ ಬೇರೆ ಯವರಿಗೆ ದಾನ ಮಾಡುವ ಶಕ್ತಿಯನ್ನು ಆ ಭಗವಂತ ನಿಮಗೆ ಕೊಟ್ಟಿದ್ದಾನೆ. ಆದರೂ ಸಹ ನೀವು ಈ ರೀತಿ ಯಾಕೆ ಮಾಡಿದ್ರಿ ಅಂತ ಗೊತ್ತಾಗಿಲ್ಲ. ನಾನು ಎಫ್‌ಐಸಿ ತನಿಖೆ ಮಾಡಿಸಿ ತಿಳಿದುಕೊಂಡೆ.''

''ಒಂದು ವರ್ಷದ ಅವಧಿಯಲ್ಲಿ ಬೇರೆ ಬೇರೆ ಹನ್ನೆರಡು ಸಲ ಕಳ್ಳತನ ಮಾಡಿದ್ದೀರ. ನನ್ನದೊಂದು ಸಲಹೆ ಹೇಳಲೆ?''

ಅವಳು ಕಷ್ಟದಿಂದ ಮಾತಾಡಿದಳು.

''ಹೇಳಿ... ಹೇಳಿ ಸಾರ್.''

''ನೀವು ಯಾರಾದರೂ ಒಳ್ಳೆಯ ಸೈಕಿಯಾರ್ಟಿಸ್ಟ್ ಹತ್ತಿರ ಟ್ರೀಟ್‌ಮೆಂಟ್ ತಗೊಂಡ್ರೆ... ಎಂದು ಹೇಳುತ್ತಿರುವಾಗಲೇ ಆ ನಟಿ ಫೋನ್ ಆಫ್ ಮಾಡಿದ್ದಳು.

ನಂತರ ಏನಾಯಿತು?

☞10

# ರೌಡಿಯಿಂದಲೇ ಹತನಾದ ರೌಡಿ ವಿಶ್ವನಾಥ!


ವಿಶ್ವನಾಥ ಬದುಕಿದ್ದಾಗ

**ರೌಡಿ ರೌಡಿಗಳಿಂದ ಕೊಲೆಯಾಗುವುದು ಸಾಮಾನ್ಯ ಮುಂಬೈಯಲ್ಲಿ ಇಂಥಾ ಘಟನೆಗಳು ನಡೆದು ಹೋದ ಉದಾಹರಣೆಗಳಿವೆ. ಕಲಬುರಗಿಯಲ್ಲಿಯೇ ರೌಡಿ ಭೈರಾಮಡಗಿ ರವಿ ಎಂಬಾತನು ರೌಡಿ ಸೀನ್ಯಾ ಎಂಬಾತನಿಂದ ಕೊಲೆಯಾಗಿ ಹೋಗಿರುವ ಘಟನೆ ಕೆಲ ವರ್ಷಗಳಿಂದ ನಡೆದು ಹೋದದ್ದು 'ಪೊಲೀಸ್ ನ್ಯೂಸ್' ಪತ್ರಿಕೆಯಲ್ಲಿ ವರದಿಯಾಗಿದ್ದು ಇದೆ.**


ಪ್ರಮುಕ ಆರೋಪಿ ಲಕ್ಷ್ಮಣ ಪೂಜಾರಿ

**ಕಲಬುರಗಿ**

✍ಬಿ.ವಿ. ಕುಲಕರ್ಣಿ

ಆಳಂದ ತಾಲ್ಲೂಕಿನ ಪಡಸಾವಳಗಿ ಗ್ರಾಮದ ವಿಶ್ವನಾಥ ತಂದೆ ಕಲ್ಯಾಣಿ ಜಮಾದಾರ (50) ಎಂಬಾತನು ಒಬ್ಬ ರೌಡಿ. ಈತನ ಮೇಲೆ ಸಧ್ಯ ಎಂಟು ಪ್ರಕರಣಗಳಿವೆ. ಲಕ್ಷ್ಮಣ ತಂದೆ ಲಕ್ಕಪ್ಪ ಪೂಜಾರಿ (38) ಆಳಂದ ತಾಲ್ಲೂಕಿನ ಹಿತ್ತಲ ಶಿರೂರ ಗ್ರಾಮದ ಇವನೊಬ್ಬ ರೌಡಿ. ಇಬ್ಬರ ನಡುವೆ ಹಣದ ವಿಷಯಕ್ಕಾಗಿ ನಡೆದ ಜಗಳದಲ್ಲಿ ಲಕ್ಷ್ಮಣ ಪೂಜಾರಿಯು ವಿಶ್ವನಾಥ ಜಮಾದರ ಮಾಜಿ ಗ್ರಾಮ ಪಂಚಾಯತ್ ಸದಸ್ಯ. ಇವನನ್ನು ಹಾಡುಹಗಲೇ ಬೈಕ್ ಮೇಲೆ ಹೋಗುತ್ತಿರುವಾಗ ಪಿಸ್ತೂಲ್‌ನಿಂದ ಫೈರ್ ಮಾಡಿ ಕೊಲೆ ಮಾಡಿರುವ ಘಟನೆ ಆಳಂದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದು ಹೋಗಿದೆ.


ಕೊಲೆಯಾದ ವಿಶ್ವನಾಥ


ಕೆಲ ವರ್ಷಗಳ ಹಿಂದೆ ಲಕ್ಷ್ಮಣ ಪೂಜಾರಿ ವಿಶ್ವನಾಥ ಜಮಾದಾರನಿಗೆ ಐದು ಲಕ್ಷ ರೂ.ಗಳ ಸುಪಾರಿ ಕೊಟ್ಟಿದ್ದನಂತೆ. ತನ್ನ ವೈರಿಯನ್ನು ಹತ್ಯೆ ಮಾಡಲು ಹೇಳಿದನಂತೆ ಅದೇ ರೀತಿ ರೌಡಿ ವಿಶ್ವನಾಥನು ಈ ಕೆಲಸ ಮುಗಿಸಿದನಂತೆ. ಆದರೆ ಈ ಕೆಲಸ ಮುಗಿದು ಹಲವಾರು ವರ್ಷ ಗತಿಸಿ ಹೋಗಿದೆ. ಲಕ್ಷ್ಮಣನು ವಿಶ್ವನಾಥನಿಗೆ ಹಣ ಕೊಡದೇ ಇದ್ದ ಕಾರಣ ವಿಶ್ವನಾಥನು ಲಕ್ಷ್ಮಣನನ್ನು ಪೀಡಿಸತೊಡಗಿದ. ನನಗೆ ಬಡ್ಡಿ ಸಮೇತ ಹತ್ತು ಲಕ್ಷ ನೀಡಬೇಕು. ಇಲ್ಲವಾದರೆ ನಿನ್ನದು ನೆಟ್ಟಗಿರುವುದಿಲ್ಲ. ಹೀಗೆ ಆವಾಜ್ ಹಾಕತೊಡಗಿದ. ವಿಶ್ವನಾಥನ ಕತೆ ಮುಗಿಸಬೇಕೆಂದು ಹೊಂಚು ಹಾಕುತ್ತಿದ್ದ ಲಕ್ಷ್ಮಣ ಗುಂಡು ಹಾರಿಸಿ ವಿಶ್ವನಾಥನನ್ನು ಕೊಲೆ ಮಾಡಿಯೇ ಬಿಟ್ಟ.

ಆದರೆ ಪೊಲೀಸ್ ಠಾಣೆಯ ಎಫ್‌ಐಆರ್‌ನಲ್ಲಿ ಈ ವಿಷಯ ಉಲ್ಲೇಖಿಸಿಲ್ಲ. ಮೃತ ವಿಶ್ವನಾಥನ ಹೆಂಡತಿ ಶಿವಲೀಲಾ ಫಿರ್ಯಾದಿದಾರಳಾಗಿ ಠಾಣೆಯಲ್ಲಿ ಹೇಳಿಕೆ ನೀಡಿದ್ದೇ ಬೇರೆ ಇದೆ. ಗ್ರಾಮ ಪಂಚಾಯತ್ ಪಿಡಿಓ ದಶರಥ ಪಾತ್ರೆ ನಿರಗುದಿ ಮತ್ತು ಲಕ್ಷ್ಮಣ ಪೂಜಾರಿ ಹಿತ್ತಲ ಶಿರೂರ ವೈರತ್ವ ಬೆಳೆಸಿ ಗ್ರಾಮ ಪಂಚಾಯತ್ ಕೆಲಸ ಸಂಬಂಧ ನನ್ನ ಗಂಡನನ್ನು ಬಂದೂಕಿನಿಂದ ಗುಂಡು ಹಾರಿಸಿ ಕೊಲೆ ಮಾಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾಳೆ.

**ಘಟನೆಯ ವಿವರ**

ಫಿರ್ಯಾದಶಿ ಶಿವಲೀಲಾ ನೀಡಿದ ಹೇಳಿಕೆ ನನಗೆ ಕಲ್ಪನಾ, ಕಲ್ಯಾಣಿ, ಮಲ್ಲಿಕಾರ್ಜುನ ಎಂಬ ಮೂರು ಜನ ಮಕ್ಕಳಿದ್ದು, ನನ್ನ ಮಗ ಕಲ್ಯಾಣಿಯು ಆಳಂದ ಪಟ್ಟಣದ ಆದರ್ಶ ಶಾಲೆಯಲ್ಲಿ ಓದುತ್ತಿದ್ದು, ಶಾಲೆಯ ಫೀಸ್ ಕಟ್ಟಬೇಕಾಗಿತ್ತು. ಅದಕ್ಕಾಗಿ ದಿನಾಂಕ 13-9-2024ರಂದು ಬೆಳಿಗ್ಗೆ 10 ಗಂಟೆಗೆ ನಮ್ಮದೇ ಆದ ಮೋಟಾರ್ ಸೈಕಲ್ (ನಂ. ಎಂಹೆಚ್-13 ಬಿಜಿ-4634) ತೆಗೆದುಕೊಂಡು ಮಗ ಕಲ್ಯಾಣಿಯನ್ನು ಅದರ ಮೇಲೆ ಕುಳ್ಳಿರಿಸಿಕೊಂಡು ಆಳಂದ ಪಟ್ಟಣಕ್ಕೆ ಹೋಗಿದ್ದು ಇರುತ್ತದೆ. ನಾನು ಕೆಲಸ ಸಂಬಂಧ ಹೊಲಕ್ಕೆ ಹೋಗಿದ್ದೆ. ಮಧ್ಯಾಹ್ನ 3 ಗಂಟೆ ಸುಮಾರಿಗೆ ಮನೆಗೆ ಬಂದಾಗ ನಮ್ಮ ಭಾವನ ಮಗಳು ಭಾಗ್ಯಶ್ರೀ ತಿಳಿಸಿದ್ದೇನೆಂದರೆ, ನನ್ನ ಗಂಡ ವಿಶ್ವನಾಥನಿಗೆ ಶಾಖಾಪೂರ ಮತ್ತು ಜಿಡಗಾ ಕಮಾನ ಮಧ್ಯರಸ್ತೆಯಲ್ಲಿ ಹೊಡೆದು ಹಾಕಿದ್ದಾರೆ ಎಂದು ಫೋನ್ ಮುಖಾಂತರ ತಿಳಿದು ಬಂದಿದೆ ಎಂದು ಹೇಳಿರುತ್ತಾಳೆ. ಇದರಿಂದ ಗಾಬರಿಗೊಂಡು ನಾನು ಮತ್ತು ಭಾವ ಲಕ್ಷ್ಮಣ, ನಾದಿನಿ ಸುಂದರಾಬಾಯಿ ಕೂಡಿಕೊಂಡು ಖಾನಾಪೂರ ಪಾಟಿಗೆ ಹೋಗಿ ನಂತರ ಆಳಂದ ಹೋಗುವ ರಸ್ತೆ ಜಮಗಾ (ಜೆ) ಸೀಮಾಂತರದ ಮಲ್ಲಿನಾಥ ಕಾಳಾಬಂದರಗಿ ಇವರ ಹೊಲದ ಹತ್ತಿರ ರಸ್ತೆ ಪಕ್ಕದಲ್ಲಿ ನನ್ನ ಗಂಡನ ಮೃತದೇಹ ಮತ್ತು ಮೋಟಾರ್ ಸೈಕಲ್ ಬಿದ್ದಿದ್ದು ಕಂಡೆ. ಕೊಲೆಯ ಹಿಂದೆ ದಶರಥ ಪಿಡಿಓ ನಿರಗುಡಿ ಮತ್ತು ಲಕ್ಷ್ಮಣ ಪೂಜಾರಿ ಹಿತ್ತಲ ಶಿರೂರ ಇವರು ಇದ್ದು ಸುಮಾರು ವರ್ಷಗಳಿಂದ ನನ್ನ ಗಂಡನೊಂದಿಗೆ ವೈರತ್ವ ವಿದ್ದು ಗ್ರಾಮ ಪಂಚಾಯತಿ ಕೆಲಸದಲ್ಲಿ ವೈರತ್ವ ಬೆಳೆದಿದೆ. ನನ್ನ ಗಂಡ ಜನರ ಕೆಲಸ ಮಾಡಿಕೊಡುತ್ತಿದ್ದ ಪಿಡಿಓಗೆ ಹಣ ತಿನ್ನಲು ಬಿಡುತ್ತಿರಲಿಲ್ಲ. ಹೀಗಾಗಿ ಕೊಲೆ ಮಾಡಿರುತ್ತಾರೆ ಎಂದು ಮೃತನ ಹೆಂಡತಿ ಕೊಟ್ಟ ದೂರಿನನ್ವಯ ಠಾಣೆಯ ಗುನ್ನೆ ನಂ. 184/2024 ಕಲಂ 103 ಸಂಗಡ 3(5) ಬಿಎನ್‌ಎಸ್ ಮತ್ತು ಕಲಂ 25, 26 ಆರ್ಮ್ಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಸಿಪಿಐ ಪ್ರಕಾಶ್ ಯಾತನೂರರವರು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಳಂದ ಉಪವಿಭಾಗದ ಡಿವೈಎಸ್ಪಿ ಗೋಪಿ ಬಿ.ಆರ್., ಜಿಲ್ಲಾ ಎಸ್ಪಿ ಅಡ್ಡೂರ ಶ್ರೀನಿವಾಸಲು, ಅಪರ ಎಸ್ಪಿ ಶ್ರೀನಿಧಿ ಭೇಟಿ ನೀಡಿ ತಕ್ಷಣ ಆರೋಪಿಗಳ ಹೆಡೆಮುರಿಕಟ್ಟಬೇಕೆಂದು ಆದೇಶ ನೀಡಿದರು.


ಎಸ್ಪಿ ಅಡ್ಡೂರ ಶ್ರೀನಿವಾಸಲು


ಸಿಪಿಐ ಪ್ರಕಾಶ್ ಯಾತನೂರ


ಪಿಎಸ್‌ಐ ಇಂದುಮತಿ

**ಆರೋಪಿಗಳ ಪತ್ತೆಗೆ ತಂಡ ರಚನೆ**

ಪ್ರಮುಖ ಆರೋಪಿ ಲಕ್ಷ್ಮಣ ಪೂಜಾರಿ ಸಹಿತ ಎಂಟು ಜನರ ಹೆಸರು ಉಲ್ಲೇಖವಿದೆ. ರೌಡಿ ಲಕ್ಷ್ಮಣ ಪೂಜಾರಿಗೆ ಬಂಧಿಸಲು ಪೊಲೀಸ್ ಇಲಾಖೆಯಿಂದ ಮೂರು ತಂಡ ರಚಿಸಲಾಯಿತು. ತಂಡ 1ರಲ್ಲಿ ಆಳಂದ ಸಿಪಿಐ ಪ್ರಕಾಶ್ ಯಾತನೂರು, ಹೆಚ್‌ಸಿಗಳಾದ ಸಿದ್ಧರಾಮ, ಮಾಹೆ ಬೂಬಶೇಖ, ಪಿಸಿ ಮಲ್ಲಿಕಾರ್ಜುನ. ಎರಡನೇ ತಂಡ ಫಜಲ್‌ಪೂರ ಠಾಣೆಯ ಪಿಎಸ್‌ಐ ಸೋಮಲಿಂಗ, ಹೆಚ್‌ಸಿ ಕಾಶಿನಾಥ, ಪಿಸಿಗಳಾದ ವಿಶ್ವನಾಥ, ಯಲಗೊಂಡ. ಮತ್ತು ಮೂರನೇ ತಂಡ ನಿಂಬರ್ಗಾ ಪೊಲೀಸ್ ಠಾಣೆಯ ಪಿಎಸ್‌ಐ ಇಂದುಮತಿ, ಹೆಚ್‌ಸಿ ಲಕ್ಷ್ಮೀಪುತ್ರ, ಪಿಸಿಗಳಾದ ಗುರುಲಿಂಗಯ್ಯ, ಕಲ್ಯಾಣಿ ಹೀಗೆ ತಂಡ ರಚಿಸಿ ಆರೋಪಿ ರೌಡಿ ಲಕ್ಷ್ಮಣ ಪೂಜಾರಿ ಹೆಡೆಮುರಿಕಟ್ಟಲು ಸಿದ್ಧತೆ ಮಾಡಿಕೊಳ್ಳಲಾಯಿತು.

**ಕಾಲಿಗೆ ಗುಂಡು ಹೊಡೆದು ಬಂಧನ**

ದಿನಾಂಕ 21-9-2024ರಂದು ಬೆಳಗಿನ ಜಾವ 4.30 ಗಂಟೆಗೆ ನಿಂಬರ್ಗಾ ಠಾಣೆಯ ಪಿಎಸ್‌ಐ ಇಂದುಮತಿಯವರು ಸಿಬ್ಬಂದಿ ಸಮೇತ ಆರೋಪಿ ಲಕ್ಷ್ಮಣ ಪೂಜಾರಿ ಬಗ್ಗೆ ಮಾಹಿತಿ ಕಲೆ ಹಾಕುತ್ತಿರುವಾಗ ಪೊಲೀಸ್ ಬಾತ್ಮೀದಾರರಿಂದ ಖಚಿತ ಮಾಹಿತಿ ಸಿಕ್ಕಿತು. ಪ್ರಮುಖ ಆರೋಪಿ ಲಕ್ಷ್ಮಣ ತಂದೆ ಲಕ್ಕಪ್ಪ ಪೂಜಾರಿ ನಿಂಬರ್ಗಾ ಪೊಲೀಸ್ ಠಾಣೆಯ ಸರಹದ್ದಿನಲ್ಲಿರುವ ಮಾಡಿಯಾಳ ಗ್ರಾಮದಿಂದ ಕುಲಾಲಿ ಗ್ರಾಮಕ್ಕೆ ಹೋಗುವ ರಸ್ತೆ ಹತ್ತಿರ ಇರುವ ಶ್ರೀ ಮಲ್ಲಯ್ಯಮುತ್ಯ ಗುಂಪಾ ಹತ್ತಿರ ನಿರ್ಜನ ಪ್ರದೇಶದಲ್ಲಿ ಇರುವುದು ಖಚಿತಪಡಿಸಿಕೊಂಡು ಇಲಾಖೆಯ ಮೇಲಾಧಿಕಾರಿಗಳಿಗೆ ಫೋನ್ ಮುಖಾಂತರ

☞10


ಆರೋಪಿಗಳಾದ ರವಿ ಅ|| ರವೀಂದ್ರ, ಹಣಮಂತ, ಬಸವರಾಜ, ಪ್ರಭಣ್ಣ ಅ|| ಪರಬಣ್ಣ ಹಾಗೂ ಗುರುಲಿಂಗಪ್ಪ

**ಯೋಗ ಶಿಕ್ಷಕಿಯೊಬ್ಬಳು ಗಂಡನ ಸ್ನೇಹಿತನೊಂದಿಗೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿರುವ ಬಗ್ಗೆ ಆತನ ಪತ್ನಿಗೆ ಗೊತ್ತಾಗಿ ಅವರಿಬ್ಬರನ್ನು ದೂರ ಮಾಡಲು ನೋಡುತ್ತಾಳೆ. ಅದು ಸಾಧ್ಯವಾಗದಿದ್ದಾಗ, ಯೋಗ ಶಿಕ್ಷಕಿ ಕೊಲೆಗೆ ಖಾಸಗಿ ಡಿಟೆಕ್ಟೀವ್ ಏಜೆನ್ಸಿಗೆ 4 ಲಕ್ಷ ಸುಫಾರಿ ನೀಡುತ್ತಾಳೆ. ಸುಫಾರಿ ಕಿಲ್ಲರ್ ಯೋಗ ಶಿಕ್ಷಕಿಯನ್ನು ಕಿಡ್ನಾಪ್ ಮಾಡಿ ಕೊಲೆಗೆ ಮುನ್ನ ಆಕೆಯನ್ನು ಬೆತ್ತಲೆಗೊಳಿಸಿ, ಅತ್ಯಾಚಾರಕ್ಕೆ ಪ್ರಯತ್ನಿಸಿದ ನಂತರ ಕತ್ತು ಹಿಸುಕಿ ಸಾಯಿಸಿ ಶವವನ್ನು ಹೂತು ಹಾಕಿ ಅಲ್ಲಿಂದ ಪರಾರಿಯಾಗುತ್ತಾರೆ. ಸತ್ತು ಸಮಾಧಿ ಸೇರಿದ್ದ ಯೋಗ ಶಿಕ್ಷಕಿ ಕಲಿತಿದ್ದ ಪ್ರಾಣಾಯಾಮದಿಂದ ಜೀವಂತವಾಗಿ ಎದ್ದು ಬಂದು, ಪೊಲೀಸರಿಗೆ ದೂರು ನೀಡುತ್ತಾರೆ. ತನಿಖೆ ಕೈಗೊಂಡ ಶಿಡ್ಲಘಟ್ಟ ಗ್ರಾಮಾಂತರ ಠಾಣೆ ಪೊಲೀಸರು, ಕೊಲೆಗೆ ಸಂಚು ರೂಪಿಸಿದ್ದ ಮಹಿಳೆ ಸೇರಿದಂತೆ ಐದು ಜನ ಸುಫಾರಿ ಕಿಡ್ನಾಪರ್ಸ್‌ರನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ.**


ಪ್ರಮುಖ ಆರೋಪಿ ಸತೀಶ್ ರೆಡ್ಡಿ

# ಸಮಾಧಿಯಿಂದ ಜೀವಂತ ಎದ್ದು ಬಂದ ಯೋಗ ಶಿಕ್ಷಕಿ ಐದು ಜನ ಸುಫಾರಿ ಕಿಡ್ನಾಪರ್ಸ್ ಅರೆಸ್ಟ್!

**ಚಿಕ್ಕಬಳ್ಳಾಪುರ**
✍ ಕೋ.ನಾ. ಪ್ರಭಾಕರ್


ಸಾವು ಗೆದ್ದು ಬಂದ ಯೋಗ ಶಿಕ್ಷಕಿ ಅರ್ಚನಾ

ಬೆಂಗಳೂರಿನ ಕೆ.ಆರ್. ಪುರಂನಲ್ಲಿ ವಾಸವಿರುವ ವಿಶ್ವನಾಥ್ ಮತ್ತು ಚಿಕ್ಕಬಾಣಾವರದಲ್ಲಿ ವಾಸವಿರುವ ಸಂತೋಷ್‌ಕುಮಾರ್ ಇಬ್ಬರು ಹೆಚ್‌ಎಎಲ್‌ನ ಉದ್ಯೋಗಿಗಳಾಗಿದ್ದು, ಕೆಲಸ ಮಾಡುವ ಜಾಗದಲ್ಲಿ ಒಂದೇ ಕಡೆ ಸಹೋದ್ಯೋಗಿಗಳಾಗಿರುವ ಇವರು ಹೊರಗಡೆ ಒಳ್ಳೆಯ ಸ್ನೇಹಿತರಾಗಿರುತ್ತಾರೆ. ಇವರ ಪತ್ನಿಯರಾದ ಯೋಗ ಶಿಕ್ಷಕಿ ಅರ್ಚನ ಹಾಗೂ ಮನೆಯಲ್ಲಿಯೇ ಕೆಲಸ ಮಾಡಿಕೊಂಡಿರುವ ಬಿಂದು ಸಹ ಸ್ನೇಹಿತೆಯರಾಗಿರುತ್ತಾರೆ. ಈ ಎರಡು ಕುಟುಂಬಗಳ ಸ್ನೇಹ, ಪ್ರೀತಿ ಎಷ್ಟು ಬೆಳೆದಿತ್ತೇದೆಂದರೆ ಹಬ್ಬ-ಹರಿದಿನಗಳಲ್ಲಿ ಪರಸ್ಪರ ಒಂದು ಕಡೆ ಸೇರಿ ಹಬ್ಬವನ್ನು ಆಚರಿಸುತ್ತಿದ್ದರು. ಸಂತೋಷ್‌ಕುಮಾರ್ ಕಷ್ಟವೆಂದರೆ ಸಾಕು ವಿಶ್ವನಾಥ್ ಅವರ ಹೆಗಲಿಗೆ ಹೆಗಲು ಕೊಡುತ್ತಿದ್ದರು. ಅದೇ ರೀತಿ ಸಂತೋಷ್‌ಕುಮಾರ್ ಸಹ ವಿಶ್ವನಾಥ್‌ಗೆ ಅಪಘಾತವಾಗಿ ಸಾವು-ಬದುಕಿನ ನಡುವೆ ಹೋರಾಡುತ್ತಿರುವವರನ್ನು ಸಂತೋಷ್‌ಕುಮಾರ್ ಆಸ್ಪತ್ರೆಗೆ ಸೇರಿಸಿ ಒಂದು ವಾರ ಕಾಲ ಅವರೇ ಖುದ್ದಾಗಿ ಆಸ್ಪತ್ರೆಯಲ್ಲಿಯೇ ಇದ್ದು ಎಲ್ಲಾ ಖರ್ಚು-ವೆಚ್ಚವನ್ನು ನೋಡಿಕೊಂಡಿದ್ದವರು ಗುಣಮುಖರಾದ ನಂತರ ವಿಶ್ವನಾಥ್‌ರವರನ್ನು ಮನೆಗೆ ಕರೆದುಕೊಂಡು ಬಂದು ಪತ್ನಿ ಅರ್ಚನಾರವರಿಗೆ ಅವರ ಗಂಡನನ್ನು ಒಪ್ಪಿಸಿ, ಇನ್ನು ಮುಂದೆ ಇವರ ಯೋಗಕ್ಷೇಮದ ಜವಾಬ್ದಾರಿ ನಿಮ್ಮದೆಂದು ಹೇಳುತ್ತಾರೆ. ಆಗ ವಿಶ್ವನಾತರವರ ಪತ್ನಿ ಅರ್ಚನಾರವರು ನನ್ನ ಗಂಡನನ್ನು ಕಾಪಾಡಿಕೊಂಡು ಬಂದು ನನಗೆ ತಾಳಿಭಾಗ್ಯವನ್ನು ಕೊಟ್ಟಿದ್ದೀರಿ. ನಿಮ್ಮ ಋಣವನ್ನು ಯಾವ ರೀತಿ ತೀರಿಸಬೇಕೆಂದು ಗೊತ್ತಾಗುತ್ತಿಲ್ಲ. ಅದಕ್ಕೆ ವಕಾಶ ಮಾಡಿಕೊಡಿ ಎಂದು ಸಂತೋಷ್‌ಕುಮಾರ್ ಮತ್ತು ಅವರ ಪತ್ನಿ ಬಿಂದುರವರಿಗೆ ಹೇಳುವ ಮೂಲಕ ತನ್ನ ಕೃತಜ್ಞತೆಗಳನ್ನು ತಿಳಿಸಿದರು. ಅದಕ್ಕೆ ಬಿಂದು ನಾವುಗಳು ಒಂದೇ ಮನೆಯವರಿದ್ದಂತೆ. ಅದಕ್ಕೆ ನಮ್ಮಿಬ್ಬರ ನಡುವೆ ಋಣದ ಮಾತನಾಡಬೇಡಿ ಎಂದು ಹೇಳಿದರು. ಸಂತೋಷ್‌ಕುಮಾರ್ ತನ್ನ ಸ್ನೇಹಿತ ವಿಶ್ವಾಥನ ಮನೆಗೆ ಎರಡು-ಮೂರು ದಿನಕ್ಕೊಮ್ಮೆ ಹೋಗಿ ಆರೋಗ್ಯ ವಿಚಾರಿಸಿಕೊಂಡು ಬರುತ್ತಿದ್ದರು. ವಿಶ್ವನಾಥ ಗುಣಮುಖನಾಗಿ ಕೆಲಸಕ್ಕೆ ಹೋದ ನಂತರವು ಸಂತೋಷ್ ಕುಮಾರ್ ಇವರ ಮನೆಗೆ ಹೋಗಿ ಬರುವುದು ಮಾತ್ರ ತಪ್ಪಲಿಲ್ಲ. ಇದರ ನಡುವೆ ವಿಶ್ವನಾಥನ ಪತ್ನಿ ಅರ್ಚನಾ ಮತ್ತು ಸ್ನೇಹಿತ ಸಂತೋಷ್‌ಕುಮಾರ್ ನಡುವೆ ಸಲಿಗೆ ಬೆಳೆದು, ದಿನಕಳೆದಂತೆ ಇವರಿಬ್ಬರು ಅಕ್ರಮ ಸಂಬಂಧವನ್ನು ಬೆಳೆಸಿಕೊಂಡರು. ಇವರಿಬ್ಬರ ನಡುವಿನ ಅಕ್ರಮ ಸಂಬಂಧದ ವಿಚಾರ ವಿಶ್ವನಾಥ್


ಎಸ್ಪಿ ಕುಶಾಲ್ ಚೌಕ್ಸೆ


ಡಿವೈಎಸ್ಪಿ ಮುರುಳೀಧರ



ಪಿಐ ಎಂ. ಶ್ರೀನಿವಾಸ್

ಮತ್ತು ಸಂತೋಷ್‌ಕುಮಾರ್ ಪತ್ನಿ ಬಿಂದುಗೆ ಗೊತ್ತಾಗಿ ಇಬ್ಬರಿಗೂ ಬುದ್ಧಿ ಹೇಳಿದರು. ಪತ್ನಿ ಅರ್ಚನಾಳ ನಡತೆಯಿಂದ ಬೇಸರಗೊಂಡಿದ್ದ ಗಂಡ ವಿಶ್ವನಾಥ್ ನಿನ್ನ ಚಾಳಿಯನ್ನು ಬಿಟ್ಟು, ನ್ಯಾಯವಾಗಿ ನನ್ನ ಜೊತೆ ಸಂಸಾರ ಮಾಡಿಕೊಂಡು ಇರುವುದಾದರೆ ನನ್ನ ಜೊತೆ ಈ ಮನೆಯಲ್ಲಿ ಇರಬಹುದು. ಇಲ್ಲವಾದರೆ ನಿನ್ನ ದಾರಿಯನ್ನು ನೋಡಿಕೊಳ್ಳುವಂತೆ ಹೇಳಿಬಿಟ್ಟರು. ಗಂಡನ ಮಾತಿನಿಂದ ಬೇಸರಗೊಂಡ ಅರ್ಚನಾ ಮನೆ ಬಿಟ್ಟು ಬೆಂಗಳೂರು ನಗರದ ಹೊರವಲಯದಲ್ಲಿರುವ ದೇವನಹಳ್ಳಿ ಸಮೀಪದ ಕಿತ್ತಗನೂರು ಡಿಎಸ್ ಮ್ಯಾಕ್ಸ್‌ಸನ್ ವರ್ಧನ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು. ಯೋಗ ಕಲಿತಿದ್ದ ಅರ್ಚನಾರವರು ಜೀವನೋಪಾಯಕ್ಕಾಗಿ ಅಪಾರ್ಟ್‌ಮೆಂಟ್‌ನ ನಿವಾಸಿಗಳಿಗೆ ಯೋಗ ಕಲಿಸುವ ಶಿಕ್ಷಕರಾಗಿ ಕೆಲಸ ಮಾಡುತ್ತಾ ಒಂಟಿಯಾಗಿ ಜೀವನ ಸಾಗಿಸುತ್ತಿದ್ದರು.

**ಯೋಗ ಕಲಿಯಲು ಬರುತ್ತಿದ್ದವನಿಂದಲೇ ಕಿಡ್ನಾಪ್**

ಬೆಂಗಳೂರಿನ ಜೆ.ಪಿ. ನಗರದ ಕೊತ್ತನೂರು ದಿನ್ನೆಯಲ್ಲಿ ವಾಸವಾಗಿರುವ ಸತೀಶ್‌ಕುಮಾರ್ (40) ಎನ್ನುವವರು ಕಳೆದ ಮೂರು ತಿಂಗಳ ಹಿಂದೆ ಅರ್ಚನಾರವರ ಮನೆಗೆ ಬಂದು ನಾನು ಮಿಲಿಟರಿಯಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿದ್ದು, ಈಗ ಜೆ.ಪಿ. ನಗರದಲ್ಲಿ ಖಾಸಗಿ ಡಿಟೆಕ್ಟೀವ್ ಏಜೆನ್ಸಿಯನ್ನು ನಡೆಸುತ್ತಿದ್ದೇನೆ. ಇದರ ಜೊತೆಗೆ ದೇವನಹಳ್ಳಿ ಸಮೀಪ ನಮ್ಮ ಎಸ್ಟೇಟ್ ಇದ್ದು ಅದರಲ್ಲಿ ಕುದುರೆ ಸವಾರಿ ಮತ್ತು ಗನ್ ಶೂಟಿಂಗ್ ಟ್ರೈನಿಂಗ್ ಕ್ಯಾಂಪ್‌ಗಳನ್ನು ನಡೆಸುತ್ತಿದ್ದೇನೆ. ಮೊನ್ನೆ ಕುದುರೆ ಸವಾರಿ ಮಾಡುವಾಗ ಆಯತಪ್ಪಿ ಕೆಳಗೆ ಬಿದ್ದು ಮೊಣ ಕಾಲಿಗೆ ಏಟಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡೆನು. ಆದರೆ ಇನ್ನು ನೋವು ಕಾಣಿಸುತ್ತಿದೆ. ಯೋಗದಿಂದ ಮೊಣಕಾಲಿನ ನೋವನ್ನು ಕಡಿಮೆ ಮಾಡಿಕೊಳ್ಳಬಹುದೆಂದು ಕೆಲವರು ತಿಳಿಸಿದ್ದರಿಂದ ನಿಮ್ಮನ್ನು ಹುಡುಕಿಕೊಂಡು ಬಂದಿರುವುದಾಗಿ ತಿಳಿಸಿದರು. ಯೋಗ ಕ್ಲಾಸ್‌ಗೆ ದಿನ ಬೆಳಿಗ್ಗೆ ಮತ್ತು ಸಂಜೆ ಬರಬೇಕಾಗಿದ್ದ ಸತೀಶ್ ಕುಮಾರ್ ಪ್ರಾರಂಭದಲ್ಲಿ ಸರಿಯಾಗಿ ಬರುತ್ತಿದ್ದವರು ನಂತರ ವಾರಕ್ಕೆ 2-3 ದಿನ ಮಾತ್ರ ಬಂದು ಹೋಗುತ್ತಿದ್ದರು. ಈ ಬಗ್ಗೆ ಅರ್ಚನಾರವರು ಕೇಳಿದಕ್ಕೆ, ಕೆಲಸದ ಒತ್ತಡದಿಂದ ಬರಲು ಸಾಧ್ಯವಾಗುತ್ತಿಲ್ಲ. ಬಿಡುವು ಮಾಡಿಕೊಂಡು ದಿನವೂ ಬರುವುದಾಗಿ ಹೇಳಿದರು. ಯೋಗ ಕ್ಲಾಸ್‌ಗೆ ಬಂದು ಹೋಗುವಾಗ ಮಹಿಳೆಯರಿಗೆ ರಕ್ಷಣೆಯೇ ಇಲ್ಲದಿರುವ ಕಾಲದಲ್ಲಿ ನಿಮ್ಮನ್ನು ನೀವೇ ರಕ್ಷಿಸಿಕೊಳ್ಳಲು ಗನ್ ಶೂಟಿಂಗ್ ಟ್ರೈನಿಂಗ್ ತೆಗೆದುಕೊಳ್ಳಿ. ನಾನು ನಿಮಗೆ ಒಂದು ವಾರದ ಕಾಲ ಟ್ರೈನಿಂಗ್ ಕೊಡುತ್ತೇನೆಂದು ಹೇಳಿದರು. ಅದಕ್ಕೆ ಅರ್ಚನಾರವರು ಒಂದೆರಡು ದಿನದಲ್ಲಿ ನಿಮ್ಮ ಎಸ್ಟೇಟ್‌ಗೆ ಬರುತ್ತೇನೆ ಗನ್ ಶೂಟಿಂಗ್ ಟ್ರೈನಿಂಗ್ ಕೊಡಿ ಎಂದು ಹೇಳಿದರು.


ಅದರಂತೆ ಅಕ್ಟೋಬರ್ 23ರಂದು ಬೆಳಿಗ್ಗೆ 10.30ರಲ್ಲಿ ಅರ್ಚನಾ ಮನೆಯಲ್ಲಿದ್ದಾಗ ಸತೀಶ್‌ಕುಮಾರ್ ಮತ್ತು ಇತರ ಇಬ್ಬರು ಬಂದು ಗನ್ ಶೂಟಿಂಗ್ ಟ್ರೈನಿಂಗ್‌ಗೋ ಹೋಗೋಣವೆಂದು ಹೇಳಿ ಕರೆದುಕೊಂಡು ಹೋದರು. ಸತೀಶ್‌ಕಮಾರ್ ಜೊತೆ ಕಾರಿನಲ್ಲಿ ಹೋದ ಯೋಗ ಶಿಕ್ಷಕಿ ಅರ್ಚನಾರವರು ಅಕ್ಟೋಬರ್ 24ರಂದು ಬೆಳಿಗ್ಗೆ ಶಿಡ್ಲಘಟ್ಟ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರನ್ನು ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಮತಿ ಶ್ಯಾಮಲಾರವರು ನಿಮ್ಮ ಈ ಸ್ಥಿತಿಗೆ ಕಾರಣರ್‍ಯಾರು ಎಂದು ಕೇಳಲಾಗಿ ಸತೀಶ್ ಕುಮಾರ್ ಎನ್ನುವವರು ನನ್ನ ಬಳಿ ಯೋಗ ಕಲಿಯಲು ಬರುತ್ತಿದ್ದರು. ಅವರ ಎಸ್ಟೇಟ್‌ನಲ್ಲಿ ಗನ್ ಶೂಟಿಂಗ್ ಟ್ರೈನಿಂಗ್ ಕೊಡುತ್ತಾರಂತೆ. ಮಹಿಳೆಯರು ತಮ್ಮ ಆತ್ಮ ರಕ್ಷಣೆಗಾಗಿ ಗನ್ ಶೂಟ್ ಮಾಡುವುದನ್ನು ಕಲಿತಿರಬೇಕು ಅದಕ್ಕೆ ನಮ್ಮ ಟ್ರೈನಿಂಗ್ ಸೆಂಟರ್‌ಗೆ ಬನ್ನಿ ಎಂದು ಕರೆದಿದ್ದರು. ನೆನ್ನೆ ಬೆಳಿಗ್ಗೆ ಕಾರು ಹತ್ತುವವರೆಗೂ ಗನ್ ಶೂಟಿಂಗ್ ಟ್ರೈನಿಂಗ್‌ಗೆ ಕರೆದುಕೊಂಡು ಹೋಗುತ್ತಿದ್ದಾರೆಂದು ತಿಳಿದ್ದಿದೆ. ಆದರೆ ಕಾರಿನ ಬಳಿ ಹೋಗುತ್ತಿದ್ದಂತೆ ಡೋರ್ ತೆಗೆದು ಕಾರಿನೊಳಕ್ಕೆ ತಳ್ಳಿದರು. ಆಗ ಕಾರಿನಲ್ಲಿದ್ದ ಐದು ಜನರಲ್ಲಿ ಒಬ್ಬ ನನ್ನ ಬಾಯಿಗೆ ಬಟ್ಟೆಯನ್ನು ತುರುಕಿದರೆ, ಮತ್ತೊಬ್ಬ ನನ್ನ ಕೈಕಾಲುಗಳನ್ನು ಕಟ್ಟಿ ಹಾಕಿದನು. ನಂತರ ಬೆಂಗಳೂರು ಹೊರವಲಯದ ಬಾಗಲೂರು, ಆವಲಹಳ್ಳಿ ಕಡೆಗಳಲ್ಲಿ ಸುತ್ತಾಡುತ್ತಾ ಇರುವಾಗ ನನ್ನ ಬಟ್ಟೆಗಳನ್ನು ಒಂದೊಂದಾಗಿ ಕಳಚಿ ಅರೆಬೆತ್ತಲೆ ಮಾಡಿದರಲ್ಲದೆ ಎಲ್ಲರೂ ಸೇರಿ ಹಲ್ಲೆ ಮಾಡಿ ದೈಹಿಕವಾಗಿ ಹಿಂಸೆ ನೀಡಿದರು. ಆಗ ನಾನು ಪ್ರಜ್ಞೆ ಕಳೆದುಕೊಂಡೆನು. ರಾತ್ರಿ ನನಗೆ ಪ್ರಜ್ಞೆ ಬಂದಾಗ ಯಾವುದೋ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಕಾರಿನಿಂದ ನನ್ನನ್ನು ಎಳೆದು ನೆಲದ ಮೇಲೆ ಹಾಕಿ ಪಿಸ್ತೂಲನ್ನು ತೋರಿಸಿ ನನ್ನ ಮೈಮೇಲಿದ್ದ ಬಂಗಾರದ ಮಾಂಗಲ್ಯ ಸರ ಮತ್ತು ಕಿವಿ ಓಲೆಗಳನ್ನು ಕಿತ್ತುಕೊಂಡು ಮತ್ತೆ ನನ್ನ ಮೇಲೆ ಹಲ್ಲೆ ಮಾಡಿ ರಕ್ತಗಾಯಪಡಿಸಿ ಮೈಮೇಲೆ ಉಳಿದುಕೊಂಡಿದ್ದ ಬಟ್ಟೆಗಳನ್ನು ಹರಿದು ಹಾಕಿ ಬೆತ್ತಲೆ ಮಾಡಿ, ಅತ್ಯಾಚಾರಕ್ಕೆ ಪ್ರಯತ್ನ ಮಾಡಿದ ಮೇಲೆ ಕಾರಿನಲ್ಲಿದ್ದ ಮೊಬೈಲ್ ಚಾರ್ಜರ್ ವೈರ್‌ನ್ನು ತೆಗೆದುಕೊಂಡು ಬಂದು ಕುತ್ತಿಗೆಗೆ ಬಲವಾಗಿ ಬಿಗಿದು ಸಾಯಿಸಲು ಮುಂದಾದರು. ಈ ಐದು ಜನ ಸೇರಿ ಈ ದಿನ ನನ್ನನ್ನು ಮುಗಿಸದೇ ಬಿಡುವುದಿಲ್ಲ. ಇವರಿಂದ ನನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದು ಯೋಗ ಶಿಕ್ಷಕಿಯಾದ ನಾನು ಅವರು ವೈರ್‌ನಿಂದ ಕುತ್ತಿಗೆಯನ್ನು ಬಿಗಿದಾಗ ಕೈಕಾಲುಗಳನ್ನು ಜಾಡಿಸುತ್ತಾ ಬಾಯಿಯಿಂದ ನಾಲಗೆಯನ್ನು ಹೊರಚಾಚಿ, ಉಸಿರು ಬಿಗಿ ಹಿಡಿದು ಸತ್ತಂತೆ ಇದ್ದುಬಿಟ್ಟೆನು. ಅವರು ಸ್ವಲ್ಪ ಹೊತ್ತಾದ ನಂತರ ಉಸಿರು ಇದೆಯೇ ಇಲ್ಲವೇ ಎಂದು ಪರೀಕ್ಷಿಸಿ ಉಸಿರಾಡುತ್ತಿಲ್ಲ ಸತ್ತು ಹೋಗಿದ್ದಾಳೆಂದು ತಿಳಿದು ಚಿಕ್ಕ ಗುಂಡಿ ತೋಡಿ ದೇಹವನ್ನು ಮಣ್ಣಿನಲ್ಲಿ ಹೂತು ಮಣ್ಣಿನ ಜೊತೆಗೆ ಗಿಡಗೆಂಟೆಗಳ ರಂಬೆ, ಸೊಪ್ಪುಗಳನ್ನು ಹಾಕಿ ಅಲ್ಲಿಂದ ಪರಾರಿಯಾದರು. ನನಗೆ ಜ್ಞಾನ ಬಂದಾಗ ದೂರದಲ್ಲಿ ಕೋಳಿ ಕೂಗುತ್ತಿರುವ ಶಬ್ದ ಕೇಳಿಸುತ್ತಿತ್ತು. ಮೈಮೇಲಿನ ಮಣ್ಣು ಮತ್ತು ಮರದ ರಂಭೆ, ಕೊಂಬೆಗಳನ್ನು ಪಕ್ಕಕ್ಕೆ ಸರಿಸಿ ಸಮಾಧಿಯಿಂದ ಜೀವಂತವಾಗಿ ಹೊರ ಬಂದು ಗಿಡಗಳ ಸೊಪ್ಪನ್ನು ದೇಹಕ್ಕೆ ಸುತ್ತಿಕೊಂಡು ಅಲ್ಲಿಂದ ಸುಮಾರು ದೂರ ಕತ್ತಲಲ್ಲಿ ನಡೆದುಕೊಂಡು ಹೋದಾಗ ದೂರದಲ್ಲೊಂದು ಮನೆ ಕಾಣಿಸಿತು. ಅಲ್ಲಿಗೆ ಹೋಗಿ ಸಹಾಯಕ್ಕಾಗಿ ಮನೆಯವರನ್ನು ಕರೆದೇನು. ಆಗ ಮೆಯಿಂದ ಲೀಲಾ ಎನ್ನುವವರು ಹೊರ ಬಂದು ನನ್ನನ್ನು ನೋಡಿ ಗಾಬರಿಯಾದರಲ್ಲದೆ ಭಯಗೊಂಡು ಮನೆಯವರನ್ನು ಕರೆದರು. ಆಗ ಗಂಡ, ಅತ್ತೆ, ಮಾವ ಸೇರಿದಂತೆ ಮನೆಯವರೆಲ್ಲ ಹೊರ ಬಂದು ನನ್ನ ಸ್ಥಿತಿಯನ್ನು ನೋಡಿ ಮೊದಲಿಗೆ ಸ್ನಾನ ಮಾಡಿ ಬಟ್ಟೆ ಹಾಕಿಕೊಂಡು ಹೊಟ್ಟೆಗೆ ಸ್ವಲ್ಪ ಆಹಾರ ಸೇವಿಸಿದ ನಂತರ ನಿಮ್ಮ ಕಥೆಯನ್ನು ಹೇಳುವಂತೆ ಬಟ್ಟೆ, ಊಟ ಕೊಟ್ಟರು. ಸ್ವಲ್ಪ ಹೊತ್ತು ಚೇತರಿಸಿಕೊಂಡ ನಾನು ಇದು ಯಾವ ಊರು ಎಂದು ಕೇಳಿದಕ್ಕೆ ಶಿಡ್ಲಘಟ್ಟ ತಾಲ್ಲೂಕಿನ ಮುದ್ದಣ್ಣದಿನ್ನೆ ಎಂದು ಹೇಳಿದರು. ಆಗ ನಾನು ನಡೆದ ವಿಚಾರವನ್ನು ತಿಳಿಸಿದ್ದೆನು ನಂತರ ನನ್ನನ್ನು ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಆಸ್ಪತ್ರೆಗೆ ಸೇರಿಸಿದರು ಎಂದು ಹೇಳಿದರಲ್ಲದೆ ಸತೀಶ್‌ಕುಮಾರ್ ಮತ್ತು ಅವರ ಜೊತೆಯಲ್ಲಿದ್ದವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಅರ್ಚನಾರವರು ನೀಡಿದ ಹೇಳಿಕೆ ಹಾಗೂ ದೂರಿನ ಮೇರೆಗೆ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 122/2024 ವಿ/ಎಸ್ 140(1) 109, 309(4) 74, 351(2) ರೆಡ್‌ವಿತ್ (5) ಬಿಎನ್‌ಎಸ್-2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡ ಪಿಎಸ್‌ಐ ಶ್ರೀಮತಿ ಶ್ಯಾಮಲಾರವರು ಮುಂದಿನ ತನಿಖೆಗಾಗಿ ಮೇಲಾಧಿಕಾರಿಗಳಲ್ಲಿ ನಿವೇಧಿಸಿಕೊಂಡರು.


ಆರೋಪಿಗಳಾದ ರಮಣ, ನಾಗೇಂದ್ರ ರೆಡ್ಡಿ, ರವಿಚಂದ್ರ ಹಾಗೂ ಬಿಂದು

**ಯೋಗ ಶಿಕ್ಷಕಿ ಕೊಲೆಗೆ ಸುಫಾರಿ**

ಯೋಗ ಶಿಕ್ಷಕಿ ಅರ್ಚನಾರವರಿಗೆ ಗನ್ ಶೂಟಿಂಗ್ ಟ್ರೈನಿಂಗ್‌ಗೆ ಬರುವಂತೆ ನಂಬಿಸಿ ಕಿಡ್ನಾಪ್ ಮಾಡಿ, ಅತ್ಯಾಚಾರಕ್ಕೆ ಪ್ರಯತ್ನಿಸಿ, ಕತ್ತು ಹಿಸುಕಿ ಸಾಯಿಸಿ ಒಡವೆಗಳೊಂದಿಗೆ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ರಾಜಾ ಇಮಾಮ್ ಖಾಸಿಂರವರ ಸಾರಥ್ಯದಲ್ಲಿ ಡಿವೈಎಸ್ಪಿ ಮುರುಳಿಧರವರ ಮಾರ್ಗದರ್ಶನದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಠಾಣೆಯ ಪಿಐ ಎಂ. ಶ್ರೀನಿವಾಸ್‌ರವರ ನೇತೃತ್ವದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಠಾಣೆಯ ಪಿಎಸ್‌ಐ ಕೆ. ಸತೀಶ್, ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಮತಿ ಶ್ಯಾಮಲಾ, ಬಟ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಪುನೀತ್ ನಂಜರಾಯ್, ಸಿಬ್ಬಂದಿ ವರ್ಗದವರಾದ ಹೆಚ್‌ಸಿಗಳಾದ ಶ್ರೀಮತಿ ಲಕ್ಷ್ಮಿ, ಸಂದೀಪ್‌ಕುಮಾರ್, ಮುರುಳಿಕೃಷ್ಣ, ವಿಶ್ವಾಥ್, ರವೀಂದ್ರ, ನರಸಿಂಹಯ್ಯ, ಮಂಜುನಾಥ್, ಆಂಜನೇಯ, ಮಹೇಶ್, ಪಿಸಿಗಳಾದ ಕೃಷ್ಣಪ್ಪ, ಸಂಪತ್, ವೆಂಕಟೇಶ್, ಸುನಿಲ್‌ಕುಮಾರ್, ಧರಣೇಶ್, ಪ್ರವೀಣ್ ಕುಮಾರ್, ಹರೀಶ್, ಮುತ್ತುರಾಜ್, ಪ್ರತಾಪ್, ಶಶಿಕುಮಾರ್, ವಸಂತ್‌ಕುಮಾರ್, ಸಂತೋಷ್‌ಕುಮಾರ್, ಅಂಬರೀಶ್, ನಾಗೇಶ್, ಮಂಜುನಾತ್, ರವೀಂದ್ರ ಕುಮಾರ್, ಮುನಿಕೃಷ್ಣ ಮುಂತಾದವರು ಸೇರಿದಂತೆ ಮೂರು ಪ್ರತ್ಯೇಕ ತಂಡಗಳನ್ನು ರಚನೆ ಮಾಡಲಾಯಿತು. ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಆಧಾರದ ಮೇಲೆ ಆರೋಪಿಗಳು ಬೆಂಗಳೂರಿನಿಂದ ರಾಯಚೂರು ಮಾರ್ಗವಾಗಿ ಮಂತ್ರಾಲಯಕ್ಕೆ ಹೋಗಿರುವ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡ ಕ್ರೈಂ ತಂಡವು ಆರೋಪಿಗಳಾದ ಎ1 ಆಂಧ್ರಪ್ರದೇಶ ರಾಜ್ಯದ ಅನಂತಪುರಂ ಜಿಲ್ಲೆ ಮಡಕಶಿರ ತಾಲ್ಲೂಕಿನ ಅಮರಾಪುರ ಮಂಡಲಂಗೆ ಸೇರಿದ ಬಸವನಪಲ್ಲಿ ಗ್ರಾಮದ ಜಗದೀಶ್‌ರವರ ಮಗ ಸತೀಶ್‌ಕುಮಾರ್ ಅಲಿಯಾಸ್ ಸತೀಶ್ ರೆಡ್ಡಿ ಉರುಫ್ ರಂಗಸ್ವಾಮಿ (40) ಹಾಲಿ ವಾಸ ಬೆಂಗಳೂರಿನ ಜೆ.ಪಿ. ನಗರದ ಕೊತ್ತನೂರು ದಿನ್ನೆಯಲ್ಲಿ ವಾಸವಾಗಿರುತ್ತಾನೆ. ಎ2 ಆಂಧ್ರಪ್ರದೇಶ ರಾಜ್ಯದ ಅನಂತಪುರಂ ಜಿಲ್ಲೆಯ ಸಿ.ಕೆ. ಪಲ್ಲಿಯ ಬಿ.ಸಿ. ಕಾಲೋನಿಯ ವಾಸಿ ವೆಂಕಟರಾಮುಡುರವರ ಮಗ ರಮಣ ಅಲಿಯಾಸ್ ಮೀಸಾಲಾರಮಣ (34) ಹಾಲಿ ವಾಸ ಬೆಂಗಳೂರಿನ ಪರಪ್ಪನ ಅಗ್ರಹಾರ, ಸಾಯಿ ಲೇಔಟ್‌ನಲ್ಲಿ ವಾಸವಾಗಿರುತ್ತಾನೆ. ಎ3 ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆಯ ನಲ್ಲಚೆರುವು ಮಂಡಲಂ, ಪೆದ್ದಪಲ್ಲಿ ಪೋಸ್ಟ್ ತೆರನ್ನಗಾರ ಪಲ್ಲಿಯ ವಾಸಿ ಶಿವಾರೆಡ್ಡಿರವರ ಮಗ ನಾಗೇಂದ್ರ ರೆಡ್ಡಿ ಅಲಿಯಾಸ್ ಕನುಮ ರೆಡ್ಡಿ (35) ಹಾಲಿ ವಾಸ ಬೆಂಗಳೂರಿನ ಸರ್ಜಾಪುರ ಸಾಯಿ ಲೇಔಟ್ ಗಾರ್ಮೆಂಟ್ಸ್ ಬಳಿ ವಾಸವಾಗಿರುತ್ತಾನೆ. ಎ4 ರಾಯಚೂರು ಜಿಲ್ಲೆ ಸಿಂದನೂರು ತಾಲ್ಲೂಕಿನ ಉಮಲೂಟಿ ಗ್ರಾಮದ ವಾಸಿ ಹನುಮಂತಪ್ಪನ ಮಗ ರವಿಚಂದ್ರ (27) ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ 17 ವರ್ಷದ ಬಾಲಕ ಸೇರಿದಂತೆ ಐದು ಜನರನ್ನು ವಶಕ್ಕೆ ಪಡೆದು ಮಂತ್ರಾಲಯದಿಂದ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಆರೋಪಿಗಳ ಬಗ್ಗೆ ವಿಚಾರಣೆ ಮಾಡಲಾಗಿ ಮೊದಲನೇ ಆರೋಪಿ ಸಂತೋಷ್ ರೆಡ್ಡಿಯು ಕ್ರಿಮಿನಲ್ ಹಿನ್ನೆಲೆ ಇರುವ ವ್ಯಕ್ತಿಯಾಗಿದ್ದು, ಈತ ಮಿಲಿಟರಿಯಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿರುವುದಾಗಿ ಹೇಳಿಕೊಳ್ಳುವುದಲ್ಲದೆ ಡಿಟೆಕ್ಟೀವ್ ಏಜೆನ್ಸಿಯನ್ನು ನಡೆಸುತ್ತಾ ಗಂಡ, ಹೆಂಡತಿಯರ ಮಧ್ಯೆ ಡಿಸ್ಪೂಟ್‌ಗಳ ಮಧ್ಯೆ ಪ್ರವೇಶಿಸಿ ಲೋಕೇಷನ್ ಮತ್ತು ಸಿಡಿಆರ್ ಕೊಡಿಸುತ್ತಾ ನೇಕ ಅಪರಾಧಗಳನ್ನು ಮಾಡಿರುವುದಲ್ಲದೆ ಬೆಂಗಳೂರಿನ ಗೋವಿಂದರಾಜನಗರ, ಬಾಗಲಗುಂಟೆ, ಹಾರೋಹಳ್ಳಿ, ಕೋಣನಕುಂಟೆ, ಮಹಾಲಕ್ಷ್ಮಿಪುರಂ, ಪುಟ್ಟೇನಹಳ್ಳಿ ಹಾಗೂ ಸುಬ್ರಮಣ್ಯನಗರ ಪೊಲೀಸ್ ಠಾಣೆಗಳು ಸೇರಿದಂತೆ ಹಲವು ಪೊಲೀಸ್ ಠಾಣೆಗಳಲ್ಲಿನ ಸುಮಾರು ಪ್ರಕರಣಗಳಲ್ಲಿ ಭಾಗಿಯಾಗಿರುತ್ತಾರೆ.


ಪಿಎಸ್‌ಐ ಪುನೀತ್ ನಂಜರಾಯ್



ಪಿಎಸ್‌ಐ ಕೆ. ಸತೀಶ್


ಪಿಎಸ್‌ಐ ಶ್ರೀಮತಿ ಶ್ಯಾಮಲಾ

ಯೋಗ ಶಿಕ್ಷಕಿ ಅರ್ಚನಾರವರನ್ನು ಕಿಡ್ನಾಪ್ ಮಾಡಿ, ನಿರ್ಜನ ಪ್ರದೇಸಕ್ಕೆ ಕರೆದುಕೊಂಡು ಹೋಗಿ ಅತ್ಯಾಚಾರಕ್ಕೆ ಪ್ರಯತ್ನಿಸಿ, ಕತ್ತು ಹಿಸುಕಿ ಕೊಲೆ ಮಾಡಿದ್ದೇಕೆಂದು ಕೇಳಲಾಗಿ ಯಾರು ಊಹಿಸಲಾರದಂತ ಭಯಂಕರ ಕಥೆಯನ್ನು ಬಿಚ್ಚಿಟ್ಟನು. ಬೆಂಗಳೂರಿನ ಚಿಕ್ಕಬಾಣಾವರದ ವಾಸಿ ಬಿಂದು ಎನ್ನುವವರು ನಮ್ಮ ಡಿಟೆಕ್ಟೀವ್ ಏಜೆನ್ಸಿಗೆ ಕಳೆದ ಮೂರು ತಿಂಗಳ ಹಿಂದೆ ಬಂದು ನನ್ನ ಗಂಡ ಸಂತೋಷ್‌ಕುಮಾರ್ ಯೋಗ ಶಿಕ್ಷಕಿ ಅರ್ಚನಾ ಎನ್ನುವವರ ಜೊತೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದು, ಈ ಬಗ್ಗೆ ಯೋಗ ಶಿಕ್ಷಕಿಗೆ ಬುದ್ಧಿ ಹೇಳಿದರೂ ಕೇಳದೆ ಇರುವುದರಿಂದ ಆಕೆಯನ್ನು ಕಿಡ್ನಾಪ್ ಮಾಡಿ ಎಲ್ಲಿಗಾದರೂ ಕರೆದುಕೊಂಡು ಹೋಗಿ ಸಾಯಿಸಿ ಅರಣ್ಯ ಪ್ರದೇಶದಲ್ಲಿ ಶವವನ್ನು ಹೂತು ಬಿಡಬೇಕೆಂದು ಹೇಳಿದರು. ಅದಕ್ಕೆ ನಾನು 5 ಲಕ್ಷ ಹಣವನ್ನು ಕೊಟ್ಟರೆ ಕೆಲಸ ಮುಗಿಸಿ ಕೊಡುವುದಾಗಿ ಹೇಳಿದೆ. ಅದಕ್ಕೆ ಅವರು 4 ಲಕ್ಷ ಕೊಡುತ್ತೇನೆ, ಈಗ ಸಧ್ಯಕ್ಕೆ 1 ಲಕ್ಷ ಅಡ್ವಾನ್ಸ್ ತೆಗೆದುಕೊಂಡು ಕೆಲಸ ಮುಗಿದ ಮೇಲೆ ಉಳಿದ ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿದರು. 4 ಲಕ್ಷಕ್ಕೆ ಸುಫಾರಿ ಡೀಲ್ ಕುದುರಿಸಿ ಮೂರು ತಿಂಗಳಲ್ಲಿ ಯೋಗ ಶಿಕ್ಷಕಿಗೊಂದು ಗತಿ ಕಾಣಿಸುವುದಾಗಿ ಹೇಳಿ 1 ಲಕ್ಷ ಹಣವನ್ನು ತೆಗೆದುಕೊಂಡು ಬಂದೆನು. ನನ್ನ ಒಬ್ಬನಿಂದ ಕೃತ್ಯ ನಡೆಸಲು ಸಾಧ್ಯವಿಲ್ಲ ಅದಕ್ಕೆ ನನಗೆ ಗೊತ್ತಿರುವ ರಮಣ, ನಾಗೇಂದ್ರ ರೆಡ್ಡಿ, ರವಿಚಂದ್ರರವರನ್ನು ಜೊತೆಗೆ ಸೇರಿಸಿಕೊಂಡು ಕೊಲೆಗೆ ಸ್ಕೇಚ್ ಹಾಕಿದ್ದೆವು. ಏಕಾಏಕಿ ಯೋಗ ಶಿಕ್ಷಕಿಯನ್ನು ಕಿಡ್ನಾಪ್ ಮಾಡಿಕೊಂಡು ಹೋದರೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಅದಕ್ಕೆ ಮೊದಲು ಆಕೆಯೊಂದಿಗೆ ಸ್ನೇಹ ಮಾಡಿ ನಂಬಿಸಿ ಹೊರಗಡೆ ಕರೆದುಕೊಂಡು ಹೋಗುವಾಗ ಕಿಡ್ನಾಪ್ ಮಾಡೋಣವೆಂದು ಸಂಚು ರೂಪಿಸಿದ್ದೆವು. ಅದರಂತೆ ಯೋಗ ಕಲಿಯುವ ನೆಪ ಮಾಡಿ ಯೋಗ ಕ್ಲಾಸ್‌ಗೆ ಹೋಗಿ ಬರುತ್ತಾ ಆಕೆಯ ವಿಶ್ವಾಸಗಳಿಸಿ ಕಿಡ್ನಾಪ್ ಮಾಡಿಕೊಂಡು ಹೋಗಲು ನಮ್ಮ ಕಾರುಗಳನ್ನು ಉಪಯೋಗಿಸಬಾರದು. ಅದಕ್ಕೆ ಯಾವುದಾದರೊಂದು ಕಾರನ್ನು ಕಳ್ಳತನ ಮಾಡಿ ತರಬೇಕೆಂದು ರಾಯಚೂರಿನ ರವಿಚಂದ್ರನಿಗೆ ಹೇಳಿದೆ. ಅವನು ಕೊಪ್ಪಳದಿಂದ ಕಾರೊಂದನ್ನು 17 ವರ್ಷದ ಅಪ್ರಾಪ್ತ ಬಾಲಕನ ಮೂಲಕ ಕಳ್ಳತನ ಮಾಡಿಸಿ ಅಕ್ಟೋಬರ್ 23ರಂದು ಬೆಳಿಗ್ಗೆ ಯೋಗ ಶಿಕ್ಷಕಿಯನ್ನು ಕಿಡ್ನಾಪ್ ಮಾಡಿ ಬೆಂಗಳೂರಲ್ಲಿ ಸುತ್ತಿ ರಾತ್ರಿ ಶಿಡ್ಲಘಟ್ಟ ತಾಲ್ಲೂಕಿನ ಧನಮಿಟ್ಟೇನಹಳ್ಳಿ ಬಳಿಯ ಅರಣ್ಯ ಪ್ರದೇಶಕ್ಕೆ ಹೋಗಿ ಆಕೆಯ ಬಟ್ಟೆಯನ್ನು ಕಿತ್ತು ಬೆತ್ತಲೆಗೊಳಿಸಿ, ತಲೆಗೆ ಗನ್ ಇಟ್ಟು ಒಡವೆಗಳನ್ನು ಕಿತ್ತುಕೊಂಡು ವೈರ್‌ನಿಂದ ಕತ್ತು ಬಿಗಿದು ಸಾಯಿಸಿ ಶವವನ್ನು ಎರಡು ಅಡಿ ಹಳ್ಳ ತೋಡಿ ಹಾಕಿ ಅದರ ಮೇಲೆ ಮಣ್ಣು ಮತ್ತು ಗಿಡಗಳ ಎಲೆ ಮತ್ತು ರೆಂಬೆಗಳಿಂದ ಮುಚ್ಚಿ ಅಲ್ಲಿಂದ ಪರಾರಿಯಾಗಿರುವುದಾಗಿ ಹೇಳಿದನು.


ಅರ್ಚನಾಳನ್ನು ಹೂತು ಹಾಕಿದ ಸ್ಥಳ

ಇನ್ನುಳಿದ ಆರೋಪಿಗಳಿಂದ ಹೇಳಿಕೆಗಳನ್ನು ಪಡೆದ ನಂತರ ಕಿಡ್ನಾಪ್ ಮಾಡಿದ ಸ್ಥಳ ಹಾಗೂ ಕೊಲೆ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ಪರಿಶೀಲಿಸಿದ ಮೇಲೆ ಯೋಗ ಶಿಕ್ಷಕಿ ಅರ್ಚನಾ ಬಳಿ ಕಿತ್ತುಕೊಂಡಿದ್ದ 8 ಲಕ್ಷ ಬೆಲೆಬಾಳುವ ಬಂಗಾರದ ಮಾಂಗಲ್ಯ ಸರ ಹಾಗೂ ಎರಡು ಕಿವಿ ಓಲೆಗಳನ್ನು ಹಾಗೂ ಕೆಎ-03 ಎಂವಿ-5304 ನಂಬರಿನ ಮಾರುತಿ ಸುಜುಕಿ ಯರ್‌ಟಿಗಾ ಕಾರನ್ನು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ನಂತರ ಎ1 ಸತೀಶ್ ರೆಡ್ಡಿ ಹೇಳಿರುವಂತೆ ಯೋಗ ಶಿಕ್ಷಕಿ ಅರ್ಚನ ಕೊಲೆಗೆ ಸುಫಾರಿ ನೀಡಿದ ಬಿಂದುರವರನ್ನು ಅವರ ಮನೆಯಲ್ಲಿ ಬಂಧಿಸಿ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ನಂತರ ಆರು ಜನ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಯಶಸ್ವಿ ಕಾರ್ಯಾಚರಣೆ ನಡೆಸಿದ ಎಲ್ಲಾ ಅಧಿಕಾರಿಗಳ ಹಾಗೂ ಸಿಬ್ಬಂದಿಯವರನ್ನು ಎಸ್ಪಿ ಕುಶಾಲ್ ಚೌಕ್ಸೆರವರು ಶ್ಲಾಘಿಸಿ ಅಭಿನಂದಿಸಿದ್ದಾರೆ.


ಅರ್ಚನಾಳನ್ನು ಕಿಡ್ನಾಪ್ ಮಾಡುತ್ತಿರುವ ಆರೋಪಿಗಳು


ಆರೋಪಿಗಳನ್ನು ಬಂಧಿಸಿರುವ ಪೊಲೀಸರು

6

ಆಕೆ ಮನೋ ವ್ಯಾಕುಲತೆಗೆ ಒಳಗಾದಳು. ಈ ಸ್ಥಿತಿಯಿಂದ ಚೇತರಿಸಿಕೊಂಡು ಎಲ್ಲರಂತೆ ಆಗಲು, ಸಹಜ ಮನೋಸ್ಥಿತಿಗೆ ಬರಲು ಒಂದು ತಿಂಗಳು ಬೇಕಾಯಿತು.

●●●

ದೇಶ-ಫ್ರಾನ್ಸ್ ಸ್ಥಳ-ಒಮೆಗೋ ಸಿಟಿ ಸನ್‌ಲೈಟ್ ಅಪಾರ್ಟ್‌ಮೆಂಟ್. ಫ್ರಾನ್ಸ್‌ದೇಶದಲ್ಲಿ ಅತ್ಯಂತ ದುಬಾರಿ ಬೆಲೆಯ ಅಪಾರ್ಟ್‌ಮೆಂಟ್ ಅಂದರೆ ಸನ್‌ಲೈಟ್ ಎಂದು ಖ್ಯಾತಿ ಪಡೆದಿತ್ತು.

ಪ್ರತಿಯೊಂದು ಸಪರೇಟ್ ಪ್ಲಾನ್ ಕೂಡ, ಮಿನಿ ಬಂಗಲೆ ರೀತಿಯಲ್ಲಿ ನಿರ್ಮಾಣ ಮಾಡಲಾಗಿತ್ತು. ಮುಂಭಾಗದ ಆವರಣದಲ್ಲಿ(ಅಪಾರ್ಟ್‌ಮೆಂಟ್) ಇದೆ ಸ್ವಿಮ್ಮಿಂಗ್ ಪೂಲ್ ಮತ್ತು ರೋಸ್ ಗಾರ್ಡನ್ ಮತ್ತು ವೆಹಿಕಲ್ ಪಾರ್ಕಿಂಗ್ ಸಪರೇಟಾಗಿತ್ತು. ಸ್ವಿಮ್ಮಿಂಗ್ ಪೂಲ್‌ನ ಪ್ರದೇಶ ನಿರ್ಬಂಧಿಸಲಾಗಿತ್ತು.

ಎ-1, ಎ-2 ಪ್ಲಾಟ್‌ನವರಿಗೆ ಮಾತ್ರ ಈಜು ಕೋಳದ ಉಪಯೋಗ ಎಂಬ ಪ್ರವೇಶವನ್ನು ಮಿತಿಗೊಳಿಸಲಾಗಿತ್ತು. ಈ ಅಪಾರ್ಟ್‌ಮೆಂಟ್‌ನಲ್ಲಿ ನಾಯಿ ಅಥವಾ ಬೆಕ್ಕುಗಳನ್ನು ಸಾಕಲು ಅವಕಾಶ ಇರಲಿಲ್ಲ. ಆದರೆ ಪ್ಲಾಟ್ (ಎ-1)ನಲ್ಲಿ ವಾಸ ಮಾಡುತ್ತಿದ್ದ 'ಜೆನಲಿಯ' ಎಂಬ ಸಿನಿಮಾ ನಟಿಗೆ ಅವಕಾಶ ನೀಡಿದ್ದರು.

ಕಾರಣ ಏನು?

ಎ-1 ಪ್ಲಾಟ್ ಬೆಲೆ ಇಡೀ ಅಪಾರ್ಟ್‌ಮೆಂಟ್‌ನಲ್ಲಿರುವ ಎಲ್ಲಾ ಪ್ಲಾಟ್‌ಗಳ ಒಟ್ಟು ಬೆಲೆಗೆ ಸಮನಾಗಿದೆ ಮತ್ತು ಪ್ರತಿ ತಿಂಗಳ ನಿರ್ವಹಣೆಯ ವೆಚ್ಚದ ತೊಂಭತ್ತು ಭಾಗವನ್ನು ಎ-1 ಪ್ಲಾಟ್‌ನವರು ಕೊಡುತ್ತಾರೆ. ಪ್ರಭಾವಶಾಲಿ ರಾಜಕಾರಣಿ ಅಥವಾ ಉನ್ನತ ವಲಯದ ಅಧಿಕಾರಿಗಳು ಅಥವಾ ಸರ್ಕಾರದ ಆಡಳಿತದ ಮೇಲೆ ಪ್ರಭಾವ ಇರುವ ಉದ್ಯಮಿಗಳಿಗೆ ಮಾತ್ರ ಎ-1 ಪ್ಲಾಟ್‌ನಲ್ಲಿವಾಸ ಮಾಡಲು ಅವಕಾಶ ಇರುತ್ತದೆ. ಅವರು ಏನೇ ಮಾಡಿದರೂ ಉಳಿದವರು ವಿರೋಧ ಮಾಡುವುದಿಲ್ಲ. ಯಾಕೆ ಅಂದರೆ ಉಳಿದ ಪ್ಲಾಟ್‌ಗಳನ್ನು ಬೇರೆಯವರಿಗೆ ವಿತರಣೆ ಮಾಡುವಾಗ ಮೊದಲೇ ಈ ನಿಬಂಧನೆ ತಿಳಿಸಿರುತ್ತಾರೆ. ಅಲ್ಲದೇ ಯಾರಾದರೂ ಗೊಣಗಾಡಿದರೆ ಅವರ ಬಾಯಿ ಮುಚ್ಚಿಸಲು ಬೇರೆ ತಂತ್ರಗಳನ್ನು ಹೂಡುತ್ತಾರೆ. ಇದು ಫ್ರಾನ್ಸ್ ದೇಶದ ಸನ್‌ಲೈಟ್ ಅಪಾರ್ಟ್‌ಮೆಂಟ್‌ನ ಕತೆ.

ನಾಯಿ-ಬೆಕ್ಕು ಸಾಕಬಾರದು.

ಇದೇ ಮುಖ್ಯ ನಿಬಂಧನೆ.

ಆದರೆ ಸಿನಿಮಾ ನಟಿ ಜೆನಲಿಯ ವಿದೇಶದಿಂದ (ರಷ್ಯಾ) 'ಪೊಂಕ್' ಜಾತಿಯ ಬಲು ಮುದ್ದಾದ ನಾಯಿಯನ್ನು ತರಿಸಿಕೊಂಡಿದ್ದಳು.

ಈ ಸಿನಿಮಾ ನಟಿ ಶೂಟಿಂಗ್ ಅಥವಾ ಶ್ರೀಮಂತ ಉದ್ಯಮಿಗಳು ಅಥವಾ ಪ್ರಭಾವಶಾಲಿ ರಾಜಕಾರಣಿಗಳ ಜೊತೆ ಹನಿಮೂನ್‌ಗೆ ಅಂತ ಹೋಗುತ್ತಿದ್ದಾಳೆ. ಆಗ ಆ ನಾಯಿ ಸೈಲೆಂಟ್ ಆಗಿರುತ್ತದೆ.

ಆ ನಾಯಿಗಾಗಿ ಬೇರೊಂದು ವಿಶಾಲವಾದ, ಪೋನ್ ರೆಡಿ ಮಾಡಿಸಿದ್ದಾಳೆ. ವಿಶಾಲವಾದ ಕೊಠಡಿಯಷ್ಟು ಅಗಲ, ಉದ್ದ ಇರುವ ಬೋನ್‌ನಲ್ಲಿ ಎಲ್ಲಾ ಅನುಕೂಲವಿದೆ.

ಆ ನಾಯಿಗಾಗಿ ವಿಪರೀತ ಹಣ ಖರ್ಚು ಮಾಡಿ ರಾಯಲ್ ಟ್ರೀಟ್‌ಮೆಂಟ್ ಕೊಡುತ್ತಾರೆ.

ರಾತ್ರಿ ಹನ್ನೊಂದು ಗಂಟೆ.

ನಾಯಿಯ ಬೊಗಳಾಟ ಕೇಳುತ್ತಿದೆ.

ಅದು ಮಾಮೂಲಿ ಬೊಗಳಾಟ ಅಲ್ಲ.

ಕೆಟ್ಟ ಸ್ವರದಲ್ಲಿ ಅರಚುತ್ತಿದೆ.

ಇದರಿಂದ ಸಮೀಪದಲ್ಲಿರುವ ಬೇರೆ ಪ್ಲಾಟ್‌ನ ವಾಸಿಗಳಿಗೆ ತೊಂದರೆ ಉಂಟಾಯಿತು. ಆದರೂ ಸಹ ಅನಿವಾರ್ಯವಾಗಿ ಸಹಿಸಿಕೊಂಡರು. ಆದರೆ ಆ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿರುವ ಎಡಿಸನ್ ಎಂಬ ಯುವಕ ಆ ದೇಶದ ನಂಬರ್ ವನ್ ಪತ್ರಿಕೆ 'ದಿ ಲೈಟ್' ಪತ್ರಿಕೆಯ ಟಾಪ್ ವನ್ ರಿಪೋರ್ಟರ್ ಆಗಿದ್ದನು.

ಥೂ... ಈ ನಾಯಿ ಯಾಕೆ ವಿಕೃತವಾಗಿ ಅರಚಿಕೊಳ್ಳುತ್ತಿದೆ ಎಂಬುದನ್ನು ತಿಳಿಯಲು ಎ-1 ಪ್ಲಾಟ್ ಹತ್ತಿರ ಬಂದನು. ಆ ಪ್ಲಾಟ್‌ನ ಮುಂಭಾಗದಲ್ಲಿ ನಾಯಿಗಾಗಿ ಮಾಡಿಸಿರುವ ಬೋನ್ ಇದೆ. ಆದರೆ ಅಲ್ಲಿ ನಾಯಿ ಇರಲಿಲ್ಲ.

ಅವನಿಗೆ ಕುತೂಹಲವಾಯಿತು. ನಾಯಿಯ ಬೊಗಳಾಟ, ವಿಕೃತ ಸ್ವರದ ಅರಚಾಟದ ಆಲಾಪನೆಯನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಿದನು.

ಎ-1 ಪ್ಲಾಟ್ ಒಳಗಿನಿಂದ ಕೇಳಿ ಬರುತ್ತಿದೆ. ಅಯ್ಯೋ... ಥೂ... ರಾತ್ರಿ ವೇಳೆ ನಾಯಿನ ಹೊರಗೆ ಬಿಡುತ್ತಾರೆ. ಈ ಮೇಡಂ ಯಾಕೆ ಒಳಗೆ ಇಟ್ಟುಕೊಂಡಿದ್ದಾರೆ ಎಂಬುದನ್ನು ತಿಳಿಯಲು ಸಾಹಸ ಮಾಡಿದನು.

ನಿಜ... ತುಂಬಾ ಕಷ್ಟದಿಂದ ಈಗ ಜೆನಲಿಯ ಮಲಗುವ ಬೆಡ್‌ರೂಮಿಗೆ ಬಂದನು.

ದೀಪದ ಬೆಳಕು ಹರಡಿದೆ.

ನಿಯಾನ್ ದೀಪ ತಿಳಿ ನೀಲಿ ಬಣ್ಣದ ಬೆಳಕನ್ನು ಹರಡಿದೆ.

ಬಲು ಸೊಗಸಾದ ಬೆಡ್‌ರೂಮ್.

ಅಲ್ಲಿ ನಾಯಿ ಇರಲಿಲ್ಲ.

ಜೆನಲಿಯ ಸಹ ಇರಲಿಲ್ಲ.

ಅವನೀಗ ಬೇಸರ, ಕೋಪದಿಂದ ಅಲ್ಲಿಂದ ಹೊರಡುತ್ತಿರುವಾಗ, ಆ ನಾಯಿ ತುಂಬಾ ವಿಕೃತ, ವಿತರಾಳ ಸ್ವರದಲ್ಲಿ ಒಂದೇ ಸಮನೆ ಅರಚುತ್ತಿದೆ. ಈಗ ಈ ವರದಿಗಾರನಿಗೆ ಆ ನಾಯಿ ಎಲ್ಲಿದೆ ಎಂಬುದು ತಿಳಿಯಿತು. ಅರಚಾಟದ ಧ್ವನಿಯ ಜಾಡನ್ನು ಹಿಡಿದು ಅಲ್ಲಿಗೆ ಬಂದನು.

ಹಳೆಯ ಸಾಮಾನುಗಳನ್ನು ತುಂಬಿರುವ ಕೊಠಡಿಯ ಒಂದು ಕಡೆ ಖಾಲಿ ಇರುವ ಸ್ಥಳ ಇತ್ತು. ಅಲ್ಲಿಗೆ ಬಂದನು. ಆ ದೃಶ್ಯ ಕಂಡಿತು.

ಆ ನಾಯಿ ನೆಲದ ಮೇಲೆ ಬಿದ್ದಿದೆ. ಅದನ್ನು ಚೈನ್‌ನಿಂದ ಕಟ್ಟಿದ್ದಾನೆ.

ಮೈಗಾಡ್ ಇದೇನಿದು ಹೀಗೆ?

ಬಲು ಮುದ್ದಾಗಿರುವ ನಾಯಿಯು ದೇಹದ ಹಲವಾರು ಕಡೆ ಗಾಯಗಳಾಗಿ ರಕ್ತ ಸಣ್ಣಗೆ ಜಿನುಗುತ್ತಿದೆ. ಸ್ವಲ್ಪ ದೂರದ ಅಂತರದಲ್ಲಿ, ನೈಟಿ ಧರಿಸಿರುವ ಪ್ರಖ್ಯಾತ ನಟಿ ಜೆನಲಿಯ ನಿಂತಿದ್ದಾನೆ.

ಅವಳ ತಲೆಕೂದಲು ಕೆದರಿದೆ.

ಮುಖ ವ್ಯಗ್ರವಾಗಿದೆ.

ಕೈಯಲ್ಲಿ ತುಂಬಾ ಚೂಪಾಗಿರುವ ಐರನ್ ರಾಡ್ ಹಿಡಿದಿದ್ದಾಳೆ.

ನೆಲದಲ್ಲಿರೋದು ಏನು?

ಉದ್ದವಾದ ದೊಣ್ಣೆ.

ಹಗ್ಗದ ಚಾವುಟಿ.

ಅವಳ ಮುಖ ಕಡು ಕೆಂಪಾಗಿದೆ ಮತ್ತು ಒಂದು ರೀತಿ ವಿಕೃತ ಕ್ರೌರ್ಯ ತುಂಬಿದೆ. ಅವಳು ದೊಣ್ಣೆ ಮತ್ತು ಹಗ್ಗದ ಚಾವುಟಿ, ಈಗ ಹಿಡಿದಿರುವ ಸಲಾಕೆಯಿಂದ ತಿವಿದಿರೋದ್ರಿಂದ ಆ ನಾಯಿಗೆ ಗಾಯಗಳಾಗಿ ರಕ್ತ ಬರುತ್ತಿದೆ. ಅವಳೀಗ ಹತ್ತಿರ ಬಂದು ಗಾಯ ಆಗಿರುವ ಕಡೆ ಸಲಾಕೆಯಿಂದ ತುಂಬಾ ಜೋರಾಗಿ ತಿವಿದಳು.

ಪ್ರಾಣಾಂತಿಕ ಅರಚಾಟದಿಂದ ನಾಯಿ ಎಗರೆಗರಿ ಬೀಳುತ್ತಿದೆ.

ಇದೆಂತಹ ಕ್ರೌರ್ಯ!

ಅವಳು ಮೊದಲೇ ಐರನ್ ರಾಡ್‌ಗೆ ವೈಯರ್ ಮತ್ತು ಪ್ಲಗ್ ಮೂಲಕ ವಿದ್ಯುತ್ ಹರಿಯುವಂತೆ ಮಾಡಿದ್ದಳು.

ಆ ರಾಡು ಕೆಂಪಾಗಿದೆ.

ಅವಳೀಗ ಸ್ವಿಚ್ ಆಫ್ ಮಾಡಿ ಎತ್ತಿಕೊಂಡಳು. ಕೆಂಪಾಗಿರುವ ರಾಡ್ ಮತ್ತು ನಾಯಿಯ ಕಡೆ ನೋಡಿ ವಿಕೃತ ರೀತಿಯಲ್ಲಿ ನಗುತ್ತಿದ್ದಾಳೆ.

ಹಲ್ಲು ಕಡಿಯುತ್ತಿದ್ದಾಳೆ.

ನಾಲಿಗೆ ಬಾಯಿಂದ ಹೊರಗೆ ಬಂದಿದೆ.

ಜೊಲ್ಲು ರಸ ಬರುತ್ತಿದೆ.

ಇದನ್ನೆಲ್ಲಾ ನೋಡುತ್ತಿರುವ ವರದಿಗಾರ ಕೂಡಲೇ ಮೊಬೈಲ್ ಕ್ಯಾಮರ ತೆಗೆದು ಈ ದೃಶ್ಯಗಳನ್ನು ಕ್ಲಿಕ್ ಮಾಡಿದನು.

ಕೆಂಪಗೆ ಕಾದಿರುವ ಸಲಾಕೆಯಿಂದ ಆ ನಾಯಿಗೆ ಬರೆ ಹಾಕಲು ಮುಂದೆ ಬಂದಳು. ಪಾಪ... ಆ ನಾಯಿಗೆ ಈಗ ಪ್ರತಿಭಟಿಸಿ ಅರಚಾಡಲು ಸಹ ಶಕ್ತಿ ಇರಲಿಲ್ಲ.

ಅವಳೀಗ ಅಸಹಜ, ವಿಲಕ್ಷಣ ರೀತಿಯಲ್ಲಿ ವರ್ತಿಸುತ್ತಾ ನಾಯಿಗೆ ಬರೆ ಹಾಕಲು ಬಾಗಿದಾಗ, ಕೊಠಡಿಯ ಮೂಲಕ ನೋಡುತ್ತಿದ್ದ ವರದಿಗಾರ, ಕೈಗೆ ಸಿಕ್ಕಿದ ಮರದ ತುಂಡನ್ನು ಎತ್ತಿಕೊಂಡು ಎಸೆದಿದ್ದನು.

ಅದು ಅವಳ ಕೈಗೆ ಬಡಿದು ಸಲಾಕೆ ಎಗರಿ, ದೂರ ಹೋಗಿ ಬೀಳುವಂತೆ ಮಾಡಿತ್ತು. ಅವಳ ಆವೇಶ, ಉನ್ಮಾದತೆ ಇಳಿದು ಈಗ ಗಾಬರಿಯಿಂದ ನೋಡಿದಳು.

ವರದಿಗಾರ ಕಂಡು ಬಂದನು.

ಅವಳು ಬೆಚ್ಚಿಬಿದ್ದಳು.

''ಮೇಡಂ... ನಾಳೆ ಇದು ರೀತಿ ಪ್ರಚಾರ ಪಡೆಯುತ್ತದೆ ಮತ್ತು ಪ್ರಾಣಿ ಹಿಂಸೆ ಮಾಡಿದಾಗ ನಿಮ್ಮ ಮೇಲೆ ಅನಿಮಲ್ ಪ್ರೊಟೆಕ್ಷನ್ ಡಿಪಾರ್ಟ್‌ಮೆಂಟ್ ಯಾವ ರೀತಿ ಕಾನೂನಿನ ಕ್ರಮ ತೆಗೆದುಕೊಳ್ಳುತ್ತದೆ ಅಂತ ಕಾದು ನೋಡಿ'' ಎಂದು ಹೇಳಿ ಅಲ್ಲಿಂದ ಹೊರಟನು.

ಅನುಮಾನ ಬಂದು ತಿರುಗಿ ನೋಡಿದನು.

ಆ ನಾಯಿ ಸತ್ತು ಹೋಗಿದೆ.

ಆ ದೃಶ್ಯದ ಫೋಟೋ ತೆಗೆದನು.

ಅಲ್ಲಿಂದ ಬೇಗ ಬೇಗ ಹೋಗುತ್ತಿರುವುದನ್ನು ಅವಳು ನೋಡಿದಳು.

ಅವಳೀಗ ಜಾಗೃತ ಸ್ಥಿತಿಗೆ ಬಂದಿದ್ದಾಳೆ. ಮೊಬೈಲ್ ಫೋನ್ ರಿಂಗ್ ಆಯಿತು. ಅವಳು ಫೋನ್ ಮಾಡಿದ್ದು ಯಾರಿಗೆ?

ಅಪಾರ್ಟ್‌ಮೆಂಟ್ ಸೆಕ್ಯುರಿಟಿಯವರಿಗೆ ಮತ್ತು ತನ್ನ ಜೊತೆ ಇರುವ ಕಾರ್ಯದರ್ಶಿ ಮತ್ತು ಆಗಾಗ ಹಾಸಿಗೆ ಸುಖ ನೀಡುತ್ತಿದ್ದ ಬೆಂಜುಮಿನ್ ಮತ್ತು ಪೊಲೀಸ್ ಇಲಾಖೆಯಲ್ಲಿರುವ ಇವಳ ರಹಸ್ಯ ಪ್ರೇಮಿ 'ಮಾರ್ಟಿನ್ ಬ್ಲಾಗ್'ಗೆ ಫೋನ್ ಮಾಡಿ ಆ ರಿಪೋರ್ಟರ್‌ಗೆ ಏನು ಮಾಡಬೇಕು ಎಂದು ಹೇಳಿದಳು.

ವರದಿಗಾರನನ್ನು ಅಪಾರ್ಟ್‌ಮೆಂಟ್‌ನಿಂದ ಹೊರಗೆ ಹೋಗದಂತೆ ತಡೆಯಲು ಸೆಕ್ಯುರಿಟಿಯವರು ರೆಡಿಯಾದರು.

ಕಾರ್ಯದರ್ಶಿ ಬೆಂಜ್‌ಮಿನ್ ವರದಿಗಾರ ವಾಸ ಮಾಡುತ್ತಿರುವ ಪ್ಲಾಟ್ ಕಡೆ ಓಡಿದನು ಮತ್ತು ಪೊಲೀಸ್ ಇಲಾಖೆಯಲ್ಲಿರುವ ಇವಳ ಪರಮಾಪ್ತ ಮಾರ್ಟಿನ್ ಬ್ಲಾಗ್ ಈಗ ಚುರುಕಾದರು.

ಸತ್ತಿರುವ ಬೆಕ್ಕನ್ನು ಕಾರ್ಯದರ್ಶಿ ಅಲ್ಲಿಂದ ಸಾಗಿಸಲು ವ್ಯವಸ್ಥೆ ಮಾಡಿದನು. ಅಂತಿಮವಾಗಿ ಏನಾಯಿತು? ಇಷ್ಟೆಲ್ಲಾ ಕಾರ್ಯ ಯೋಜನೆ ತುಂಬಾ ಚುರುಕಾಗಿ ಸಾಗಿರುವಾಗ ಆ ವರದಿಗಾರ ಹೇಗೆ ತಾನೇ ಸಕ್ಸಸ್ ಆಗಲು ಸಾಧ್ಯ?

ಆದರೆ ಈ ಅನಿಸಿಕೆ ತಪ್ಪು!

ಫ್ರಾನ್ಸ್‌ನ ಸಿನಿಮಾ ನಟಿಯ ಶೀತಲ ಕ್ರೌರ್ಯದ ವಿಕೃತ-ವಿಕಲ್ಪ ಮನೋಸ್ಥಿತಿ ಬಗ್ಗೆ ಈ ಲೇಖನ ಬರೆಯಲು ಆಧಾರ ದೊರೆತಿದ್ದರಿಂದ ಸಾಧ್ಯವಾಗಿದೆ.

ವರದಿಗಾರ ಅಪಾರ್ಟ್‌ಮೆಂಟ್‌ನಿಂದ ಬೇರೊಂದು ಮಾರ್ಗದಿಂದ ತಪ್ಪಿಸಿಕೊಂಡು, ಆ ಸಿನಿಮಾ ನಟಿಯ ಮತ್ತೊಂದು ಕ್ರೌರ್ಯ ಮನಸ್ಥಿತಿ ಜಗತ್ತಿಗೆ ತಿಳಿಯುವಂತೆ ಮಾಡಿದ್ದನು.

ಫ್ರಾನ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಆ ವರದಿ, ವಿದೇಶ ವಾರ್ತೆ ಎಂಬ ಕಾಲಂನಲ್ಲಿ ನಮ್ಮ ದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರಿಂದ, ಆ ಸಿನಿಮಾ ನಟಿಯ ಮನೋವಿಕಾರತೆಯ ಶೀತಲ ಕ್ರೌರ್ಯದ ಪರಿಚಯ ಜಗತ್ತಿಗೆ ತಿಳಿಸಲು ಸಾಧ್ಯವಾಯಿತು.

☯

# ರೌಡಿಯಿಂದಲೇ ಹತನಾದ ರೌಡಿ ವಿಶ್ವನಾಥ!

7

ತಿಳಿಸಲಾಗಿ ಸಿಪಿಐ ಪ್ರಕಾಶ್ ಯಾತನೂರವರ ನೇತೃತ್ವದಲ್ಲಿ ಮೊದಲನೇ ತಂಡ ಜೀಪ್ ನಂ. ಕೆಎ-32 ಜಿ-1311, ಎರಡನೇ ತಂಡ ಜೀಪ್ ನಂ. ಕೆಎ-32 ಜಿ-1026, ಮೂರನೇ ತಂಡ ಕೆಎ-32 ಜಿ-0761 ಒಟ್ಟುಗೂಡಿ ಬೆಳಗ್ಗಿನ ಜಾವ 5-45ಕ್ಕೆ ಎಲ್ಲಾ ವಾಹನಗಳು ಗುಂಪಾದ ಹತ್ತಿರ ನಿಲ್ಲಿಸಿ ಸುತ್ತುವರೆದರು. ಗುಂಪಾದಲ್ಲಿ ಆರೋಪಿ ಇದ್ದದ್ದು ಕಂಡು 6 ಗಂಟೆ ಸುಮಾರಿ ಪಿಎಸ್‌ಐ ಇಂದುಮತಿ ಆತನಿಗೆ ಹೇಳಿದರೂ ಆಳಾಂದ ಠಾಣಾ ವ್ಯಾಪ್ತಿಯಲ್ಲಿ ಕೊಲೆಯಾದ ವಿಶ್ವನಾಥನ ಬಗ್ಗೆ ತಿಳಿಸಿ ನಿನ್ನನ್ನು ದಸ್ತಗಿರಿ ಮಾಡಲು ಬಂದಿದ್ದೇವೆ ಎಂದು ನನ್ನನ್ನು ಬಂಧಿಸಲು ಮುಂದಾದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಚಾಕು ತೋರಿಸಿದ. ನಮ್ಮ ಜೊತೆ ಸುಮ್ಮನೇ ಬಾ ಕರ್ತವ್ಯಕ್ಕೆ ಅಡ್ಡಿಪಡಿಸಬೇಡ ಎಂದಾಗ ಚಾಕುವಿನಿಂದ ಪಿಎಸ್‌ಐ ಇಂದೂಮತಿ ಕುತ್ತಿಗೆಗೆ ಪ್ರಹಾರ ಮಾಡಲು ಯತ್ನಿಸಿದಾಗ ಕೈ ಅಡ್ಡ ತಂದ ಕಾರಣ ಕೈಗೆ ಚಾಕುವಿನ ಬೆರಳಿಗೆ ಗಾಯವಾಗಿ ರಕ್ತ ಸೋರುತ್ತಿತ್ತು. ಅಫಜಲಪುರ ಠಾಣೆಯ ಪಿಎಸ್‌ಐ ಸೋಮಲಿಂಗ ಒಡೆಯರ ಗಾಳಿಯಲ್ಲಿ ಸರ್ವೀಸ್ ರಿವಾಲ್ವರ್‌ನಿಂದ ಮೊಣಕಾಲಿನ ಹಿಂಬದಿಗೆ ಗುಂಡು ಹೊಡೆದ ಕುಸಿದು ಬಿದ್ದ. ತಕ್ಷಣ 108 ಆ್ಯಂಬುಲೆನ್ಸ್‌ಗೆ ಕರೆ ಮಾಡಲಾಗಿ 8.30 ಗಂಟೆಗೆ ಆರೋಪಿ ಸಹಿತ ಕಲಬುರಗಿ ನಗರಕ್ಕೆ ಹೋಗಿ ಆರೋಪಿ ಲಕ್ಷ್ಮಣ ಪೂಜಾರಿಗೆ ಜಿಮ್ಸ್ ಆಸ್ಪತ್ರೆಗೆ ಸೇರಿಸಿ ಆತನಿಂದ ಗಾಯವಾದ ಪಿಎಸ್‌ಐ ಇಂದೂಮತಿರವರನ್ನು ನಗರದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದರು. ದಿನಾಂಕ 1-10-2024ರಂದು ಆರೋಪಿ ಲಕ್ಷ್ಮಣನನ್ನು ವಶಕ್ಕೆ ಪಡೆದು ಆಸ್ಪತ್ರೆಯಿಂದ ಕೃಷ್ಣ ಜನ್ಮ ಸ್ಥಾನಕ್ಕೆ ಅಟ್ಟಿದರು. ಉಳಿದ ಆರೋಪಿಗಳಿಗೆ 24, 26, 29 ಹೀಗೆ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು.

ಎ1 ಆರೋಪಿ ದಶರಥ ಪಾತ್ರ ಪಿಡಿಓ ನಿರಗುಡಿ, ಆರೋಪಿಗಳಾದ ಗುರುಲಿಂಗಪ್ಪ ತಂದೆ ಕಲ್ಯಾಣರಾವ ಪಾಟೀಲ (46), ಒಕ್ಕಲುತನ ಹಿತ್ತಲ ಶಿರೂರ ಗ್ರಾಮ. ರವಿ ಅಲಿಯಾಸ್ ರವೀಂದ್ರ ತಂದೆ ಸಾಯಬಣ್ಣ, ಸುತಾರ (45), ಹಿತ್ತಲ ಶಿರೂರ ಗ್ರಾಮ, ಬಸವರಾಜ ತಂದೆ ಶಿವಶರಣಪ್ಪ ದೇವಕಾರೆ (45), ನೇಕರ ಸಾ|| ಹಿತ್ತಲಶಿರೂರ, ಲಕ್ಷ್ಮಣ ತಂದೆ ಅಮೃತ ಘೋಡಕೆ (44), ಸಾವಳೇಶ್ವರ, ಹಣಮಂತ ತಂದೆ ಶಾಂತಪ್ಪ ಪೂಜಾರಿ ಗೋಳಾ (32), ಜೇರೋಳ್ಳಿ ಗ್ರಾಮ, ಪ್ರಭಣ್ಣ ತಂದೆ ಮಲ್ಲಿನಾಥ ಪೂಜಾರಿ (30), ವ್ಯಾಪ, ಜೇರೋಳ್ಳಿ, ಸೈಫನ್‌ಸಾಬ ತಂದೆ ಹುಸೇನ್ ಸಾಬ ಶಿರೂರ (48), ಝುಳಕಿ (ಕೆ) ಗ್ರಾಮ.

ಪೊಲೀಸ್ ಅಧಿಕಾರಿಗಳೊಂದಿಗೆ ರೈಟರ್ ಸಿದ್ದು ಮತ್ತು ಬಾಬು ಶೇರಿಕಾರ ಶ್ರಮವಹಿಸಿದ್ದಾರೆ.

☯

# ಕೊಡಗು: ಪ್ರೇಯಸಿಯ ಗಂಡನ ಹತ್ಯೆಗೆ ಸ್ಕೆಚ್: ಪೇದೆ ಜೈಲಿಗೆ!



ಆರೋಪಿ ಕೊಟ್ರೇಶ್

**ವಿವಾಹಿತ ಮಹಿಳೆಯ ಪ್ರೇಮಪಾಶಕ್ಕೆ ಬಿದ್ದ ಪೊಲೀಸ್ ಪೇದೆಯೊಬ್ಬ ಆಕೆಯ ಗಂಡನನ್ನು ಕೊಲೆ ಮಾಡಲು ಹೋಗಿ ಸಿಕ್ಕಿ ಬಿದ್ದು ಜೈಲ್ ಸೇರಿರುವ ಘಟನೆಯೊಂದು ಕೊಡಗಿನ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆಯಲ್ಲಿ ನಡೆದಿದೆ. ಘಟನೆಯಲ್ಲಿ ಪೊಲೀಸ್ ಪೇದೆಯೇ ಆರೋಪಿಯಾಗಿ ಸಿಕ್ಕಿಬಿದ್ದಿರುವುದು ಜನ ಛೀ... ಥೂ... ಎಂದು ಉಗಿಯುವಂತಾಗಿದೆ. ಇಲ್ಲಿ ಪೊಲೀಸ್ ಪೇದೆಯನ್ನು ಜೈಲ್ ಸೇರುವಂತೆ ಮಾಡಿರುವುದು ಅನೈತಿಕ ಸಂಬಂಧ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೂ ಮದುವೆ ಫಿಕ್ಸ್ ಆಗಿದ್ದ ಪೊಲೀಸ್ ಪೇದೆ ಮಣ್ಣು ತಿನ್ನುವ ಕೆಲಸ ಮಾಡಿದ್ದು ಹೆತ್ತವರು ಮಾತ್ರವಲ್ಲದೆ ಆತನ ವೃತ್ತಿಗೆ ಬಗೆದ ದ್ರೋಹವಾಗಿದೆ.**

**ಕೊಡಗು**
✍ಬಿ.ಎಂ. ಲವಕುಮಾರ್

ಅನೈತಿಕ ಸಂಬಂಧಗಳೇ ಹಾಗೆ ಅವು ನಮಗೆ ಗೊತ್ತಿಲ್ಲದಂತೆ ಏನನ್ನೋ ಮಾಡಬಾರದನ್ನು ಮಾಡಿಸಿ ಬಿಡುತ್ತದೆ. ಅದರಂತೆ ವಿವಾಹಿತ ಮಹಿಳೆಯ ಸಹವಾಸಕ್ಕೆ ಬಿದ್ದಿದ್ದ ಆತ ಆಕೆಯ ಗಂಡನಿಂದ ಮುಕ್ತಿ ಕೊಡಿಸಲು ಹೋಗಿ ತಗಲಾಕಿಕೊಂಡು ಜೈಲ್ ಸೇರುವಂತಾಗಿದೆ. ಸಾಮಾನ್ಯವಾಗಿ ಪೊಲೀಸ್ ಠಾಣೆ ಎಂದ ಮೇಲೆ ಹತ್ತಾರು ಜನ ದೂರು ಹೊತ್ತುಕೊಂಡು ಬರುತ್ತಿರುತ್ತಾರೆ. ಅದರಲ್ಲೂ ಇತ್ತೀಚೆಗಿನ ದಿನಗಳಲ್ಲಿ ಗಂಡ ಹೆಂಡಿರ ಜಗಳದ ಕೇಸ್‌ಗಳಂತೂ ಹೆಚ್ಚು ಹೆಚ್ಚಾಗಿಯೇ ಬರುತ್ತವೆ. ಹೀಗೆ ಬರುವ ಪ್ರಕರಣಗಳಲ್ಲಿ ಕೆಲವೊಂದನ್ನು ಗಂಡ ಹೆಂಡತಿಗೆ ಬುದ್ಧಿ ಹೇಳಿ ಸ್ಟೇಷನ್‌ನಲ್ಲಿಯೇ ರಾಜೀ ಮಾಡಿಸಿ ಕಳುಹಿಸಿ ಕೊಡುತ್ತಾರೆ. ಕೆಲವೊಮ್ಮೆ ಅದು ಸಾಧ್ಯವಾಗದೆ ಹೋದಾಗ ಮುಂದಿನ ತೀರ್ಮಾನ ಕೈಗೊಳ್ಳುತ್ತಾರೆ.



ಎಸ್ಪಿ ರಾಮರಾಜನ್

ಇಲ್ಲಿ ಮಹಿಳೆಯಿಂದ ದೂರು ಪಡೆದ ಪೊಲೀಸ್ ಪೇದೆ ತನ್ನದೆಷ್ಟು ಕೆಲಸವಿತ್ತೋ ಅಷ್ಟೇ ಮಾಡಿದ್ದರೆ ಏನೂ ಆಗುತ್ತಿರಲಿಲ್ಲವೇನೋ. ಆದರೆ ಆತ ಆ ಮಹಿಳೆಯ ಪರಿಚಯ ಮಾಡಿಕೊಂಡು ಸ್ಟೇಷನ್ ಆಚೆಗೂ ಸಂಬಂಧ ಮುಂದುವರೆಸಿದ್ದೇ ಇವತ್ತು ಜೈಲ್ ಸೇರುವಂತಾಗಿದೆ. ಇತ್ತೀಚೆಗಿನ ದಿನಗಳಲ್ಲಿ ಒಂದಲ್ಲ ಒಂದು ಕಾರಣಗಳಿಗೆ ಹೊಂದಾಣಿಕೆ ಬಾರದೆ ಗಂಡ ಹೆಂಡತಿಯರು ಪೊಲೀಸ್ ಠಾಣೆ ಮೆಟ್ಟಿಲೇರುತ್ತಿರುವುದು ಮಾಮೂಲಿಯಾಗಿದೆ. ಇಂತಹ ಸಂದರ್ಭಗಳಲ್ಲಿ ಮಹಿಳೆಯರಿಗೆ ನ್ಯಾಯ ಕೊಡಿಸುವುದು ಆದ್ಯ ಕರ್ತವ್ಯವಾಗುತ್ತದೆ. ಆದರೆ ಅದು ಬಿಟ್ಟು ಅದೇ ನೆಪ ಬಳಸಿ ಅವರೊಂದಿಗೆ ಸಂಬಂಧ ಬೆಳೆಸುವುದೆಷ್ಟು ಸರಿ?



ಇಲ್ಲಿ ಪೊಲೀಸ್ ಪೇದೆ ಮಾಡಿದ್ದು ಅದನ್ನೇ... ಒಂದು ವೇಳೆ ಎಲ್ಲರಂತೆ ಕೆಲಸ ಮಾಡಿಕೊಂಡಿದ್ದರೆ ಇಷ್ಟರಲ್ಲೇ ಮದುವೆಯಾಗಿ ಹನಿಮೂನ್‌ಗೆ ಹೋಗಬಹುದಿತ್ತೇನೋ ಆದರೆ ತಾನು ಮಾಡಿದ ಪಾಪಕೃತ್ಯಕ್ಕೆ ಜೈಲ್ ಸೇರುವಂತಾಗಿದೆ. ಇಷ್ಟಕ್ಕೂ ಈ ಪೊಲೀಸ್ ಪೇದೆ ಯಾರು? ಈತನೇಕೆ ಹಾಗೆ ಮಾಡಿದ ಎಂಬುದನ್ನು ನೋಡುತ್ತಾ ಹೋದರೆ ಇದೆಲ್ಲವೂ ಅನೈತಿಕ ಸಂಬಂಧದಿಂದ ಆದ ಪ್ರಮಾದ ಎನ್ನುವುದರಲ್ಲಿ ಎರಡು ಮಾತಿಲ್ಲ. ಇವತ್ತು ಕೊಲೆ ಮಾಡಲು ಹೋಗಿ ಸಿಕ್ಕಿ ಬಿದ್ದು ಜೈಲ್ ಸೇರಿರುವ ಪೊಲೀಸ್ ಪೇದೆ ಕೊಟ್ರೇಶ್ (30) ಮೂಲತಃ ಹಾವೇರಿ ಜಿಲ್ಲೆಯವನಾಗಿದ್ದು, ಕೊಡಗಿನ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡಿಕೊಂಡಿದ್ದನು. ಈತ ಇದುವರೆಗೆ ಯಾವುದೇ ಕರ್ತವ್ಯ ಲೋಪದಲ್ಲಿ ತಗಲಾಕಿಕೊಂಡಿರಲಿಲ್ಲ. ಆದರೆ ಒಬ್ಬ ಪೊಲೀಸ್ ಪೇದೆಯಾಗಿ ಕಾನೂನಿನ ಅರಿವಿದ್ದರೂ ಏಕೆ ಹೀಗೆ ಮಾಡಿದ ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

**ಪ್ರೇಯಸಿಯ ಗಂಡನ ಕೊಲೆಗೆ ಯತ್ನ**

ಕೊಟ್ರೇಶ್ ಕೆಲಸ ಮಾಡುತ್ತಿದ್ದ ಶನಿವಾರಸಂತೆ ಪೊಲೀಸ್ ಠಾಣೆಗೆ ಇದುವರೆಗೆ ಅದೆಷ್ಟು ಗಂಡ ಹೆಂಡಿರ ಜಗಳದ ದೂರುಗಳು ಬಂದಿದೆಯೋ ಗೊತ್ತಿಲ್ಲ. ಆದರೆ ಅದೊಂದು ದೂರು ಹೊತ್ತು ಬಂದಿದ್ದ ಮಹಿಳೆ ಆಯಿಷಾ ಮಾತ್ರ ಇವನಿಗೆ ತಗಲಾಕಿಕೊಂಡಿದ್ದಳು. ಇಲ್ಲಿ ಅವಳೇ ಇವನೊಂದಿಗೆ ಕ್ಲೋಸ್ ಆದಳೋ ಅಥವಾ ಈತನೇ ಅವಳ ಹಿಂದೆ ಬಿದ್ದನ ಗೊತ್ತಿಲ್ಲ ಒಟ್ಟಾರೆ ಇಬ್ಬರು ಹತ್ತಿರವಾಗಿದ್ದರು. ಈಕೆ ದೂರದಲ್ಲೇನು ಇರಲಿಲ್ಲ ಕೊಟ್ರೇಶ್ ವಾಸಿಸುತ್ತಿದ್ದ ಮನೆಯ ಪಕ್ಕದಲ್ಲಿಯೇ ಇದ್ದಳು. ಹೀಗಾಗಿ ಇವರಿಬ್ಬರು ಅಪರಿಚಿತರೇನೂ ಆಗಿರಲಿಲ್ಲ.

29 ವರ್ಷದ ಮಹಿಳೆ ಆಯಿಷಾ ಆರು ವರ್ಷಗಳ ಹಿಂದೆ ಶನಿವಾರಸಂತೆ ನಿವಾಸಿ ಇಫ್ರಾಜ್ ಎಂಬಾತನನ್ನು ಮದುವೆಯಾಗಿದ್ದಳು. ಈ ದಂಪತಿಗೆ ಒಂದು ಮಗುವೂ ಇದೆ. ಆದರೆ ವರ್ಷ ಕಳೆದಂತೆ ಇವರ ದಾಂಪತ್ಯದಲ್ಲಿ ಬಿರುಕು ಕಾಣಿಸಲಾರಂಭಿಸಿತ್ತು. ಜಗಳಗಳು ತಾರಕಕ್ಕೇರಿದಾಗ ಬೇರೆ ದಾರಿ ಕಾಣದೆ ಆಯಿಷಾ ಶನಿವಾರ ಸಂತೆ ಪೊಲೀಸ್ ಠಾಣೆ ಮೆಟ್ಟಿಲೇರಿ ಗಂಡ ಇಫ್ರಾಜ್ ವಿರುದ್ಧ ದೂರು ನೀಡಿದ್ದಳು. ಈ ವೇಳೆ ಆಕೆಯ ಸಹಾಯಕ್ಕೆ ಬಂದವನೇ ಪೇದೆ ಕೊಟ್ರೇಶ್. ಈತ ಅವಳಿಗೆ ಸಹಾಯ ಮಾಡುವ ಮೂಲಕ ಹತ್ತಿರವಾಗಿದ್ದನು. ಸದ್ದಿಲ್ಲದೆ ಇವರ ನಡುವೆ ಆತ್ಮೀಯತೆ ಬೆಳೆದಿತ್ತು. ಹೀಗಿರುವಾಗಲೇ ಗಂಡ ಇಫ್ರಾಜ್‌ಗೆ ಪೇದೆ ಕೊಟ್ರೇಶ್ ಮೂಲಕ ಗತಿ ಕಾಣಿಸಲು ಆಯಿಷಾ ಮುಂದಾಗಿದ್ದಳು. ಆಯಿಷಾ ಹೇಳಿದಂತೆ ಕಿವಿ ನೆಟ್ಟಗೆ ಮಾಡಿಕೊಂಡ ಕೊಟ್ರೇಶ್ ತಾನೊಬ್ಬ ಪೊಲೀಸ್ ಕಾನೂನು ಕೈಗೆ ತೆಗೆದುಕೊಳ್ಳಬಾರದು ಎಂಬುದನ್ನು ಮರೆತು ಇಫ್ರಾಜ್‌ನನ್ನು ಮುಗಿಸಲು ಸಿದ್ಧನಾಗಿ ಬಿಟ್ಟಿದ್ದನು.



ಆರೋಪಿ ಆಯಿಷಾ

ಅವತ್ತು ಅಕ್ಟೋಬರ್ 16ರ ಮಧ್ಯರಾತ್ರಿ ಆಯಿಷಾ ಪೊಲೀಸ್ ಪೇದೆ ಕೊಟ್ರೇಶ್‌ನನ್ನು ಮನೆಗೆ ಕರೆಯಿಸಿಕೊಂಡು ಗಂಡ ಇಫ್ರಾಜ್‌ನನ್ನು ಮುಗಿಸುವಂತೆ ಹೇಳಿದ್ದಳು. ಅದರಂತೆ ಮನೆಗೆ ಬಂದಿದ್ದ ಕೊಟ್ರೇಶ್ ಕೋಣೆಯಲ್ಲಿ ಮಲಗಿದ್ದ ಇಫ್ರಾಜ್‌ನನ್ನು ದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಲು ಯತ್ನಿಸಿದ್ದನು. ಈ ವೇಳೆ ಇಫ್ರಾಜ್ ಜೋರಾಗಿ ಕೂಗಿಕೊಂಡಿದ್ದು ಆತನ ಕಿರುಚಾಟ ಕೇಳಿ ಪಕ್ಕದ ಕೋಣೆಯಲ್ಲಿ ಮಲಗಿದ್ದ ಇಫ್ರಾಜ್‌ನ ಅಕ್ಕನ ಮಗ ಬಂದು ಬಾಗಿಲು ಬಡಿದಿದ್ದು ಈ ವೇಳೆ ಇಫ್ರಾಜ್ ಆರೋಪಿ ಕೊಟ್ರೇಶ್‌ನ ಬೆರಳು ಕಚ್ಚಿ ಆತನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದನು. ಆದರೆ ಇನ್ನು ಮುಂದೆ ಇಫ್ರಾಜ್‌ನನ್ನು ಮುಗಿಸುವುದು ಸಾಧ್ಯವಾಗಲ್ಲ ಎಂಬುದು ಅರಿವಿಗೆ ಬರುತ್ತಿದ್ದಂತೆಯೇ ಆತ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದನು. ಆದರೆ ತಾನೇ ಕರೆಯಿಸಿದ್ದರೂ ಆಯಿಷಾ ತನಗೇನು ಗೊತ್ತೇ ಇಲ್ಲ ಎಂಬಂತೆ ನಾಟಕವಾಡಿದ್ದಳು.

ಈ ಘಟನೆ ಬಳಿಕ ಇಫ್ರಾಜ್ ಭಯಭೀತನಾಗಿದ್ದನು. ಆದರೆ ರಾತ್ರಿವೇಳೆ ತನ್ನ ಮೇಲೆ ದಾಳಿ ಮಾಡಿದ ವ್ಯಕ್ತಿಯನ್ನು ಗುರುತು ಹಿಡಿಯುವ ಸ್ಥಿತಿಯಲ್ಲಿ ಅವನು ಇರಲಿಲ್ಲ. ಜರ್ಕಿನ್ ಹಾಗೂ ಮುಸುಕು ಹಾಕಿದ್ದರಿಂದ ಕೊಲೆ ಮಾಡಲು ಬಂದ ವ್ಯಕ್ತಿಯ ಗುರುತು ಹಿಡಿಯುವುದು ಕಷ್ಟವಾಗಿತ್ತು. ಇಫ್ರಾಜ್‌ಗೂ ತನ್ನನ್ನು ಕೊಲೆ ಮಾಡಲು ಬಂದ ವ್ಯಕ್ತಿ ತನ್ನ ಹೆಂಡತಿಯ ಪ್ರಿಯಕರ ಎಂಬ ಸಣ್ಣ ಅನುಮಾನ ಬಂದಿರಲಿಲ್ಲ. ಆದರೆ ಈ ಬಗ್ಗೆ ಸೋಮವಾರ ಪೇಟೆ ಠಾಣೆಗೆ ತೆರಳಿದರೂ ದೂರು ಪಡೆದು ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ಹಿಂದೇಟು ಹಾಕಿದ್ದರು. ಹೀಗಾಗಿ ಇಫ್ರಾಜ್ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ ರಾಮರಾಜನ್ ಅವರನ್ನು ನೇರವಾಗಿ ಭೇಟಿ ಮಾಡಿ ದೂರು ನೀಡಿದ್ದರು.

**ಪೊಲೀಸ್ ಪೇದೆ ಸಿಕ್ಕಿಬಿದ್ದಿದ್ದು ಹೇಗೆ?**

ಈ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ಎಸ್ಪಿ ರಾಮರಾಜನ್ ಪೊಲೀಸರಿಗೆ ಸೂಚಿಸಿದ್ದರು. ಈ ಪ್ರಕರಣದ ಬೆನ್ನತ್ತಿ ತನಿಖೆ ಆರಂಭಿಸಿದ ಪೊಲೀಸರಿಗೆ ಅಚ್ಚರಿಯೊಂದು ಕಾದಿತ್ತು. ಜತೆಗೆ ಪೊಲೀಸ್ ಠಾಣೆಗೆ ಹೋಗುವವರೆಗೂ ತನ್ನ ಪತ್ನಿ ಜೊತೆ ಸೇರಿ ದಾಳಿ ಮಾಡಿದ್ದು ಯಾರು? ಅನ್ನೋ ಮಾಹಿತಿ ಇಫ್ರಾಜ್‌ಗೆ ಇರಲಿಲ್ಲ, ಆದರೆ, ಎಸ್ಪಿ ಭೇಟಿ ಮಾಡಿದ ಬಳಿಕ ಶನಿವಾರ ಸಂತೆ ಪೊಲೀಸ್ ಠಾಣೆಗೆ ದೂರು ನೀಡಲು ತೆರಳಿದಾಗ ಅಲ್ಲಿದ್ದ ಪೇದೆ ಕೊಟ್ರೇಶ್ ಅಸಹಜವಾಗಿ ವರ್ತಿಸಲು ಶುರುಮಾಡಿದ್ದನು. ಜತೆಗೆ ತನ್ನ ಕೈ ಬೆರಳನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡಿದ್ದನು. ಇದೇ ವೇಳೆ ತೀವ್ರ ಬೆವರುತ್ತಿದ್ದ ಆತ ವಿಚಿತ್ರವಾಗಿ ವರ್ತಿಸಲು ಶುರು ಮಾಡಿದ್ದನು.

ಈ ಸಂದರ್ಭದಲ್ಲಿ ಇಫ್ರಾಜ್ ಆತನ ಬೆರಳನ್ನ ನೋಡಿದಾಗ ಗಾಯವಾಗಿರುವುದು ಗಮನಕ್ಕೆ ಬಂದಿದೆ. ಅಲ್ಲದೇ, ಕೊಲೆ ಯತ್ನ ಸಂದರ್ಭದಲ್ಲಿ ಕೊಟ್ರೇಶ್ ಓಡಿ ಹೋಗುವಾಗ ಚಪ್ಪಲಿ ಬಿಟ್ಟು ಹೋಗಿದ್ದನು. ಹೀಗಾಗಿ ಆ ಚಪ್ಪಲಿ ಸೈಜ್ ಮತ್ತು ಪೇದೆ ಕೊಟ್ರೇಶ್ ಶೂ ಸೈಜ್ ಮ್ಯಾಚ್ ಆಗಿದೆ. ಜತೆಗೆ ಕೊಲೆ ಯತ್ನ ಸಂದರ್ಭದಲ್ಲಿ ಆರೋಪಿ ಪೊಲೀಸರು ಧರಿಸುವ ನೀಲಿ ಬಣ್ಣದ ಕ್ರೀಡಾ ಜರ್ಕಿನ್ ಧರಿಸಿದ್ದು ನೆನಪಿಗೆ ಬಂದಿದೆ. ಅದೂ ಅಲ್ಲದೇ, ಇಫ್ರಾಜ್ ಎಸ್ಐ ಜೊತೆ ಮಾತನಾಡುವಾಗ ಪೇದೆ ಕೊಟ್ರೇಶ್ ಬಾಗಿಲು ಬಳಿ ನಿಂತು ಮಾತುಗಳನ್ನ ಕದ್ದು ಆಲಿಸುತ್ತಿದ್ದದ್ದು ಗಮನಕ್ಕೆ ಬಂದಿದೆ.

ಇವೆಲ್ಲದ್ದಕಿಂತ ಹೆಚ್ಚು ಕೊಟ್ರೇಶ್ ಪತ್ನಿ ಆಯಿಷಾಳ ತಂದೆ-ತಾಯಿ ನೆಲೆಸಿರುವ ಕಟ್ಟಡದಲ್ಲೇ ಬಾಡಿಗೆಗೆ ಇದ್ದಾನೆ. ಹೀಗಾಗಿ ತನ್ನ ಮೇಲೆ ದಾಳಿ ಮಾಡಿದ್ದು ಈತನೇ ಎಂಬುದು ಇಫ್ರಾಜ್‌ಗೆ ಸ್ಪಷ್ಟವಾಗಿದೆ. ಈ ವಿಚಾರವನ್ನು ಎಸ್‌ಐಗೆ ತಿಳಿಸಿದ ಹಿನ್ನೆಲೆಯಲ್ಲಿ ಪೊಲಿಸರು ಕೊಟ್ರೇಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಸತ್ಯ ಒಪ್ಪಿಕೊಂಡಿದ್ದಾನೆ. ಸದ್ಯ ಕೊಟ್ರೇಶ್ ಮತ್ತು ಕೊಲೆಗೆ ಕುಮ್ಮಕ್ಕು ನೀಡಿದ ಆಯಿಷಾಳನ್ನು ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ. ಪ್ರಕರಣದ ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸುವಂತೆ ಇಫ್ರಾಜ್ ಕುಟುಂಬ ಮನವಿ ಮಾಡಿದೆ.

# ಪಾತಕ ಪ್ರಪಂಚ

# ಇದೆಂತಹ ಹುಚ್ಚಾಟ

ದೇಶ-ಫ್ರಾನ್ಸ್. ಕೇಂದ್ರಸ್ಥಳ-ಪ್ಯಾರಿಸ್ ನಗರ.

ವಿಲಕ್ಷಣ ಹುಚ್ಚ- ಸ್ಟೀವರ್ಡ್ ಹ್ಯಾರಿಸನ್ ಸೂಚನೆ-ವಿಚಿತ್ರ-ವಿಲಕ್ಷಣತೆಗೆ ಸಂಬಂಧ ಪಡುವ ಈ ಲೇಖನವನ್ನು ಓದುವ ಮೊದಲು ಬದಲಾವಣೆ ಬಗ್ಗೆ ತಿಳಿಸುವುದು ಅನಿವಾರ್ಯ. 2005ರಿಂದ 2008ರ ಅವಧಿಯಲ್ಲಿ ಈ ಘಟನೆ ನಡೆದದ್ದು ಫ್ರಾನ್ಸ್ ದೇಶದಲ್ಲಿ. ದೇಶ, ಸ್ಥಳ, ಪಾತ್ರಗಳ ಹೆಸರುಗಳನ್ನು ಮಾತ್ರ ಬದಲಿಸಿಕೊಂಡು, ಅದೇ ವಿಲಕ್ಷಣ ವ್ಯಕ್ತಿಯ ಕತೆಯನ್ನು ಹೇಳಲಾಗುತ್ತದೆ.

ಪ್ಯಾಲೇಸ್ ವ್ಯೂ ಬಂಗಲೆ

ಸ್ಟಾರ್ ಹೋಟೆಲ್‌ನ ವೈಭವ, ಎಲ್ಲಾ ಅನುಕೂಲ ಇರುವ ಏಕಾಂತ ಕೊಠಡಿಯಲ್ಲಿ ಅವನು ಫಾರಿನ್ ವಿಸ್ಕಿ ಕುಡಿಯುತ್ತಾ, ಸ್ಪೆಷಲ್ ಆಗಿ ಫ್ರೈ ಮಾಡಿ ಮಸಾಲೆ ಹಾಕಿರುವ ಜಿಂಕೆ ಮಾಂಸ ತಿನ್ನುತ್ತಿದ್ದಾನೆ.

ಅವನು ಶ್ರೀಗಂಧರಾಜ್!

ಸ್ಥಳ ಬೆಂಗಳೂರು.

ಅವನು ಟೇಬಲ್ ಮೇಲೆ ಇದ್ದ ಆಲ್ಬಂ ಅನ್ನು ಎಳೆದುಕೊಂಡು ನೋಡುತ್ತಾ ನಗುತ್ತಿದ್ದಾನೆ. ಸುಮಾರು ನಲವತ್ತು ಮಂದಿ ಚೆಲುವೆಯರ ಫೋಟೋಗಳಿವೆ.

ಅವರೆಲ್ಲಾ ಯಾರು?

ಕಾಲೇಜಿನ ಯುವತಿಯರಲ್ಲ.

ಸಿನಿಮಾ ನಟಿಯರಲ್ಲ.

ಗಗನಸಖಿ ಚೆಲುವೆಯರಲ್ಲ.

ಟಿ.ವಿ. ಸೀರಿಯಲ್ ನಟಿಯರಲ್ಲ.

ಇವರೆಲ್ಲಾ ಸಾಂಪ್ರದಾಯಿಕ ಸೌಂದರ್ಯದ ಸಹಜ ಚೆಲುವಿನ ಆಕರ್ಷಣೆ ಇರುವ ಮತ್ತು ಮುಖ್ಯವಾಗಿ ಮಧ್ಯಮ ವರ್ಗದ ಕುಟುಂಬದ ಸೌಂದರ್ಯವತಿ ಗೃಹಿಣಿಯರು.

ಒಬ್ಬರಿಗಿಂತ ಮತ್ತೊಬ್ಬರು ಚೆನ್ನಾಗಿದ್ದಾರೆ. ಎಲ್ಲರ ಎದೆಯ ಮೇಲೆ ಮಾಂಗಲ್ಯದ ಸರ ಕಂಡು ಬರುತ್ತಿದೆ.

ಶ್ರೀಗಂಧರಾಜ್ ನೋಡುತ್ತಿದ್ದಾನೆ.

ಮುಖದ ರೀತಿ ಬದಲಾಗುತ್ತಿದೆ.

ಕಣ್ಣುಗಳು ಹೊಳೆಯುತ್ತಿವೆ.

ನಿಶ್ಯಬ್ದವಾಗಿ ನಗುತ್ತಿದ್ದಾನೆ.

ನಗುವಿನಲ್ಲಿ ವ್ಯಂಗ್ಯತೆಯ ಜೊತೆಗೆ ಶೀತಲ ಕ್ರೌರ್ಯ ತುಂಬಿದೆ.

ಫಾರಿನ್ ಸಿಗರೇಟ್ ಹತ್ತಿಸಿದನು.

ಹೊಗೆ ಬಿಡುತ್ತಾ ಸಿಗರೇಟ್‌ಅನ್ನು ಗೃಹಿಣಿಯೊಬ್ಬಳ ಫೋಟೋದ ಮೇಲೆ ಒತ್ತಿದನು. ಒಂದು ಭಾಗ ಸುಟ್ಟಿದೆ.

ಆಲ್ಬಂನಲ್ಲಿರುವ ಎಲ್ಲಾ ಗೃಹಿಣಿಯರ ಫೋನ್ ನಂಬರ್, ಅಡ್ರೆಸ್ ಮತ್ತು ಅವರ ಕೌಟುಂಬಿಕ ಹಿನ್ನೆಲೆಯ ವಿವರಣೆ ಇವೆ.

ಆ ಹೆಸರನ್ನು ಬರೆದನು.

ಶ್ರೀಮತಿ ಊರ್ಮಿಳ ಸತ್ಯನ್.

●●●

ಬೆಳಗಿನ ಒಂಭತ್ತೂವರೆ.

ಗಂಡ ಆಫೀಸ್‌ಗೆ ಹೊರಟಿದ್ದಾನೆ. ಬೆಳಿಗ್ಗೆ ಎಚ್ಚರ ಆಗಿದ್ದು ತಡವಾಗಿದ್ದರಿಂದ ತಿಂಡಿ, ಅಡುಗೆ ಕೆಲಸ ತಡವಾಗಿದೆ. ಗಂಡನಿಗೆ ಬೆಳಗಿನ ಉಪಹಾರ, ಮಧ್ಯಾಹ್ನದ ಲಂಚ್ ಬಾಕ್ಸ್ ರೆಡಿ ಮಾಡಿ ಕಳಿಸಿದ ಮೇಲೆ, ತಾನು ಕೆಲಸಕ್ಕೆ ಹೊರಡಲು ಸಿದ್ಧಳಾದಳು.

ಅವಳು ಅದೇ ಬೀದಿಯಲ್ಲಿರುವ ಪ್ರೈವೇಟ್ ಸ್ಕೂಲ್‌ನಲ್ಲಿ ಟೀಚರ್ ಆಗಿದ್ದಾಳೆ. ನಡೆದುಕೊಂಡು ಹೊರಟರೆ ಐದು ನಿಮಿಷಗಳಲ್ಲಿ ತಲುಪುತ್ತಾಳೆ. ಅವಳಿಗೆ ಟೆನ್‌ಷನ್ ಜಾಸ್ತಿ ಆಗಿದೆ. ಏಕೆಂದರೆ ಗಂಡನಿಗೆ ವಿಪರೀತ ಆತುರ ಮತ್ತು ದುಡುಕು ಸ್ವಭಾವದವನು. ಸ್ವಂತ ಮನೆ ಕಟ್ಟಿ, ಕಾರು, ಬೈಕು ತಗೊಂಡು ಸಂಬಂಧಿಕರಿಂದ ಭೇಷ್ ಅಂತ ಅನಿಸಿಕೊಳ್ಳಬೇಕು ಎಂಬ ಹುಚ್ಚಿನಿಂದ ಸಾಲ ಮಾಡಿದ್ದನು.

ಬ್ಯಾಂಕ್ ಲೋನ್. ಹ್ಯಾಂಡ್ ಲೋನ್. ಆಭರಣಗಳ ಮೇಲೆ ಲೋನ್. ದಿನ ಬೆಳಗಾದರೆ ಗಂಡ-ಹೆಂಡತಿ ಈ ವಿಚಾರವಾಗಿ ಜಗಳ ಆಡುತ್ತಿದ್ದರು.

ಇದೆಂತಹ ಬದುಕು?

ನೂರು ರೂಪಾಯಿ ಸಹ ಧಾರಾಳವಾಗಿ ಖರ್ಚು ಮಾಡಲು ಅವಕಾಶ ಇರಲಿಲ್ಲ.

ಸಾಲಗಾರರ ಕಾಟ. ಕೈ ಸಾಲದವರ ಬಡ್ಡಿ ಕಾಟ.

ಇವಳ ಸಂಬಂಧ ಬರುವ ದಿನ ಹದ್ದಿನ ರೀತಿ ಕಾಯುತ್ತಾ ಕಿತ್ತುಕೊಳ್ಳುತ್ತಿದ್ದರು.

ಈ ಸಮಸ್ಯೆ ಬಗೆಹರಿಯೋದು ಯಾವಾಗ? ಎಲ್ಲಾ ಗೃಹಿಣಿಯರಂತೆ ನಾನೂ ಸಹ ಮಜಾ ಮಾಡೋದು ಯಾವಾಗ?

ನನಗೆ ಹಣ ಬೇಕು. ಗಂಡನ ಸಾಲ ತೀರಿಸಲು ಸಹಕರಿಸಬೇಕು ಮತ್ತು ನನಗೆ ಬೇಕಾದುದನ್ನು ತೆಗೆದುಕೊಂಡು ಮಜಾ ಮಾಡಬೇಕು.

ಆದರೆ ಹೇಗೆ ಸಾಧ್ಯ?

ಹಣ ಯಾರು ಕೊಡುತ್ತಾರೆ?

ಸಂಪಾದನೆಗೆ ಮಾರ್ಗ ಏನು?

ಹೊರಟು ಬಾಗಿಲಿನ ಹತ್ತಿರ ಬಂದಾಗ ಕೋರಿಯರ್ ಹುಡುಗ ಸೈಕಲ್‌ನಲ್ಲಿ ಬಂದು "ಮೇಡಂ... ಪಾರ್ಸಲ್ ಬಂದಿದೆ" ಎಂದು ಹೇಳಿ ತನಕ ಇರುವ ಬಾಕ್ಸ್‌ಅನ್ನು ಕೊಟ್ಟು ಸೈನ್ ಮಾಡಿಸಿಕೊಂಡನು.

ಊರ್ಮಿಳ ಒಳಗೆ ಬಂದಳು. ಕುತೂಹಲ ಜಾಸ್ತಿ ಆಗುತ್ತಿದೆ. ಅವಳ ಹೆಸರು, ಫೋನ್ ನಂಬರ್, ವಿಳಾಸ ಎಲ್ಲಾ ಸರಿಯಾಗಿದೆ.

ಕಳಿಸಿರೋದು ಯಾರು? ಇದರಲ್ಲಿ ಏನಿದೆ?

ಫ್ರಂ ಅಡ್ರೆಸ್ ನೋಡಿದಳು. ಬೆಂಗಳೂರು ನಗರದ ರಾಜರಾಜೇಶ್ವರಿನಗರದಿಂದ ಈ ಪಾರ್ಸಲ್ ಬಂದಿದೆ.

ಶ್ರೀಗಂಧರಾಜ್.

ಜಿ.ಆರ್. ಗ್ರೂಪ್ ಆಫ್ ಕಂಪನಿ.

ನಂ. 38-ಎ, 2ನೇ ಕ್ರಾಸ್, ರಾಜರಾಜೇಶ್ವರಿನಗರ ಬೆಂಗಳೂರು

ಅವಳಿಗೆ ಪರಮಾಶ್ಚರ್ಯವಾಗಿದೆ. ಈ ಹೆಸರನ್ನು ಹಿಂದೆ ಕೇಳಿರಲಿಲ್ಲ.

ಯಾರು ಈ ಶ್ರೀಗಂಧರಾಜ್!

ಈ ಬಾಕ್ಸಲ್ಲಿ ಏನಿದೆ? ನನಗ್ಯಾಕೆ ಕಳಿಸಿದ್ದಾರೆ?

ಅವಳೀಗ ಪಾರ್ಸಲ್ ಬಾಕ್ಸ್‌ಅನ್ನು ಓಪನ್ ಮಾಡಿದಳು.

ಅವಳ ಮುಖ ಅರಳಿತು. ಕಣ್ಣುಗಳು ಮಿನುಗಿದವು.

ಎರಡೆಳೆಯ ಚಿನ್ನದ ಸರ, ಡೈಮಂಡ್ ನೆಕ್‌ಲೇಸ್. ನಾಲ್ಕು ಚಿನ್ನದ ಬಳೆಗಳು. ಎರಡು ಉಂಗುರಗಳು.

ಜೊತೆಗೆ ಸೀಲ್ ಮಾಡಿರುವ ಕವರ್ ಇದೆ. ಓಪನ್ ಮಾಡಿದಾಗ ಇಪ್ಪತ್ತೈದು ಸಾವಿರ ರೂಪಾಯಿ ಹಣ ಕಂಡಿತು.

ರೋಮಾಂಚನ ಆಗುತ್ತಿದೆ.

ನೋ... ನೋ... ನಂಬಲಾಗುತ್ತಿಲ್ಲ.

ಇದೆಲ್ಲಾ ನನಗಾ?

ಕಳಿಸಿರೋದು ಕಂಪನಿ ಮಾಲೀಕ.

ಏನು ಮಾಡಲಿ?

ಆಗ ಫೋನ್ ಕಾಲ್ ಬಂದಿತು. ಅವಳು ಶಾಲೆಗೆ ಹೋಗುವುದನ್ನು ಮರೆತಿದ್ದಾಳೆ. ಯಾವುದೋ ಅನ್‌ನೋನ್ ನಂಬರ್‌ನಿಂದ ಫೋನ್ ಕಾಲ್ ಬಂದಿದೆ. ಆದರೂ ಸಹ ಅಟೆಂಡ್ ಮಾಡಿದಳು.

"ಹಲೋ ಶ್ರೀಮತಿ ಊರ್ಮಿಳಾ... ನೀವು ಹೇಗಿದ್ದೀರ?"

ಅವಳು ಗಾಬರಿ, ಗೊಂದಲದಿಂದ "ನೀವು... ನೀವು ಯಾರು ಅಂತ ಗೊತ್ತಾಗಲಿಲ್ಲ" ಎಂದು ತಡವರಿಸಿದಳು.

"ಮಿಸ್ಟರ್ ಶ್ರೀಗಂಧರಾಜ್. ಜಿ.ಆರ್. ಗ್ರೂಪ್ ಆಫ್ ಕಂಪನಿ ಓನರ್."

ಅವಳು ಪುಳಕಗೊಂಡಳು.

"ಊರ್ಮಿಳಾ... ನಿನಗೆ ಕಳಿಸಿರೋ ಆಭರಣಗಳು ಚೆನ್ನಾಗಿದೆ ತಾನೆ?"

"ಹಾಂ... ತುಂಬಾ ಚೆನ್ನಾಗಿದೆ."

"ಈಗಲೇ ಜ್ಯುಯಲರಿ ಶಾಪ್‌ಗೆ ಹೋಗಿ ನಾನು ನಿನಗೆ ಪ್ರೆಸೆಂಟ್ ಮಾಡಿರೋದು ಒರಿಜಿನಲ್ ಗೋಲ್ಡ್ ಅಂತ ಪರೀಕ್ಷೆ ಮಾಡಿಸು."

ಅವಳು ಉತ್ಸಾಹದಿಂದ "ಪರೀಕ್ಷೆ ಮಾಡಿಸೋ ವಿಚಾರ ಇರಲಿ. ಇದನ್ನೆಲ್ಲಾ ನನಗೆ ಯಾಕೆ ಕಳಿಸಿದ್ದೀರ?"

"ನಿನ್ನಂತ ಸೌಂದರ್ಯ ದೇವತೆ ಈ ಎಲ್ಲಾ ಆಭರಣಗಳನ್ನು ಧರಿಸಿದಾಗ, ನಿನ್ನ ಆ ಚೆಲುವು ಯಾವ ರೀತಿ ಪ್ರಕಾಶಿಸುತ್ತದೆ ಅಂತ ನೋಡಬೇಕು ಎಂಬುದೆ ನನ್ನ ಉದ್ದೇಶ."

ಅವಳ ಮೈ ಕಂಪಿಸಿತು.

ಬೆಚ್ಚನೆಯ ಅನುಭವ ಆಯಿತು.

ಅವಳು ಏನನ್ನೋ ಕೇಳಲು ಪ್ರಯತ್ನ ಮಾಡುತ್ತಿರುವಾಗಲೇ ಶ್ರೀಗಂಧರಾಜ್ ತುಂಬಾ ಮಾದಕ ರೀತಿಯಲ್ಲಿ "ನಾಡಿದ್ದು ನಿನ್ನ ಬರ್ತ್‌ಡೇ. ನೆನಪಿದೆ ತಾನೆ?"

ಅವಳು ಆಶ್ಚರ್ಯದಿಂದ "ನಿಮಗೆ ಹೇಗೆ ಗೊತ್ತಾಯಿತು" ಎಂದು ಕೇಳಿದಳು.

"ನೀನು ನನ್ನ ಪರಮಾಪ್ತರಲ್ಲಿ ಮುಖ್ಯ ಹೆಣ್ಣು. ಹಾಗಾಗಿ ತಿಳಿದುಕೊಂಡೆ. ಹಾಂ... ನಾಳೆ ಇನ್ನೊಂದು ಪಾರ್ಸಲ್ ಬರುತ್ತದೆ."

"ಮೈಗಾಡ್... ಏನು ಕಳಿಸಿದ್ದೀರ?"

"ನಾಳೆ ತನಕ ಸಸ್ಪೆನ್ಸ್."

"ಆಗಲಿ... ನನ್ನ ಗಂಡನಿಗೆ..."

ಶ್ರೀಗಂಧರಾಜ್ ಗಂಭೀರವಾಗಿ "ನಾನು ಆಭರಣಗಳು, ಹಣ, ನಾಳೆ ಕಳಿಸಲಿರುವ ಮತ್ತೊಂದು ಗಿಫ್ಟ್ ಬಗ್ಗೆ ನಿನ್ನ ಗಂಡ ಅಥವಾ ಬೇರೆ ಯಾರಿಗೂ ಗೊತ್ತಾಗಬಾರದು."

ಅವಳು ಗಲಿಬಿಲಿಗೊಳ್ಳುತ್ತಾ "ಯಾಕೆ ಗೊತ್ತಾಗಬಾರದು?"

"ನಿನ್ನ ಗಂಡನಿಗೆ ಶ್ರೀಮಂತನಾಗುವ ಅದೃಷ್ಟ, ಬುದ್ಧಿವಂತಿಕೆ ಇಲ್ಲ. ಇದನ್ನೆಲ್ಲಾ ಕಂಡರೆ ಅಸೂಯೆ ಪಡುತ್ತಾನೆ."

ಗಂಡನ ಬುದ್ಧಿ, ಸ್ವಭಾವ ತಿಳಿದಿರುವ ಅವಳಿಗೆ ಇದು ನಿಜ ಅಂತ ಅನಿಸಿತು.

"ನಾಳೆ ಗಿಫ್ಟ್ ಬಾಕ್ಸ್ ಬರುತ್ತೆ. ಜೊತೆಗೆ ನಾಡಿದ್ದು ನಾನೇ ನಿನ್ನ ಬರ್ತ್‌ಡೇ ಸಲಬರೇಟ್ ಮಾಡ್ತೀನಿ. ಕೇಕ್ ಕಟ್ ಮಾಡಿಸಿದ ಮೇಲೆ ನಿನಗೆ ಎರಡು ಲಕ್ಷ ರೂಪಾಯಿ ಕ್ಯಾಶ್‌ಅನ್ನು ಬರ್ತ್‌ಡೇ ಗಿಫ್ಟ್ ಅಂತ ಕೊಡ್ತೀನಿ."

ಎರಡು ಲಕ್ಷ ನಗದು ಹಣ. ಅವಳು ಕನಸು ಕಾಣುತ್ತಿದ್ದಾಳೆ. ಅದರಲ್ಲಿ ತೇಲುತ್ತಿದ್ದಾಳೆ.

"ಹಲೋ... ಹಲೋ ಊರ್ಮಿಳಾ..."

ಅವಳು ಎಚ್ಚರಗೊಂಡು "ಹಾಂ ಹೇಳಿ. ನಮ್ಮಿಬ್ಬರಿಗೆ ಸಂಬಂಧಪಡುವ ಯಾವ ರಹಸ್ಯವನ್ನೂ ಹೇಳಬಾರದು. ನಿನಗೆ ಆಗಾಗ ಹಣ ಮತ್ತು ಸ್ಪೆಷಲ್ ಗಿಫ್ಟ್ ಸಿಗುತ್ತಿರುತ್ತದೆ" ಎಂದನು.

ಅವಳು ಭ್ರಮೆಗೆ ಒಳಗಾಗಿದ್ದಾಳೆ.

ನನಗೆ ತುಂಬಾ ಹಣ ಬೇಕು.

ಲಕ್ಷ, ಲಕ್ಷ ಸೇರಬೇಕು.

ಆ ಕ್ಷಣದಲ್ಲಿ ತೀರ್ಮಾನಿಸಿದಳು.

ಗಂಡನಿಗೆ ಗೊತ್ತಾಗದ ರೀತಿ ಶ್ರೀಗಂಧರಾಜ್ ಜೊತೆ ವ್ಯವಹರಿಸಬೇಕು.

ಈ ಆಲೋಚನೆ ಬಂದಿತು.

ಶ್ರೀಗಂಧರಾಜ್ ನನಗಾಗಿ ಇಷ್ಟೊಂದು ಹಣವನ್ನು ಯಾಕೆ ಖರ್ಚು ಮಾಡುತ್ತಿದ್ದಾನೆ. ಆ ಶ್ರೀಮಂತನಿಗೆ ನನ್ನ ಸೌಂದರ್ಯ ಇಷ್ಟ ಆಗಿರುವುದೆ?

ಈ ಆಲೋಚನೆಯೊಂದಿಗೆ ಬೇರೊಂದು ಕಲ್ಪನೆ ಸೇರಿ ಒಂದು ರೀತಿ ಭಯ ಮತ್ತು ಮುಜುಗರ ಆಯಿತು.

ಅವಳಿಗೆ ಚಡಪಡಿಕೆ ಪ್ರಾರಂಭವಾಗಿದೆ. ಅಂತಿಮವಾಗಿ ಗೆದ್ದಿದ್ದು ಶ್ರೀಮಂತಿಕೆಯ ಆಕರ್ಷಣೆ.

ಅವಳು ಮಾನಸಿಕವಾಗಿ ಸಿದ್ಧಳಾದಳು.

ಆ ರಾತ್ರಿ ನಿದ್ದೆ ಬರಲಿಲ್ಲ.

ಶ್ರೀಗಂಧರಾಜ್ ತನ್ನ ದೇಹ ಸೌಂದರ್ಯವನ್ನು ಬರಗೆಟ್ಟವನ ರೀತಿ ಅನುಭವಿಸುತ್ತಿರುವ ಕಲ್ಪನೆ ಬಂದಿದ್ದರಿಂದ ಹೊರಳಾಡಿದ್ದಳು.

ನಿತ್ಯದಂತೆ ಬೆಳಗಾಯಿತು.

ಅವಳಿಗೆ ಮನೆ ಕೆಲಸ ಮಾಡಲು ಮನಸ್ಸಿರಲಿಲ್ಲ. ಆ ಬೀದಿಯಲ್ಲಿರುವ ಉಡುಪಿ ಹೋಟೆಲ್‌ನಿಂದ ತಿಂಡಿ ತರಿಸಿದಳು. ಮಧ್ಯಾಹ್ನದ ಊಟಾನ ಆಫೀಸ್ ಕ್ಯಾಂಟೀನ್‌ನಲ್ಲಿ ಮಾಡಿಕೊಳ್ಳಿ ಎಂದು ತಲೆ ನೋವಿನ ನೆಪ ಹೇಳಿ ಮಲಗಿದಳು.

ಬೆಳಗಿನ ಹತ್ತೂವರೆ.

ಕೋರಿಯರ್ ಬಂದಿದೆ.

ಸೈನ್ ಮಾಡಿ ತೆಗೆದುಕೊಂಡು ಒಳಗೆ ಬಂದು ಆ ಬಾಕ್ಸ್ ಓಪನ್ ಮಾಡಿದಳು.

ಮೈಸೂರಿನ ಸಿಲ್ಕ್ ಸೀರೆ.

ತುಂಬಾ... ತುಂಬಾ ಚೆನ್ನಾಗಿದೆ.

ನೋಡಿದ ಕೂಡಲೇ ಅವಳಿಗೆ ಇದರ ಬೆಲೆ ತುಂಬಾ ಜಾಸ್ತಿ ಎಂದು ಅನಿಸಿತು. ನಲವತ್ತರಿಂದ ಐವತ್ತು ಸಾವಿರದ ತನಕ ಆಗುತ್ತದೆ ಎಂದುಕೊಂಡಳು.

ಫೋನ್‌ಕಾಲ್ ಬಂದಿತು.

ಶ್ರೀಗಂಧರಾಜ್ ಫೋನ್ ಕಾಲ್ ಎಂದು ನಂಬರ್ ನೋಡಿದ ಕೂಡಲೇ ಗೊತ್ತಾಯಿತು. ಅವಳು ಉತ್ಸಾಹದಿಂದ "ಪಾರ್ಸಲ್ ಬಂತು ಸಾರ್" ಎಂದು ಹೇಳಿದಳು.

"ಸಾರ್ ಅಲ್ಲ ಶ್ರೀಗಂಧ ಅಂತ ಕೂಗು."

ಅವಳ ಮುಖ ಕೆಂಪಾಯಿತು.

"ಸೀರೆ ಚೆನ್ನಾಗಿದ್ಯ?"

"ತುಂಬಾ ಚೆನ್ನಾಗಿದೆ."

"ನನಗೊಂದು ಆಸೆ ಇದೆ."

"ಹೂಂ... ಏನದು?"

"ಊರ್ಮಿಳಾ... ನಾಳೆ ನಿನ್ನ ಬರ್ತ್‌ಡೇನಾ ನನ್ನ ಫಾರಂ ಹೌಸ್‌ನಲ್ಲಿ ಆಚರಿಸಬೇಕು."

"ಅಂದರೆ... ಅಂದರೆ...'

"ಸಂಜೆ ಐದು ಗಂಟೆ ಹೊತ್ತಿಗೆ ನಿನ್ನನ್ನು ಕರೆದುಕೊಂಡು ಹೋಗಲು ಕಾರು ಬರುತ್ತೆ. ನೀನು ಗ್ರಾಂಡ್ ಆಗಿ ರೆಡಿಯಾಗಿ ಬರಬೇಕು."

"ಯಾವ ರೀತಿ?"

"ಈ ಸೀರೆ ಉಟ್ಟು, ನಾನು ಕಳಿಸಿರುವ ಎಲ್ಲಾ ಆಭರಣಗಳನ್ನು ಧರಿಸಬೇಕು. ನಿನ್ನ ಆಭರಣಗಳನ್ನು ಧರಿಸಬೇಕು. ನಿನ್ನ ಹತ್ತಿರ ಆಭರಣಗಳಿದ್ದರೆ ಅದನ್ನು ಹಾಕಿಕೊಂಡು ಬರಬೇಕು."

"ನನ್ನ ಹತ್ತಿರ ಜಾಸ್ತಿ ಆಭರಣಗಳಿಲ್ಲ."

"ಎಷ್ಟು ಇರುವುದೋ ಅಷ್ಟನ್ನು ಹಾಕಿಕೊಂಡು ಬಾ ಊರ್ಮಿಳಾ."

"ಆದರೆ... ಆದರೆ..."

"ನಾನು ನೀನು ಹೇಳಿದಂತೆ ಗ್ರಾಂಡ್ ಆಗಿ ರೆಡಿಯಾಗಿ ಹೊರಟಾಗ ಗಂಡ ಅಥವಾ ಪರಿಚಯದವರು ನೋಡಿದರೆ ಅನುಮಾನ ಬರುತ್ತೆ."

"ನಾನು ಹೇಳಿದಂತೆ ಮಾಡ್ತೀಯ?"

"ಹೇಳಿ ಸಾರ್."

☞14

13 ☜

"ಶ್ರೀಗಂಧ ಡಿಯರ್ ಅನ್ನು."

ಅವಳಲ್ಲಿ ಕಂಪನ ಉಂಟಾಯಿತು.

"ನಾನು ಕಳಿಸಿರೋ ಆಭರಣಗಳು, ಸೀರೆ ಮತ್ತು ನಿನ್ನ ಹತ್ತಿರ ಇರೋ ಆಭರಣಗಳನ್ನು ತಗೊಂಡು ರೆಡಿಯಾಗಿ ಬಾ. ನನ್ನ ಮನೇಲಿ ನೀನು ಮೇಕಪ್, ಡ್ರೆಸ್ ಮಾಡಿಕೊಳ್ಳ ಬಹುದು."

"ಗೆಸ್ಟ್‌ಗಳು ಬರುತ್ತಾರ?"

"ಯಾರನ್ನೂ ಕರೆದಿಲ್ಲ."

ಅವಳಿಗೆ ನಿರಾಳವಾಯಿತು.

"ನಾನೇ ನನ್ನಕೈಯಾರೆ ಕೇಕ್ ಕಟ್ ಮಾಡಿಸಿ ಎರಡು ಲಕ್ಷ ರೂಪಾಯಿ ಪ್ರೆಸೆಂಟ್ ಮಾಡ್ತೀನಿ."

ಅವರ ಮುಖ ಅರಳಿತು.

'ಒಂದು ರಿಕ್ವೆಸ್ಟ್ ಊರ್ಮಿಳ."

"ಹಾಂ... ಹೇಳಿ... ಏನದು?"

"ಮನೆಗೆ ತಡವಾಗಿ ಬರ್ತೀನಿ ಅಂತ ಅಥವಾ ರಾತ್ರಿ ಬರಲು ಆಗೋಲ್ಲ ಅಂತ ಮೊದಲೇ ಸುಳ್ಳು ಹೇಳಿ ಪ್ಲಾನ್ಸ್ ಮಾಡಿರು."

ಅವಳು ಸಣ್ಣಗೆ ನಡುಗುತ್ತಿದ್ದಾಳೆ. ಅವಳಿಗೆ ಅರ್ಥವಾಗಿದೆ. ಈ ದೇಹ ಸೌಂದರ್ಯ ಅನುಭವಿಸಲು ಇಷ್ಟೆಲ್ಲಾ ಆಕರ್ಷಣೆಗಳನ್ನು ತೋರಿಸುತ್ತಿದ್ದಾನೆ.

ಗಂಡನಿಗೆ ವಂಚನೆ ಮಾಡಲೆ?

ಶೀಲ ಮಲೀನ ಮಾಡಿಕೊಳ್ಳಲೆ?"

"ಹಲೋ... ಹಲೋ... ಊರ್ಮಿಳಾ... ನೀನು ಬರುವಾಗ ನಿನ್ನ ಬ್ಯಾಂಕ್ ಪಾಸ್‌ಬುಕ್ ತಗೊಂಡು ಬಾ. ನಿನಗೆ ಎರಡು ಲಕ್ಷಕ್ಯಾಶ್ ನಗದು ಕೊಡುವುದರ ಜೊತೆಗೆ ಮೂರು ಲಕ್ಷ ಬ್ಯಾಂಕ್ ಜೊತೆಗೆ ಗೂಗಲ್ ಟ್ರಾನ್ಸ್‌ಫರ್ ಮಾಡ್ತೀನಿ."

ಅವಳು ರೋಮಾಂಚನಗೊಂಡಳು.

ನಾನು ಮಡಿವಂತಿಕೆ ಮಾಡಿದರೆ ಶ್ರೀಮಂತಿಕೆಯ ಭಾಗ್ಯ ಬರೋಲ್ಲ. ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ಕಳೆದುಕೊಳ್ಳಲೇಬೇಕು ಎಂಬ ಆಲೋಚನೆಗಳು ಗಟ್ಟಿಯಾಗಿವೆ.

ಪ್ರೋಗ್ರಾಂ ಫಿಕ್ಸ್ ಆಯಿತು. ಗಂಡನಿಗೆ ನಂಬಿಕೆ ಬರುವಂತ ಸುಳ್ಳನ್ನು ಹೇಳಿ ಶ್ರೀಗಂಧರಾಜ್ ಹೇಳಿದಂತೆ ಎಲ್ಲವನ್ನೂ ತೆಗೆದುಕೊಂಡು ಸರ್ಕಲ್ ಹತ್ತಿರ ಬಂದು ಇವಳಿಗಾಗಿ ಕಾಯುತ್ತಿದ್ದ ಕಾರಲ್ಲಿ ಕುಳಿತಳು.

●●●

"ಯಾಕೆ... ಏನಾಗಿದೆ ನಿನಗೆ?"

ಹೆಂಡತಿಯನ್ನು ಕೇಳಿದ ಬಲರಾಮ ಆಕೆಯ ಕಡೆ ಅನುಮಾನದಿಂದ ನೋಡಿದನು.

"ನನಗೆ ತಲೆ ನೋವು... ಸಿಡಿತ... ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡಿ. ಇವತ್ತು ಪೂರ್ತಿ ಹೋಟೆಲ್‌ನಲ್ಲಿ ಏನಾದರೂ ತಿನ್ನಿ."

"ನಿನಗೆ ತಂದುಕೊಡ್ತೀನಿ."

ಅವಳು ರೇಗುತ್ತಾ "ತಲೆನೋವು ಬಂದು ಒದ್ದಾಡ್ತಾ ಇದ್ದೀನಿ. ನನಗೇನೂ ಬೇಡ" ಎಂದಳು.

"ತಲೆನೋವಿನ ಮಾತ್ರೆ ತಂದುಕೊಡ್ತೀನಿ."

ಅವಳು ಕೋಪದಿಂದ "ನನಗೇನೂ ಬೇಡ. ಸಂಜೆ ತನಕ ನಿದ್ದೆ ಮಾಡಿದರೆ ಸರಿಯಾಗುತ್ತದೆ" ಎಂದು ಹೇಳಿ ಮುಖದ ತುಂಬಾ ರಗ್ಗನ್ನು ಎಳೆದುಕೊಂಡು ಮಲಗಿದಳು.

ಗಂಡನಿಗೆ ಇದು ಹೊಸ ಅನುಭವ. ಹೆಂಡತಿ ಯಾವತ್ತೂ ಸಹ ಈ ರೀತಿ ಆಡಿರಲಿಲ್ಲ. ಸಂಜೆ ಐದು ಗಂಟೆಗೆ ಹೋಗಿದ್ದವಳು ಬೆಳಿಗ್ಗೆ ಏಳು ಗಂಟೆಗೆ ಬಂದಿದ್ದಳು.

ಆಗ ತುಂಬಾ ಸುಸ್ತಾಗಿದ್ದಳು.

ಮುಖ ಪೂರ್ತಿ ಬಾಡಿತ್ತು.

ರಸ ಹಿಂಡಿದ ಕಬ್ಬಿನ ಜಲ್ಲೆ ರೀತಿ ಆಗಿದ್ದಾಳೆ. ರಾತ್ರಿ ಇಲ್ಲಿಗೆ ಹೋಗಿದ್ದು! ಇಷ್ಟೊಂದು ಸುಸ್ತಾಗಲು ಕಾರಣ ಏನು?

ಗಂಡನನ್ನು ಅನುಮಾನ ಕಾಡುತ್ತಿದೆ.

ಬೆಳಗಿನ ಹತ್ತು ಗಂಟೆ. ವಿಪರೀತ ತಲೆ ಸಿಡಿಯುತ್ತಿದ್ದರಿಂದ ಅವಳು ಕಾಫಿ ಮಾಡಿಕೊಂಡು ಕುಪಡಿದಳು.

ವಾಟ್ಸಾಪ್ ಮೆಸೇಜ್ ಬಂದಿತು. ವೀಡಿಯೋ ಕ್ಲಿಪ್ ಕಳಿಸಲಾಗಿದೆ. ಅವಳು ಸಣ್ಣಗೆ ನಡುಗುತ್ತಿದ್ದಾಳೆ. ಮುಖ ಬೆವರಾಡುತ್ತಿದೆ. ಪ್ಲೇ ಮಾಡಿ ನೋಡುತ್ತಿದ್ದಾಳೆ.

ಡೆಕೋರೇಷನ್ ಮಾಡಿರುವ ಫ್ರಂಟ್ ಹಾಲ್‌ನ ರಮಣೀಯ ದೃಶ್ಯ! ಟೇಬಲ್ ಮೇಲೆ ಬರ್ತ್‌ಡೇ ಕೇಕ್ ಇದೆ. ಸುತ್ತಲು ಮೇಣದ ಬತ್ತಿಗಳನ್ನು ಹತ್ತಿಸಲಾಗಿದೆ. ಶ್ರೀಗಂಧರಾಜ್ ಕಾಯುತ್ತಿದ್ದಾನೆ.

ಅವಳು ರೂಮಿನಿಂದ ಬಂದಳು. ಇವನು ಕಳಿಸಿದ್ದ ಮತ್ತು ತನ್ನ ಮನೇಲಿದ್ದ ಸ್ವಂತ ಆಭರಣಗಳನ್ನು ಧರಿಸಿದ್ದಾಳೆ. ಮೈಸೂರಿನ ಸಿಲ್ಕ್ ಸೀರೆ ಉಟ್ಟಿದ್ದಾಳೆ.

ಶ್ರೀಗಂಧರಾಜ್ ಉದ್ಗಾರ ತೆಗೆದನು.

"ಬ್ಯುಟಿಫುಲ್... ಮಾರ್ವಲಸ್."

ಅವಳು ಕೆಂಪಾದಳು.

ಶ್ರೀಗಂಧರಾಜ್ ಅವಳ ಹತ್ತಿರ ಬಂದು ಅವಳ ಕೈ ಹಿಡಿದು ಎಳೆದು ತಬ್ಬಿಕೊಂಡು ತುಟಿಗಳ ಮೇಲೆ ಶಬ್ದ ಬರುವ ರೀತಿಯಲ್ಲಿ ಮುತ್ತು ಕೊಟ್ಟ ನಂತರ ಕರೆತಂದನು.

ಅವಳನ್ನು ತಬ್ಬಿಕೊಂಡನು.

ಕೇಕ್ ಕಟ್ ಮಾಡಿಸಿದನು.

ಅವಳ ಕೈ ಕುಲುಕುತ್ತಾ ಬರ್ತ್‌ಡೇ ವಿಶ್ ಮಾಡಿದನೇ ವಿನಹ ಎರಡು ಲಕ್ಷ ಗಿಫ್ಟ್ ಕೊಡಲಿಲ್ಲ. ಬ್ಯಾಂಕ್ ಜೊತೆಗೆ ಮೂರು ಲಕ್ಷ ಹಾಕುವ ವಿಚಾರ ಮಾತಾಡಲೇ ಇಲ್ಲ.

ದೃಶ್ಯ ಬದಲಾಗಿದೆ. ಶ್ರೀಗಂಧರಾಜ್ ಅವಳನ್ನು ಎತ್ತಿಕೊಂಡು ಬ್ರೇಕ್ ಡ್ಯಾನ್ಸ್ ಮಾಡುತ್ತಿದ್ದಾನೆ.

ಹುಚ್ಚು, ಹುಚ್ಚಾಗಿ ಆಡುತ್ತಿದ್ದಾನೆ.

ಗಹಿಗಹಿ ನಗುತ್ತಿದ್ದಾನೆ.

ಅವಳು ಕುಣಿಯುತ್ತಿರುವಾಗ ಸೀರೆ ಎಳೆದು ಸೋಫಾದ ಮೇಲೆ ಹಾಕಿದನು ಮತ್ತು ಎಲ್ಲಾ ಆಭರಣಗಳನ್ನು ತೆಗೆದನು.

ಅವಳು ಪೂರ್ಣ ಬೆತ್ತಲಾಗಿದ್ದಾಳೆ. ಅವಳು ನಾಚಿಕೆ, ಅವಮಾನದಿಂದ ಈಗ ತಲೆ ತಗ್ಗಿಸಿದ್ದಾಳೆ.

ಅವಳನ್ನು ಕುಣಿಸಿದನು. ಎತ್ತಿ ಹಿಡಿದು ತಿರುಗಿಸಿದನು. ಅವಳನ್ನು ಅನುಭವಿಸಲಿಲ್ಲ. ಮಧ್ಯರಾತ್ರಿ ಎರಡು ಗಂಟೆ ತನಕ ವಿಚಿತ್ರ, ವಿಲಕ್ಷಣ ಆಟಗಳನ್ನು ಆಡಿದನು.

ಅವಳು ತತ್ತರಿಸಿ ಹೋಗಿದ್ದಾಳೆ. ಇಲ್ಲ... ಅವಳಿಂದ ಆಗುತ್ತಿಲ್ಲ, ಆದರೆ ಇವನು ಬಿಡುತ್ತಿಲ್ಲ.

ಬೆತ್ತಲಾಗಿರುವ ಅವಳ ದೇಹದ ಪ್ರತಿ ಅಂಗವನ್ನು ಸವರುತ್ತಾ "ಹಣ ಕೊಟ್ಟರೆ ಯಾರ ಜೊತೆ ಬೇಕಾದರೂ ಮಲಗುತ್ತೀಯ ಅಲ್ವ" ಎಂದು ಗಹಿ-ಗಹಿ ನಗುತ್ತಾ ಅವಳ ಕೆನ್ನೆಗೆ ಹೊಡೆದನು.

ಅವಳು ಕಿಟಾರನೆ ಕಿರುಚಿದಳು.

ಪ್ರಜ್ಞಾಶೂನ್ಯಳಾದಳು.

●●●

ಮನೆಯಿಂದ ಹೋಗುವಾಗ ಸಾಧಾರಣ ಸೀರೆ ಉಟ್ಟು ಎಲ್ಲವನ್ನೂ ತಗೊಂಡು ಹೋಗಿದ್ದಳು. ಅಲ್ಲಿಂದ ಬರುವಾಗ ಅದೇ ಹಳೇ ಸೀರೆ ಉಟ್ಟು, ಎಲ್ಲವನ್ನೂ ಅವನಿಗೆ ಕೊಟ್ಟು ಬಂದಿದ್ದಳು.

ಗಂಡ ಮತ್ತು ತವರುಮನೆಯವರು ಮಾಡಿಸಿಕೊಟ್ಟಿದ್ದ ಆಭರಣಗಳನ್ನು ಸಹ ಅವನು ಬಲವಂತವಾಗಿ ಕಿತ್ತುಕೊಂಡಿದ್ದನು. ಅವಳಿಗೆ ಪ್ರಜ್ಞೆ ಬಂದ ಮೇಲೆ ಕಾರಿನಲ್ಲಿ ಅವಳನ್ನು ಮನೆಯ ಹತ್ತಿರ ಬಿಟ್ಟಿದ್ದನು.

ಅತ್ಯಾಚಾರ ಮಾಡಿರಲಿಲ್ಲ.

ಆದರೆ ತುಂಬಾ ವಿಚಿತ್ರವಾಗಿ, ವಿಕೃತ ವಿಲಕ್ಷಣ ರೀತಿಯಲ್ಲಿ ವರ್ತಿಸಿದ್ದನು.

ತಲೆಕೆಟ್ಟವನ ರೀತಿ ಮಾತಾಡಿದ್ದನು.

ಅವನ್ಯಾಕೆ ಹೀಗೆ?

ಅವಳು ಮನೆಗೆ ಬಂದಾಗ ಗಂಡ ಊರಲ್ಲಿ ಇರಲಿಲ್ಲ. ಆಫೀಸ್ ಕೆಲಸದ ಮೇಲೆ ಬೇರೆ ಊರಿಗೆ ಬೆಳಗಿನ ಜಾವ ಹೋಗಿದ್ದರಿಂದ ಸಮಸ್ಯೆ ಎದುರಾಗಲಿಲ್ಲ.

ಅವಳು ಏನೋ ಒಂದಿಷ್ಟು ತಿಂಡಿ ತಿಂದು ಕಾಫಿ ಕುಡಿದು ಸಂಜೆ ಮಲಗಿದ್ದಳು.

ಅವಳಿಗೆ ಫೋನ್ ಕಾಲ್ ಬಂದಿತು.

ಶ್ರೀಗಂಧರಾಜ್ ಮಾಡಿದ್ದಾನೆ.

ತುಂಬಾ ವಿಲಕ್ಷಣ ರೀತಿಯಲ್ಲಿ ನಗಾಡಿದಾಗಲೇ ಇವನು ವಿಲಕ್ಷಣ ಮನುಷ್ಯ ಎಂಬುದು ಗೊತ್ತಾಯಿತು.

ಪ್ರಶ್ನೆ ಎದುರಾಗಿ ಕಾಡಿತು.

ಪುನಹ ಯಾಕೆ ಫೋನ್ ಮಾಡಿದ್ದಾನೆ.

"ಏ... ಊರ್ಮಿಳ... ನನ್ನ ಜೊತೆ ಬೆತ್ತಲಾಗಿ ಕಳೆದಿರುವ ವೀಡಿಯೋ ಕ್ಲಿಪ್ ಕಳಿಸಿದ್ದೀನಿ ನೋಡು."

ಅವಳು ತಡಬಡಿಸಿದಳು.

ಮುಖ ಹಿಂಡಿದಳು.

"ಏ... ನಿನಗೆ ಇಪ್ಪತ್ತೈದು ಸಾವಿರ ರೂಪಾಯಿ ಹಣ ಕೊಟ್ಟಿದ್ದೆ. ಅದರ ಜೊತೆಗೆ ಎರಡು ಲಕ್ಷ ಸೇರಿಸಿ ನನಗೆ ಕೊಡಬೇಕು."

ಅವಳು ಗಾಬರಿಯಾದಳು.

"ಇಲ್ಲದಿದ್ದರೆ ನಿನಗೆ ಕಳಿಸಿರುವ ಈ ವೀಡಿಯೋ ಕ್ಲಿಪ್ ಅನ್ನು ನಿನ್ನ ಗಂಡ ಮತ್ತು ಸಂಬಂಧಿಕರಿಗೆ ಕಳಿಸುತ್ತೇನೆ."

ಅವಳು ಗಾಬರಿ, ಉದ್ವೇಗದಿಂದ "ನನ್ನ ಹತ್ತಿರ ಅಷ್ಟೊಂದು ಹಣ ಇಲ್ಲ."

"ನಿನ್ನ ವಿವರಣೆ ನನಗೆ ಬೇಕಿಲ್ಲ."

"ಪ್ಲೀಸ್... ನನ್ನನ್ನು ಕಾಡಿಸಬೇಡ."

"ಪತಿವ್ರತೆ ತರ ಆಡ್ಬೇಡ. ಹಣ, ಆಭರಣ ಸಿಗುತ್ತೆ ಅಂತ ಒಂದು ರಾತ್ರಿ, ನನ್ನ ಜೊತೆ ಇರಲು ಬಂದಿದ್ದೆ. ನಿನ್ನಂತಹ ಗರತಿ ಗೃಹಿಣಿಯರನ್ನು ನಾನು ಕಾಡಿಸದೆ ಬಿಡಲಾರೆ."

ಅವಳು ಅಳಲಾರಂಭಿಸಿದಳು.

"ನಿನಗೆ ಎರಡು ದಿವಸ ಟೈಂ ಕೊಡ್ತೀನಿ. ಅಷ್ಟರಲ್ಲಿ ನೀನು ಎರಡು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿ ತಲುಪಿಸಬೇಕು. ಇಲ್ಲದಿದ್ದರೆ..." ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದನು.

ಅವಳು ಗೋಳಾಡುತ್ತಿದ್ದಾಳೆ. ತಲೆಕೆಡುತ್ತಿದೆ. ಸ್ವಂತ ಆಭರಣಗಳನ್ನು ಕಳೆದುಕೊಂಡಿದ್ದಾಳೆ. ಈಗ ಅಷ್ಟೊಂದು ಹಣವನ್ನು ಎಲ್ಲಿಂದ ಹೇಗೆ ತರಲು ಸಾಧ್ಯ?

ಏನು ಮಾಡಲಿ?

ಮತ್ತೊಂದು ದಿವಸ ಕಳೆಯಿತು.

ಫೈನಲ್ ಫೋನ್ ಕಾಲ್ ಬಂದಿತು.

"ಇನ್ನು ಒಂದು ಗಂಟೆಯೊಳಗೆ ಹಣವನ್ನು ಕೊಡದಿದ್ದರೆ ಎಲ್ಲಾ ಬಹಿರಂಗ ಆಗುತ್ತೆ.. ನಿನ್ನ ಗಂಡ ಮತ್ತು ಸಂಬಂಧಿಕರ ಫೋನ್ ನಂಬರ್ ತಗೊಂಡಿದ್ದೀನಿ. ಬೆತ್ತಲಾಗಿ ಡ್ಯಾನ್ಸ್ ಮಾಡಿರೋ ಆ ವೀಡಿಯೋ ಕ್ಲಿಪ್ ಅನ್ನು ಕಳಿಸಲು ರೆಡಿ ಮಾಡುತ್ತಿದ್ದೀನಿ."

ಅವಳು ಏನು ಮಾಡಲು ಸಾಧ್ಯ?

ಹಣ ಯಾರು ಕೊಡುತ್ತಾರೆ.

ಅಂತಿಮವಾಗಿ ತೀರ್ಮಾನ ಮಾಡಿ ಅದನ್ನು ಕಾರ್ಯಗತ ಮಾಡಿದಳು.

●●●

ಗೃಹಿಣಿ... ಶ್ರೀಮತಿ ಊರ್ಮಿಳಾ ತನ್ನ ಮನೆಯಲ್ಲಿ ನೇಣಿಗೆ ಶರಣಾಗಿದ್ದಾಳೆ. ಪಳು ಅಂತಿಮ ಪತ್ರ ಬರೆದಿದ್ದಾಳೆ. ನನ್ನ ಸಾವಿಗೆ ಯಾರೂ ಕಾರಣರಲ್ಲ. ಬದುಕು ಸಾಕು ಎಂದು ಅನಿಸಿರೋದ್ರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ.

●●●

ಶ್ರೀಗಂಧರಾಜ್ ಈ ಸುದ್ದಿ ತಿಳಿದು ತಲೆಕೆಟ್ಟವನ ರೀತಿ ಆಡುತ್ತಿದ್ದಾನೆ. ಆನಂದ... ಪೈಶಾಚಿಕ ಆನಂದ. ವಿಲಕ್ಷಣವಾಗಿ ನಗುತ್ತಿದ್ದಾನೆ.

ಅರ್ಧ ಗಂಟೆ ಕಳೆಯಿತು. ಗೋಡೆಯಲ್ಲಿ ಫಿಕ್ಸ್ ಮಾಡಿದ್ದ ವಾರ್ಡ್ ರೋಬ್ ಅನ್ನು ತೆಗೆದನು. ಚೆಲುವೆಯರ ಫೋಟೋಗಳಿವೆ. ಅವುಗಳಲ್ಲಿ ಒಂದನ್ನು ಎತ್ತಿಕೊಂಡು ನೋಡಿದನು. ಚಿತ್ತಾರದ ಚೆಲುವೆ. ಕತ್ತಿನಲ್ಲಿ ಮಾಂಗಲ್ಯ ಇದೆ. ಬಲು ಅಪರೂಪದ ಚೆಲುವೆ. ಅವಳು ಚಂದನ ರಾಣಿ.

ಚಂದನದ ಗೊಂಬೆ ರೀತಿ ಇದ್ದಾಳೆ.

ಶ್ರೀಗಂಧರಾಜ್ ನಗುತ್ತಿದ್ದಾನೆ. ಆ ಫೋಟೋ ಎತ್ತಿಕೊಂಡು ಈಗ ಗೋಡೆಗೆ ಬಲವಾಗಿ ಅಪ್ಪಳಿಸಿದನು. 'ಬಡಾಲ್' ಎಂಬ ಶಬ್ದದೊಂದಿಗೆ ಒಡೆಯಿತು.

ಒಡೆದು ಚೂರಾಯಿತು.

ಅವಳಿಗೆ ಫೋನ್ ಮಾಡಿದನು. ನಂತರ ಊರ್ಮಿಳಾಗೆ ಕಳಿಸಿದಂತೆ ಚಿನ್ನದ ಆಭರಣಗಳು ಮತ್ತು ಹಣವನ್ನು ಕಳಿಸಿದನು.

ಚಂದನರಾಣಿ ಯಾರು?

ವಿಲೇಜ್ ಅಕೌಂಟೆಂಟ್ ರಾಮಬಾಬುವಿನ ಹೆಂಡತಿ ಅಂತ ಹೇಳಬಹುದು.

ಎರಡು ದಿನಗಳ ನಂತರ ಸುದ್ದಿ ಮಾಧ್ಯಮಗಳಲ್ಲಿ ಚಂದನ ರಾಣಿ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ತಿಳಿಯಿತು.

ಈ ಹುಚ್ಚನಿಗೆ ಊರ್ಮಿಳಾ, ಚಂದನಳ ರೀತಿ ಎಂಟು ಬಲಿಯಾಗಿದ್ದಾರೆ. ಆದರೆ ಅವರ ಸಾವಿನ ನಿಜವಾದ ಹಿನ್ನಲೆ ಮಾತ್ರ ಪತ್ತೇ ಆಗಿಲ್ಲ.

●●●

ಅವಳು ಶಾಲಿನಿ ಶ್ರೀವತ್ಸ! ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿರುವ ಆಕೆ ಬಲು ಅಪರೂಪದ ಚೆಲುವೆ. ಅವಳು ಉದ್ಯೋಗ ಸೇರಲು ಪ್ರಯತ್ನ ಮಾಡಿದ್ದಳು.

ಜಿ.ಎಂ.ಎಸ್. ಕಂಪನಿ!

ಮಾಲೀಕರು ಶ್ರೀಗಂಧರಾಜ್!

ಎದೆಯ ಮೇಲೆ ಮಾಂಗಲ್ಯ ಕಾಣುತ್ತಿರುವ ಸಾಂಪ್ರದಾಯಿಕ ಚೆಲುವೆ. ಈ ಕಂಪನಿಯವರೇನು ಕೆಲಸಕ್ಕೆ ಅಭ್ಯರ್ಥಿಗಳು ಬೇಕು ಅಂತ ಜಾಹೀರಾತು ನೀಡಿರಲಿಲ್ಲ.

ಇವಳೇ ಬಂದಿದ್ದಾಳೆ!

ಆಫೀಸ್ ಚೇಂಬರ್‌ನಲ್ಲಿ ಶ್ರೀಗಂಧರಾಜ್ ಅವಳ ಸೌಂದರ್ಯ ಆರಾಧಿಸುತ್ತಾ "ನೀನು ಮುಂದಿನ ತಿಂಗಳಿನಿಂದ ಕೆಲಸಕ್ಕೆ ಬಾ" ಎಂದು ಹೇಳಿ ಒಂದು ಚೆಕ್ ಬರೆದು ಕೊಟ್ಟನು.

ಅರವತ್ತು ಸಾವಿರದ ಚೆಕ್.

ಅದು ತಿಂಗಳ ಸಂಬಳದ ಅಡ್ವಾನ್ಸ್ ಮತ್ತೊಂದು ನೋಟಿನ ಕಂತೆಗಳಿರುವ ಬಂಡಲ್ ಅನ್ನು ತೆಗೆದರು. "ಶಾಲಿನಿ... ಇದರಲ್ಲಿ ಐದು ಲಕ್ಷ ಇದೆ. ನಾನು ನಿನಗೆ ಕೊಡುತ್ತಿರುವ ಪರ್ಸನಲ್ ಬೋನಸ್.

ಅವಳು ಮೋಹಕವಾಗಿ ನಗುತ್ತಾ ಆ ಹಣವನ್ನು ತೆಗೆದುಕೊಂಡಳು.

ಎರಡು ದಿವಸದ ಅವಧಿಯಲ್ಲಿ ಆರು ಸಲ ಅವಳಿಗೆ ಫೋನ್ ಮಾಡಿದ್ದನು. ಚಿನ್ನದ ಆಭರಣಗಳು, ಸೊಗಸಾದ ಸೀರೆಯನ್ನು ಪಾರ್ಸಲ್ ಕಳಿಸಿದನು. ಸ್ಕೂಲ್ ಈಯರ್ ಡೇ ಸಲಬರೇಟ್ ಮಾಡೋಣ ಬಾ. ಹೊಸ ವರ್ಷದ ಸವಿ ನೆನಪಿಗಾಗಿ ಹತ್ತು ಲಕ್ಷ ಕೊಡ್ತೀನಿ" ಎಂದು ಹೇಳಿದನು.

ಅವರು ಹೇಳಿದ್ದ ವಿಳಾಸದ ಬಂಗಲೆಗೆ ಬಂದಳು.

ರಾತ್ರಿ ಎಂಟು ಗಂಟೆ. ಪ್ರಾರಂಭದಲ್ಲಿ ಸಹಜವಾಗಿದ್ದ ಶ್ರೀಗಂಧರಾಜ್ ಕ್ರಮೇಣ ವಿಲಕ್ಷಣ ರೀತಿಯಲ್ಲಿ ವರ್ತಿಸಲು ಪ್ರಾರಂಭಿಸಿದನು. ಅವಳನ್ನು ಬಲವಂತವಾಗಿ ಬೆತ್ತಲೆಗೊಳಿಸಲು ಪ್ರಯತ್ನಿಸಿದನು.

ಪೊಲೀಸರು ನುಗ್ಗಿದರು.

ಶ್ರೀಗಂಧರಾಜ್‌ನ ವಿಲಕ್ಷಣ ಉನ್ಮಾದತೆ ಇಳಿಯಿತು.

ಶಾಲಿನಿಯ ಗಂಡ ಶ್ರೀವತ್ಸ ಸಹ ಅಲ್ಲಿಗೆ ಬಂದಿದ್ದಾನೆ.

ಶಾಲಿನಿ "ನನ್ನ ಆತ್ಮೀಯ ಗೆಳತಿ ಚಂದನ ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ನಿನ್ನ ಹುಚ್ಚಾಟಗಳ ಬಗ್ಗೆ ಹೇಳಿದ್ದಳು. ಕೆಲಸ ಕೇಳುವ ನೆಪದಲ್ಲಿ ನಿನ್ನ ಹತ್ತಿರ ಬಂದು ಗಮನ ಸೆಳೆದೆ. ನಿನ್ನಿಂದ ತುಂಬಾ ಮಂದಿ ಗೃಹಿಣಿಯರು ತಮ್ಮ ಬದುಕನ್ನು ಅಂತ್ಯಗೊಳಿಸಿಕೊಂಡಿದ್ದಾರೆ. ನನ್ನ ಗಂಡನಿಗೆ ಎಲ್ಲಾ ಹೇಳಿದ್ದೆ. ಪೊಲೀಸರಿಗೆ ಇದರ ಬಗ್ಗೆ ಮೊದಲೇ ಹೇಳಿದ್ದೆವು. ನಿನ್ನಹುಚ್ಚಾಟ ಕೊನೆಗೊಳ್ಳಲೇಬೇಕು" ಎಂದು ಪೊಲೀಸರ ಕಡೆ ತಿರುಗಿದಳು.

☯

# ಪ್ರಭಾಸ್ ಜತೆ ಮೂರು ಚಿತ್ರಗಳನ್ನು ಘೋಷಿಸಿದ ಹೊಂಬಾಳೆ ಫಿಲಂಸ್



ಕೆಜಿಎಫ್, ಕಾಂತಾರ ಮೂಲಕ ಪ್ರಪಂಚದಾದ್ಯಂತ ಕನ್ನಡ ಚಿತ್ರೋದ್ಯಮದ ಮಾರುಕಟ್ಟೆ ವಿಸ್ತರಿಸಿದ ಹೊಂಬಾಳೆ ಫಿಲಂಸ್ ಇದೀಗ ಮತ್ತೊಂದು ಸಾಹಸಕ್ಕೆ ಕೈ ಹಾಕಿದೆ. ಕೇವಲ ಕನ್ನಡ ಚಿತ್ರಗಳಿಗೆ ಮಾತ್ರವೇ ಸೀಮಿತವಾಗದ ಹೊಂಬಾಳೆ ಫಿಲಂಸ್ ಸಂಸ್ಥೆ ಈಗಾಗಲೇ ಪರಭಾಷೆಯ ಸಿನಿಮಾಗಳಿಗೂ ಸಹ ಬಂಡವಾಳ ಹೂಡುವ ಮೂಲಕ ತನ್ನ ವ್ಯಾಪ್ತಿಯನ್ನು ಭಾರತದುದ್ದಗಲಕ್ಕೂ ವಿಸ್ತರಿಸಿಕೊಂಡಿದೆ. ಕೆಜಿಎಫ್, ಕೆಜಿಎಫ್ 2, ಕಾಂತಾರ, ಸಲಾರ್ ಅಲ್ಲದೆ ಕಳೆದವಾರ ಬಿಡುಗಡೆಯಾಗಿರುವ ಬಘೀರ ಸಿನಿಮಾಗಳನ್ನು ಎಲ್ಲೆಡೆ ಮಾರ್ಕೆಟಿಂಗ್ ಮಾಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಪ್ಯಾನ್ ಇಂಡಿಯಾ ಸಿನಿಮಾಗಳಿಗೆ ಹೊಸ ಮೆರಗನ್ನು ನೀಡಿದ ಹೊಂಬಾಳೆ ಫಿಲಂಸ್, ಕಾಂತಾರ ಚಿತ್ರದ ಮೂಲಕ ರಾಷ್ಟ್ರಪ್ರಶಸ್ತಿಯನ್ನೂ ತನ್ನ ಮುಡಿಗೇರಿಸಿಕೊಂಡಿದೆ. ಈ ಸಂಸ್ಥೆ ನಿರ್ಮಿಸಿದ ಈವರೆಗಿನ ಸಿನಿಮಾಗಳು ಕೇವಲ ಒಂದು ಭಾಷೆಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ಭಾಷೆಗಳಿಗೆ ಸಲ್ಲುವ ಸಿನಿಮಾಗಳನ್ನು ಹೊಂಬಾಳೆ ಫಿಲಂಸ್ ನೀಡುತ್ತಿದೆ. ಅದರಂತೆ, ಸಲಾರ್ ಪಾರ್ಟ್ 2 ಮತ್ತು ಕಾಂತಾರ ಪಾರ್ಟ್ 2 ಚಿತ್ರಗಳ ಶೂಟಿಂಗ್ ನಡುವೆಯೇ ಇದೀಗ ಮತ್ತೊಂದು ಮಹೋನ್ನತ ಸಿನಿಮಾ ಬಗ್ಗೆ ಹೊಂಬಾಳೆ ಫಿಲಂಸ್ ನಿರ್ಮಾಪಕರಾದ ವಿಜಯ್ ಕಿರಗಂದೂರು ಅವರು ದೊಡ್ಡ ಅಪ್ಡೇಟ್‌ನ್ನು ನೀಡಿದ್ದಾರೆ.

ಹೌದು, ಇದೀಗ ಸಲಾರ್ ಪಾರ್ಟ್ 2 ಸೇರಿದಂತೆ ಇನ್ನೂ ಎರಡು ಅಂದರೆ ಒಟ್ಟು ಮೂರು ಸಿನಿಮಾಗಳೊಂದಿಗೆ ಪ್ರಭಾಸ್ ಜತೆಗೆ ಹೊಂಬಾಳೆ ಫಿಲಂ ಕೈಜೋಡಿಸುತ್ತಿದೆ. ಈಗಾಗಲೇ ಸಲಾರ್ ಬಿಡುಗಡೆಯಾಗಿದ್ದು, ಪಾರ್ಟ್ 2 ಕೆಲಸಗಳು ನಡೆಯುತ್ತಿವೆ. ಇದೀಗ ಪ್ರಭಾಸ್ ಜತೆಗೆ ಇನ್ನೂ ಎರಡು ಸಿನಿಮಾಗಳನ್ನು ಮಾಡಲು ಹೊಂಬಾಳೆ ಸಂಸ್ಥೆ ನಿರ್ಧರಿಸಿದೆ. ದೊಡ್ಡ ಪರದೆಯ ಮೇಲೆ ಅಷ್ಟೇ ದೊಡ್ಡ ಸದ್ದು ಮಾಡಲು ಈ ಜೋಡಿ ಮತ್ತೆ ಸಿದ್ಧವಾಗಿದೆ. ಬಹುಕೋಟಿ ಬಜೆಟ್‌ನಲ್ಲಿ, ದೊಡ್ಡ ಕ್ಯಾನ್ವಾಸ್‌ನಲ್ಲಿಯೇ ಈ ಸಿನಿಮಾಗಳು ನಿರ್ಮಾಣವಾಗಲಿವೆ.

ಭಾರತೀಯ ಚಿತ್ರರಂಗದಲ್ಲಿ ಹೆಚ್ಚು ಬೇಡಿಕೆಯಿರುವ ಸೂಪರ್‌ಸ್ಟಾರ್‌ಗಳಲ್ಲಿ ಒಬ್ಬರಾದ ಪ್ರಭಾಸ್, ಸದ್ಯ ಸಲಾರ್ 2, ರಾಜಾ ಸಾಬ್, ಸ್ಪಿರಿಟ್, ಕಲ್ಕಿ 2 ಮತ್ತು ಫೌಜಿ ಸೇರಿದಂತೆ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹೀಗಿರುವಾಗಲೇ ಇದೇ ಲೀಸ್ಟ್‌ಗೆ ಇನ್ನೂ ಎರಡು ಸಿನಿಮಾಗಳು ಸೇರ್ಪಡೆಯಾಗಲಿದೆ. ಅದನ್ನು ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಲಿದೆ. ಹಿಂದಿ, ತಮಿಳು, ತೆಲುಗು, ಮಲಯಾಳಂ ಮತ್ತು ಕನ್ನಡ ಮಾರುಕಟ್ಟೆಯಲ್ಲಿ ತಮ್ಮದೇ ಆದ ಸ್ಥಾನಮಾನ ಗಳಿಸಿಕೊಂಡಿದ್ದಾರೆ ಪ್ರಭಾಸ್. ಈಗ ಈ ಸ್ಟಾರ್ ನಟನ ಜತೆಗೆ ಒಟ್ಟು ಮೂರು ಸಿನಿಮಾಗಳನ್ನು ನಿರ್ಮಿಸಲು ಹೊಂಬಾಳೆ ಸಂಸ್ಥೆ ಸನ್ನದ್ಧವಾಗಿದೆ.

ಹೊಂಬಾಳೆ ಫಿಲಂಸ್‌ನ ವಿಜಯ್ ಕಿರಗಂದೂರು ಅವರು ಈ ಸಹಯೋಗದ ಕುರಿತು ಮಾತನಾಡಿದ್ದಾರೆ. ಹೊಂಬಾಳೆ ಫಿಲಂಸ್ ಮೂಲಕ ನಾವು ಗಡಿಯನ್ನು ಮೀರಿದ ಕಥೆಯನ್ನು ಹೇಳಲು ಹೊರಟಿದ್ದೇವೆ, ಪ್ರಭಾಸ್ ಅವರೊಂದಿಗಿನ ನಮ್ಮ ಸಹಯೋಗವು ಮತ್ತೊಂದು ಹೊಸ ಹೆಜ್ಜೆ. ಅದು ಮುಂದಿನ ಪೀಳಿಗೆಗೆ ಸ್ಫೂರ್ತಿ ಮತ್ತು ಮನರಂಜನೆಯನ್ನು ನೀಡುತ್ತದೆ ಎಂದವರು ಹೇಳಿದ್ದಾರೆ.

ಸಲಾರ್ ಭಾಗ 2, ಕಾಂತಾರ ಪ್ರೀಕ್ವೆಲ್, ಮತ್ತು ಕೆಜಿಎಫ್ ಅಧ್ಯಾಯ 3 ಈ ಮೂರೂ ಸಿನಿಮಾಗಳು ಜಾಗತಿಕ ಮಟ್ಟದಲ್ಲಿ ತೆರೆದುಕೊಳ್ಳಲಿವೆ. ಜಾಗತಿಕವಾಗಿ ಪ್ರತಿಧ್ವನಿಸುವ ಚಲನಚಿತ್ರಗಳನ್ನು ನಿರ್ಮಿಸುವ ಬದ್ಧತೆಯನ್ನು ಹೊಂಬಾಳೆ ಫಿಲಂಸ್ ಈ ಮೂಲಕ ಎತ್ತಿ ತೋರಿಸಲಿದೆ. ಇದೀಗ ಪ್ರಭಾಸ್ ಜತೆಗಿನ ಮತ್ತೊಂದು ಮಹತ್ವಾಕಾಂಕ್ಷೆಯ ಹೊಸ ಹೆಜ್ಜೆ ಅಭಿಮಾನಿಗಳು ಮತ್ತು ಸಿನಿಮೋದ್ಯಮದಲ್ಲಿ ಅಪಾರ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಕನ್ನಡದಲ್ಲಿ ಕೆಜಿಎಫ್ ಮತ್ತು ಕಾಂತಾರ, ಬಘೀರ, ತೆಲುಗಿನಲ್ಲಿ ಸಲಾರ್, ತಮಿಳಿನಲ್ಲಿ ರಘು ತಾತಾ ಮತ್ತು ಮಲಯಾಳಂನಲ್ಲಿ ಫಹಾದ್ ಫಾಸಿಲ್ ನಾಯಕನಾಗಿ ನಟಿಸಿದ ಧೂಮಂ ಸಿನಿಮಾಗಳ ಮೂಲಕ ಭಾರತೀಯ ಸಿನಿ ಮಾರುಕಟ್ಟೆಯಲ್ಲಿ ಹೊಂಬಾಳೆ ಫಿಲಂಸ್ ತನ್ನದೇ ಆದ ಅಲೆಯನ್ನು ಸೃಷ್ಟಿಸಿದೆ. ಈ ಸಾಹಸಕ್ಕೆ ಇದೀಗ ಪ್ರಭಾಸ್- ಹೊಂಬಾಳೆ ಪಾಲುದಾರಿಕೆ, ಭಾರತೀಯ ಚಿತ್ರರಂಗದಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಲಿದೆ. ಈ ಮೂಲಕ ಎಲ್ಲೆಡೆ ಸಲ್ಲುವ ಕಥೆಗಳ ಜತೆಗೆ ಹೊಂಬಾಳೆ ಸಂಸ್ಥೆ ಆಗಮಿಸುತ್ತಿದ್ದು, ಈ ಪ್ರಾಜೆಕ್ಟ್‌ಗಳ ನಿರ್ದೇಶಕರು, ತಂತ್ರಜ್ಞರು ಹಾಗೂ ಪಾತ್ರವರ್ಗದ ಬಗ್ಗೆ ಮುಂದಿನ ದಿನಗಳಲ್ಲಿ ಮಾಹಿತಿ ನೀಡಲಿದೆ.



# ಆಶ್ವಿನಿ ಚಂದ್ರಶೇಖರ್ ಕನ್ನಡದ ಕೊಡುಗೆ ದಕ್ಷಿಣದಲ್ಲಿ ಬಿಜಿ!

ರಿಪ್ಪನ್ ಸ್ವಾಮಿ- ಅಶ್ವಿನ್ ಚಂದ್ರಶೇಖರ್, ವಿಜಯ್ ರಾಘವೇಂದ್ರ ಅಭಿನಯಿಸಿರುವ ಚಿತ್ರವಿದು. ಪಂಚಾನನ ಬ್ಯಾನರ್‌ನಲ್ಲಿ ಕಿಶೋರ್ ಮೂಡಬಿದ್ರಿ ಚಿತ್ರ ನಿರ್ದೇಶಿಸಿದ್ದಾರೆ; ನಿರ್ದೇಶಕನಾಗಿ ಇವರಿಗೆ ಪ್ರಥಮ ಚಿತ್ರ ಕೂಡಾ. ಅಶ್ವಿನಿ ಚಂದ್ರಶೇಖರ್ ಸೌತ್ ಇಂಡಿಯಾದ ಚಿತ್ರಗಳಲ್ಲಿ ಈಗ ಬಿಜಿ ಸ್ಟಾರ್. ತೆಲುಗು, ತಮಿಳು, ಮಲಯಾಳಂ ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಆಕೆಯ ಶುದ್ಧ ಅಭಿನಯಕ್ಕಾಗಿ ತೆಲುಗಿನಲ್ಲಿ ಪ್ರಶಸ್ತಿಯೂ ಬಂದಿದೆ. ತಮಿಳಿನಲ್ಲಿ ಎರಡು ಸಿನಿಮಾಗಳು ಬಿಡುಗಡೆಯ ಹಂತಕ್ಕೆ ಬಂದಿದ್ದು, ಬಿಡುಗಡೆಯ ಪೂರ್ವದಲ್ಲೇ ಆಕೆಯ ಕುರಿತು ಒಂದಷ್ಟು ಮಾತುಗಳು ಮತ್ತು ಕುತೂಹಲ ಆರಂಭವಾಗಿದೆ. ಶಿವಮೊಗ್ಗ ಮೂಲದ ಆಶ್ವಿನಿ ಇಂಜನೀಯರಿಂಗ್ ಪದವೀಧರೆ. ಸಿನಿಮಾ ಆಕೆಯ ಕನಸಾಗಿತ್ತು. ಕನ್ನಡ ಚಿತ್ರಗಳಲ್ಲಿ ಪರಿಚಿತ ಮುಖ. ಪ್ರೇಮಕಥೆಯಲ್ಲಿ ಒಂದಷ್ಟು ಕುತೂಹಲ ಮೂಡಿಸಿದ್ದ ಪ್ರೇಮಪಲ್ಲಕ್ಕಿ ಹಾಗೂ ಆಕ್ಟೋಪಸ್ ಆಕೆ ಅಭಿನಯಿಸಿರುವ ಚಿತ್ರಗಳು. ಈ ನಂತರ ತೆಲುಗು, ಮಲಯಾಳಂ ಮತ್ತು ತಮಿಳಿನಲ್ಲಿ ಅವಕಾಶಗಳು ಹುಡುಕಿ ಬಂತು. ಈ ನಿಟ್ಟಿನಲ್ಲಿ ಅಶ್ವಿನಿ ಈಗ ಬಹು ಬೇಡಿಕೆಯ ನಾಯಕಿ. ರಿಪ್ಪನ್‌ಸ್ವಾಮಿ ಚಿತ್ರದ ಆಕೆಯ ಪಾತ್ರ ನಿರ್ವಹಣೆಗೆ ಈಗಾಗಲೇ ಮೆಚ್ಚುಗೆಯ ಮಾತುಗಳೂ ಆರಂಭವಾಗಿದೆ, ಇದೊಂದು ವೈದ್ಯ ವೃತ್ತಿಯ ಪಾತ್ರ. ಇಲ್ಲಿ ಕುಟುಂಬದ ಮಹತ್ವ ಎಷ್ಟು ಮುಖ್ಯ ಎಂಬ ಸನ್ನಿವೇಶಗಳ ನಿರ್ವಹಣೆಯಲ್ಲಿ ಹೆಣ್ಣಿನ ಬದುಕು ಎಷ್ಟು ಮುಖ್ಯ ಮತ್ತು ಅನಿವಾರ್ಯ ಎನ್ನುವ ಪಾತ್ರ ಅಶ್ವಿನಿಯದು. ಈ ಚಿತ್ರದ ಬಿಡುಗಡೆಯ ನಂತರ ಕನ್ನಡದಲ್ಲಿ ಆಕೆ ಬಿಜಿ ನಟಿ ಎನಿಸಬಹುದು. ಚಿತ್ರ ಬಿಡುಗಡೆಯ ಹಂತಕ್ಕೂ ಬಂದಿದೆ. ಇದೇ ಅಶ್ವಿನಿ ಅಭಿನಯಿಸಿರುವ ಎರಡು ತಮಿಳು ಮತ್ತು ಎರಡು ತೆಲುಗು ಚಿತ್ರಗಳೂ ತೆರೆ ಕಾಣಲಿದೆ. ಕನ್ನಡದ ನಟಿಯೊಬ್ಬಳು ದಕ್ಷಿಣದ ಎಲ್ಲಾ ಭಾಷೆಗಳಲ್ಲೂ ಸಾಧನೆ ಮಾಡುವ ಸನ್ನಿವೇಶ ಈ ಮೂಲಕ ಕಾಣಬಹುದು. ಅಶ್ವಿನಿ ನೃತ್ಯದಲ್ಲಿ ವಿದ್ವತ್ ಮಾಡಿದ ಹಿರಿಮೆ ಆಕೆಯದು.


# 'ಸಂತೋಷ ಸಂಗೀತ' ಪತಿ ಪತ್ನಿ ನಡುವೆ ನಂಬಿಕೆ ಮುಖ್ಯ

ಪತಿ, ಪತ್ನಿಯ ನಡುವೆ ಸಂಶಯ, ಅನುಮಾನ ಎನ್ನುವುದು ಹುಟ್ಟಿಕೊಂಡರೆ ಅದು ಅವರ ಜೀವನದಲ್ಲಿ ಯಾವರೀತಿ ದುಷ್ಪರಿಣಾಮ ಬೀರಬಲ್ಲದು, ಯಾವ ಹಂತಕ್ಕೆ ತೆಗೆದುಕೊಂಡು ಹೋಗುತ್ತದೆ ಎಂಬುದನ್ನು ಸಂತೋಷ ಸಂಗೀತ ಚಿತ್ರದ ಮೂಲಕ ನಿರ್ದೇಶಕ ಎಸ್. ಸಿದ್ದು ಅವರು ಹೇಳಿದ್ದಾರೆ, ಒಂದೇ ಕಾಲೇಜಿನಲ್ಲಿ ಓದುತ್ತಿದ್ದ ಸಂತೋಷ(ಅರ್ನವ್ ವಿನ್ಯಾಸ್) ಹಾಗೂ ಸಾನ್ವಿ(ರಾಣಿ ವರದ್) ಇಬ್ಬರ ನಡುವೆ ಆದ ಪರಿಚಯ ನಂತರ ಪ್ರೇಮಕ್ಕೆ ತಿರುಗಿ, ಕೊನೆಗೆ ಇಬ್ಬರೂ ಮದುವೆಯಾಗುವವರೆಗೂ ಬಂದು ನಿಲ್ಲುತ್ತದೆ, ಮದುವೆಯಾದ ನಂತರ ಸಂತೋಷ್ ಕೆಲಸ ಮಾಡುತ್ತಿದ್ದ ಆಫೀಸ್ ಮಾಲೀಕನ ಮಗಳು ಆಕಸ್ಮಿಕವಾಗಿ ಸತ್ತುಹೋಗುತ್ತಾಳೆ, ಆಕೆಯ ಸಾವಿಗೆ ಸಂತೋಷನೇ ಕಾರಣ ಎಂದು ಆಕೆಯ ತಂದೆಯೇ ಟಿವಿ ಮಾಧ್ಯಮಗಳ ಮುಂದೆ ಹೇಳಿಕೆ ನೀಡುತ್ತಾನೆ, ಮಾಲೀಕನ ಮಗಳನ್ನು ಪ್ರೀತಿಸಿ ಮೋಸಮಾಡಿ, ತನ್ನನ್ನು ಮದುವೆಯಾದ ಸಂತೋಷನನ್ನು ಸ್ವಾಭಿಮಾನಿ ಯುವತಿಯಾದ ಸಾನ್ವಿ ಗಂಡನೆಂದು ಸ್ವೀಕರಿಸಲು ಒಪ್ಪದೆ ಆತ ಕಟ್ಟಿದ ತಾಳಿಯನ್ನು ಕಿತ್ತೊಗೆದು ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುತ್ತಾಳೆ, ಆರು ತಿಂಗಳ ನಂತರ ಇವರ ಡೈವರ್ಸ್ ಅರ್ಜಿ ಸಿಂಧುವಾಗುತ್ತದೆ, ನಂತರ ಇಬ್ಬರೂ ಬೇರೆ ಬೇರೆ ಕ್ಯಾಟರಿಂಗ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಕೆಲಸದ ಸಂಬಂಧ ಆಗಾಗ ಇಬ್ಬರ ಮಧ್ಯೆ ಘರ್ಷಣೆ ನಡೆಯುತ್ತಲೇ ಇರುತ್ತದೆ, ಹೀಗೆ ತಮ್ಮ ಕಂಪನಿಗೆ ದೊಡ್ಡ ದೊಡ್ಡ ಕ್ಯಾಟರಿಂಗ್ ಆರ್ಡರ್‌ಗಳನ್ನು ಹಿಡಿಯುವ ಸಲುವಾಗಿ ಇಬ್ಬರ ಮಧ್ಯೆ ವಾರ್ ನಡೆಯುತ್ತಲೇ ಇರುತ್ತದೆ, ಇವರಿಬ್ಬರೂ ಕೊನೆಗೆ ಒಂದಾಗುತ್ತಾರಾ? ಅಥವಾ ಸದಾ ಘರ್ಷಣೆ ಮಾಡುತ್ತಲೇ ಸಾಗುತ್ತಾರಾ? ಸಂತೋಷ್ ಮೇಲೆ ಬಂದಿದ್ದ ಕೊಲೆ ಆರೋಪ ಏನಾಯಿತು ?, ಕ್ಲೈಮ್ಯಾಕ್ಸ್‌ನಲ್ಲಿ ನಿರ್ದೇಶಕ ಸಿದ್ದು ಅವರು ಪ್ರೇಕ್ಷಕರಿಗೆ ಹೇಳಿರುವ ಸಂದೇಶವಾದರೂ ಏನು ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಬೇಕೆಂದರೆ ನೀವೆಲ್ಲ ಥೇಟರಿಗೆ ಹೋಗಿ ಸಂತೋಷ ಸಂಗೀತ ಚಿತ್ರವನ್ನು ನೋಡಲೇಬೇಕು. ಬಹಳ ದಿನಗಳ ನಂತರ ಸುಂದರವಾದ ಸಾಂಸಾರಿಕ ಚಿತ್ರವನ್ನು ಅಷ್ಟೇ ಕಲರ್‌ಫುಲ್ ಆಗಿ ತೆರೆಮೇಲೆ ಮೂಡಿಸಿದ್ದಾರೆ ನಿರ್ದೇಶಕ ಸಿದ್ದು, ನಿರ್ದೇಶಕರು ಚಿತ್ರವನ್ನು ನೇರವಾಗಿ ನಿರೂಪಿಸದೆ, ಹಿನ್ನೆಲೆಯಲ್ಲಿ ಕಾಲೇಜಿನ ಎಪಿಸೋಡ್ ಹೇಳಿರುವುದು ಚಿತ್ರದ ಬಗ್ಗೆ ಪ್ರೇಕ್ಷಕರಲ್ಲಿ ಕುತೂಹಲ ಹೆಚ್ಚಿಸುತ್ತದೆ, ಚಿತ್ರದ ಎರಡು ಹಾಡುಗಳು ಚೆನ್ನಾಗಿ ಮೂಡಿಬಂದಿವೆ, ಅವುಗಳ ಸಾಹಿತ್ಯವೂ ಅಷ್ಟೇ ಚೆನ್ನಾಗಿದೆ, ನಾಯಕ ಅರ್ನವ್ ಮಧ್ಯಮ ವರ್ಗದ ಯುವಕನಾಗಿ ತಮ್ಮ ಪಾತ್ರವನ್ನು ಚೆನ್ನಾಗಿ ನಿಭಾಯಿಸಿದ್ದಾರೆ, ನಾಯಕಿ ರಾಣಿ ವರದ್ ಕೂಡ ಅಷ್ಟೇ ಪರಿಣಾಮಕಾರಿಯಾಗಿ ಅಭಿನಯಿಸಿದ್ದಾರೆ.



ನಾಯಕನ ಚಿಕ್ಕಪ್ಪನಾಗಿ ದೊಡ್ಡಣ್ಣ, ಆಫೀಸ್ ಓನರ್ ಆಗಿ ಅವಿನಾಶ್ ತಂತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ, ಗಂಡ, ಹೆಂಡತಿ ಇಬ್ಬರ ನಡುವೆ ಬರುವ ಮತ್ತೊಬ್ಬ ಹುಡುಗಿಯಾಗಿ ನಕ್ಷತ್ರ, ಕಾಮಿಡಿ ಕಿಲಾಡಿಗಳು ಲೋಕೇಶ್, ಅಮಿತ್, ಮಡೆನೂರು ಮನು ಸ್ನೇಹಿತರಾಗಿ, ತಂತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಎಸ್. ಸ್ಕ್ವೇರ್ ಎಂಟರ್‌ಪ್ರೈಸಸ್ ಮೂಲಕ ಸಿದ್ದು ಎಸ್. ಅವರೇ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಚಿತ್ರದಲ್ಲಿ ನಾಯಕ ನಾಯಕಿಯಾಗಿ ಕಾಣಿಸಿಕೊಂಡಿರುವ ಅರ್ನವ್‌ವಿನ್ಯಾಸ್ ಹಾಗೂ ರಾಣಿವರದ್ ನಿಜಜೀವನದಲ್ಲೂ ಪತಿ-ಪತ್ನಿ ಎನ್ನುವುದು ಈ ಚಿತ್ರದ ಮತ್ತೊಂದು ವಿಶೇಷ.

# ನನ್ನ ಜನರಿಗೆ ಮೋಸ ಮಾಡುವುದಿಲ್ಲ ಎಂದಿದ್ದೇಕೆ ಸೆಂಚುರಿ ಸ್ಟಾರ್?




ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಸಿನಿಮಾ 'ಭೈರತಿ ರಣಗಲ್' ಬಿಡುಗಡೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಉಳಿದಿವೆ. ಶಿವಣ್ಣನನ್ನು ಮತ್ತೊಮ್ಮೆ ಮಾಸ್ ಅವತಾರದಲ್ಲಿ ನೋಡುವುದಕ್ಕೆ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಇನ್ನೊಂದು ಕಡೆ ಶಿವಣ್ಣನ ಅನಾರೋಗ್ಯ ಬಗ್ಗೆನೂ ಆತಂಕಕ್ಕೆ ಒಳಗಾಗಿದ್ದಾರೆ. ಪ್ರತಿಯೊಂದು ಸಂದರ್ಶನಲ್ಲಿಯೂ ತಮ್ಮ ಆರೋಗ್ಯದ ಬಗ್ಗೆ ಬಹಿರಂಗವಾಗಿಯೇ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದಾರೆ.



'ಭೈರತಿ ರಣಗಲ್' ಸಿನಿಮಾ ರಿಲೀಸ್ ಆಗುತ್ತಿರುವ ಬೆನ್ನಲ್ಲೇ ಆ್ಯಂಕರ್ ಅನುಶ್ರೀ ಯೂಟ್ಯೂಬ್ ಚಾನೆಲ್‌ಗೆ ಸಂದರ್ಶನ ನೀಡಿದ್ದಾರೆ. ಅದರ ಪ್ರೋಮೊ ಒಂದನ್ನು ಅನುಶ್ರೀ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಶೇರ್‌ಮಾಡಿಕೊಂಡಿದ್ದಾರೆ. ಇದರಲ್ಲಿನ ಶಿವಣ್ಣ ಹಾಗೂ ಗೀತಾ ಶಿವರಾಜ್‌ಕುಮಾರ್ ಇಬ್ಬರೂ ಅನುಶ್ರೀ ಜೊತೆ ಮಾತಾಡುವಾಗ ಕೆಲವೊಮ್ಮೆ ಖುಷಿಯಾಗಿಯೂ, ಇನ್ನೊಮ್ಮೆ ಭಾವನಾತ್ಮಕವಾಗಿಯೂ ಕಾಣಿಸಿಕೊಂಡಿದ್ದಾರೆ.

ಶಿವಣ್ಣ ಹಾಗೂ ಗೀತಾ ಶಿವರಾಜ್‌ಕುಮಾರ್ ಇಬ್ಬರ ಸಂದರ್ಶನವನ್ನು ಮೈಸೂರಿನಲ್ಲಿರುವ ಶಕ್ತಿಧಾಮದ ಮಕ್ಕಳ ಜೊತೆ ಆ್ಯಂಕರ್ ಅನುಶ್ರೀ ಮಾಡಿದ್ದಾರೆ. ಮಕ್ಕಳೊಂದಿಗೆ ಶಿವಣ್ಣ ಅಣ್ಣನಾಗಿ ಅವರೊಂದಿಗಿನ ಬಾಂಧವ್ಯವನ್ನು ಹಂಚಿಕೊಂಡಿದ್ದಾರೆ. ಹಾಗೇ ಮಕ್ಕಳೊಂದಿಗೆ ಹಾಡಿ ಸಂಭ್ರಮಿಸಿದ್ದಾರೆ. ಇದೇ ವೇಳೆ ಗೀತಾ ಶಿವರಾಜ್‌ಕುಮಾರ್ ಭಾವುಕರಾಗಿದ್ದು ಫ್ಯಾನ್ಸ್ ಗೊಂದಲಕ್ಕೆ ಒಳಗಾಗಿದ್ದಾರೆ.

ಆ್ಯಂಕರ್ ಅನುಶ್ರೀ ಜೊತೆಗಿನ ಸಂದರ್ಶನ ಮಜವಾಗಿ ಇರುತ್ತೆ. ಕೆಲವೊಮ್ಮೆ ಭಾವುಕವಾಗಿರುತ್ತೆ. ಹೆಚ್ಚಾಗಿ ಕಾಮಿಡಿ, ಮಸ್ತಿಯಾಗಿಯೇ ಇರುತ್ತೆ. ಶಿವಣ್ಣ ಹಾಗೂ ಗೀತಾ ಶಿವರಾಜ್ ಕುಮಾರ್ ಸಂದರ್ಶನ ಸ್ವಲ್ಪ ಎಮೋಷನಲ್ ಆಗಿದೆ. ಅನುಶ್ರೀ ಸಂದರ್ಶನದಲ್ಲಿ ಶಿವಣ್ಣ ಹಾಗೂ ಗೀತಾ ಗೀತಾ ಶಿವರಾಜ್‌ಕುಮಾರ್ ಆಡಿದ ಮಾತುಗಳ ಪ್ರೋಮೊದಲ್ಲಿನ ಹೈಲೈಟ್ ಇಲ್ಲಿದೆ.

ಪ್ರೋಮೊದ ಆರಂಭದಲ್ಲಿಯೇ ಮೈಸೂರಿನಿಂದ ನಿಟ್ಟುಸಿರು ಇರುವವರೆಗೆ.. ಎಂದು ಆರಂಭ ಆಗುತ್ತೆ. ಹಾಗೇ ಶಿವರಾಜ್‌ಕುಮಾರ್ ಮೈಸೂರಿನಲ್ಲಿರುವ ಶಕ್ತಿಧಾಮದ ಬಗ್ಗೆನೂ ಮಾತಾಡಿದ್ದಾರೆ. ಶಕ್ತಿಧಾಮಕ್ಕೆ ಶಕ್ತಿ ತುಂಬಿದ್ದು ಅಮ್ಮ ಎಂದು ಶಿವಣ್ಣ ಈ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಇದೇ ವೇಳೆ ನಮ್ಮಿಬ್ಬರಲ್ಲಿ ನಿಮಗೆ ಯಾರು ಇಷ್ಟ ಎಂದು ಆ್ಯಂಕರ್ ಅನುಶ್ರೀಗೆ ಗೀತಾ ಶಿವರಾಜ್‌ಕುಮಾರ್ ಪ್ರಶ್ನೆ ಮಾಡಿದ್ದು ಕೂಡ ಈ ಪ್ರೋಮೊದ ಹೈಲೈಟ್.

# ಅಂಶು ಸಮಾಜದಲ್ಲಿ ನಡೀತಿರೋ ಘಟನೆಗಳ ಪ್ರತಿಬಿಂಬವೇ ಆಗಿದೆ



ಇತ್ತೀಚಿನ ದಿನಗಳಲ್ಲಿ ಮಹಿಳಾ ಪ್ರಧಾನ ಕಥಾನಕವನ್ನು ಒಳಗೊಂಡ ಚಿತ್ರಗಳ ನಿರ್ಮಾಣ ಕಡಿಮೆಯಾಗಿದೆ, ಕಮರ್ಷಿಯಲ್ಲಾಗಿ ಅಂಥಾ ಚಿತ್ರಗಳು ಗೆಲ್ಲುವುದು ವಿರಳವಾದರೂ ಕೆಲವೊಂದು ಚಿತ್ರಗಳು ಸೂಪರ ಡೂಪರ ಹಿಟ್ ಆದ ಉದಾಹರಣೆಯೂ ಇದೆ, ಅಂಥಾ ಗೆಲ್ಲುವ ಎಲ್ಲ ಅಂಶ ಒಳಗೊಂಡ ಚಿತ್ರಗಳಲ್ಲಿ ಅಂಶು ಕೂಡ ಒಂದು. ಸಾಮಾಜಿಕ ಪಲ್ಲಟಗಳಿಗೆ ಕಣ್ಣಾದ ಕಥೆ ಒಳಗೊಂಡ ಚಿತ್ರಗಳೆಂದರೆ ಕನ್ನಡ ಸಿನಿ ಪ್ರೇಕ್ಷಕರಲ್ಲಿ ಒಂದು ಬಗೆಯ ಸೆಳೆತವಿದೆ. ಅಂಥಾದ್ದೊಂದು ಕಥೆ ಹೊಂದಿದ ವಿಭಿನ್ನ ಜಾನರಿನ, ಪಕ್ಕಾ ಕಮರ್ಶಿಯಲ್ ಶೈಲಿಯಲ್ಲಿ ರೂಪುಗೊಂಡಿರುವ ಚಿತ್ರವೇ ಅಂಶು. ರಿಲೀಸಿಗೆ ಸಿದ್ಧವಾಗಿರುವ ಅಂಶು ಚಿತ್ರದ ಟ್ರೈಲರ್ ಈಗಾಗಲೇ ಎಲ್ಲರ ಮನಗೆದ್ದಿದೆ. ಅಂಥಾದ್ದೊಂದು ಸೆಳೆತವಿರೋ ಅಂಶು ಇದೀಗ ಬಿಡುಗಡೆಗೆ ಸಜ್ಜಾಗಿದೆ,

ಕಿರಿತೆರೆಯ ನಟಿ ನಿಶಾ ರವಿಕೃಷ್ಣನ್ ಅವರು ಅಂಶು ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಗಟ್ಟಿಮೇಳ ಧಾರಾವಾಹಿಯಲ್ಲಿ ನಾಯಕಿ ಅಮೂಲ್ಯ ಪಾತ್ರದ ಮೂಲಕ ಕನ್ನಡ ಟೆಲಿವಿಷನ್ ವೀಕ್ಷಕರ ಮನೆ ಮಗಳಾಗಿ ಗಮನ ಸೆಳೆದಿದ್ದ ನಿಶಾ ರವಿಕೃಷ್ಣನ್ ಅವರು ಸೀರಿಯಲ್ ಇಮೇಜನ್ನು ಮೀರಿದ ಪಾತ್ರವೊಂದನ್ನು ಅಂಶು ಚಿತ್ರದಲ್ಲಿ ನಿರ್ವಹಿಸಿದ್ದಾರೆ. ಎಂ.ಸಿ, ಚನ್ನಕೇಶವ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ, ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. 'ನಾವು ನಂಬೋದೆಲ್ಲ ನಿಜ ಅಲ್ಲ, ಸಹಿಸೋಕೆ ಆಗ್ದೆ ಇರೋದೆಲ್ಲ ಸುಳ್ಳಲ್ಲ' ಅಂತ ಶುರುವಾಗುವ ಚಿತ್ರ ಟ್ರೈಲರ್ ಒಂದಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ, ಇದೊಂದು ಸೈಕ್ಯಾಡೆಲಿಕ್ ಥ್ರಿಲ್ಲರ್ ಜಾನರಿನ ಚಿತ್ರವಾಗಿದ್ದು, ನಮ್ಮ ಸಮಾಜದಲ್ಲಿ ಇಂದಿನ ದಿನಮಾನದಲ್ಲಿ ಘಟಿಸುತ್ತಿರುವ ವಿಚಾರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಇದರಲ್ಲಿ ದೃಶ್ಯೀಕರಿಸಲಾಗಿದೆ. ಅದರ ಆವೇಗ ಎಂಥಾದ್ದು ಎಂಬುದಕ್ಕೆ ಸಾಕ್ಷಿಯಾಗಿ ಅಂಶು ಚಿತ್ರದ ಟ್ರೈಲರ್ ಮೂಡಿಬಂದಿದೆ.

ಗ್ರಹಣ ಎಲ್.ಎಲ್.ಪಿ. ಬ್ಯಾನರ್ ಅಡಿಯಲ್ಲಿ ಈ ಚಲನಚಿತ್ರವು ನಿರ್ಮಾಣವಾಗಿದ್ದು, ರತನ್ ಗಂಗಾಧರ್, ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಅವರುಗಳು ಈ ಚಿತ್ರವನ್ನು ಅದ್ದೂರಿ ಬಜೆಟ್‌ನಲ್ಲಿ ನಿರ್ಮಾಣ ಮಾಡಿದ್ದಾರೆ. ಭಜರಂಗಿ 2, ವೇದ ಚಿತ್ರಗಳಲ್ಲಿ ವಿಲನ್ ಆಗಿ ನಟಿಸಿದ, ಈಗ ಬಾಲಿವುಡ್‌ನಲ್ಲೂ ಸಕ್ರಿಯರಾಗಿರುವ ಚಲುವರಾಜ್ ಅವರು ಅಂಶು ಚಿತ್ರದ ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. ಜೈಚಂದ್ರ, ಪ್ರಮೋದ್ ಡಾ.ಮಧುರಾಜ್ ಮತ್ತು ವೀರನ್‌ಗೌಡ ಕೂಡಾ ಅಂಶು ಚಿತ್ರ ನಿರ್ಮಾಣದಲ್ಲಿ ಸಹಭಾಗಿಗಳಾಗಿದ್ದಾರೆ. ಈಗಾಗಲೇ ಅಂಶು ಚಿತ್ರದ ಫಸ್ಟ್ ಲುಕ್ ಟೀಸರ್, ಟ್ರೈಲರ್ ಬಿಡುಗಡೆಯಾಗಿ ಚಿತ್ರ ಯಾವಾಗ ರಿಲೀಸಾಗುತ್ತೋ ಎಂಬ ಕುತೂಹಲ ಸೃಷಿಟಿಸಿವೆ, ಲಂಡನ್‌ನಲ್ಲಿ ಡಾಕ್ಟರ್ ಆಗಿರುವ ಮಧುರಾಜ್ ಅದನ್ನು ನೋಡಿ ಥ್ರಿಲ್ ಆಗಿ ನಿರ್ಮಾಣದಲ್ಲಿ ಜತೆಗೂಡಿದ್ದಾರೆ,

ಇನ್ನುಳಿದಂತೆ ನಿರ್ದೇಶಕ ಚನ್ನಕೇಶವ ಅವರು ಫಿಲಂ ಮೇಕಿಂಗ್ ಕೋರ್ಸ್ ಮುಗಿಸಿಕೊಂಡಿದ್ದು, ಸಮಾಜಮುಖಿಯಾದ ಕಥಾಹಂದರವನ್ನು ಕಮರ್ಶಿಯಲ್ ಧಾಟಿಯಲ್ಲಿ ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದಾರೆ. ಇನ್ನುಳಿದಂತೆ ದೂಡಿ ಎಂಬ ತಮಿಳು ಸಿನಿಮಾ ಅಲ್ಲದೆ ಕನ್ನಡದ ಗರುಡ ಪುರಾಣ ಸಿನಿಮಾಗಳಿಗೆ ಕೆಲಸ ಮಾಡಿದ್ದ ಸುನೀಲ್ ನರಸಿಂಹಮೂರ್ತಿ ಅವರು ಈ ಚಿತ್ರದ ಛಾಯಾಗ್ರಾಹಕರಾಗಿದ್ದಾರೆ. ಕೆ.ಸಿ. ಬಾಲಸಾರಂಗನ್ ಅವರು ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ.

# ಐಟಂ ಹಾಡಿಗೆ ಹೆಜ್ಜೆ ಹಾಕಿದ ಶ್ರೀಲೀಲಾ



ನಾಯಕ ನಟಿಯರು ಐಟಂ ಹಾಡಲ್ಲಿ ಕಾಣಿಸಿಕೊಂಡರೆ ತಮ್ಮ ಇಮೇಜ್ ಎಲ್ಲಿ ಕಮ್ಮಿಯಾಗಿಬಿಡುತ್ತೋ ಎನ್ನುವ ಕಾಲವೊಂದಿತ್ತು , ಆದರೆ ಈಗ ಪರಿಸ್ಥಿತಿ ಬದಲಾಗಿದೆ, ನಾಯಕಿಯರೂ ಸಹ ಐಟಂ ಸಾಂಗ್‌ನಲ್ಲಿ ಅಭಿನಯಿಸುತ್ತಿದ್ದಾರೆ, ಅದಕ್ಕೆ ಸ್ಪೆಷಲ್ ಸಾಂಗ್ ಎಂಬ ಟೈಟಲ್ಲನ್ನೂ ಕೊಡುತ್ತಿದ್ದಾರೆ, ಇತ್ತೀಚೆಗೆ ಕೆಜಿಎಫ್ ಚಿತ್ರದಲ್ಲಿ ಮಿಲ್ಕಿ ಬ್ಯೂಟಿ ತಮನ್ನಾ ಯಶ್ ಜತೆ ಜೋಕೆ ನಾನು ಬಳ್ಳಿಯ ಮಿಂಚು ಎಂದು ಯಶ್ ಜತೆ ಹಾಡಿ ಕುಣಿದಿದ್ದರು. ಇದೀಗ ಕನ್ನಡದ ನಟಿ ಶ್ರೀಲೀಲಾ ಐಟಂ ಹಾಡೊಂದರಲ್ಲಿ ಕಾಣಿಸಿಕೊಂಡಿದ್ದಾರೆ, ನಟ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ ಅಭಿನಯದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಚಿತ್ರ ಪುಷ್ಪ 2, ಡಿಸೆಂಬರ್ 6ರಂದು ಅದ್ದೂರಿಯಾಗಿ ರಿಲೀಸಾಗಲಿರುವ ಈ ಚಿತ್ರದ ಬಿಡುಗಡೆಗೆ ದಿನಗಣನೆ ಶುರುವಾಗಿದೆ. ಹೀಗಿರುವಾಗ ಚಿತ್ರದ ಕುರಿತಂತೆ ಇಂಟರೆಸ್ಟಿಂಗ್ ಮಾಹಿತಿಯೊಂದು ಹೊರಬಿದ್ದಿದೆ.

ಈ ಚಿತ್ರದ ಐಟಂ ಹಾಡಿನಲ್ಲಿ ಕಿಸ್. ಭರಾಟೆದ ಖ್ಯಾತಿಯ ನಟಿ ಶ್ರೀಲೀಲಾ ಅವರು ನಾಯಕನ ಜತೆ ಹೆಜ್ಜೆ ಹಾಕಿದ್ದಾರೆ. ಹಿಂದೆ ಈ ಹಾಡಿನಲ್ಲಿ ಅಭಿನಯಿಸಲು ಬಾಲಿವುಡ್ ನಟಿಯರ ಹೆಸರೆಲ್ಲ ಕೇಳಿಬಂದಿತ್ತು. ಅದರಲ್ಲೂ ಶ್ರದ್ಧಾಕಪೂರ್ ಈ ಚಿತ್ರದಲ್ಲಿ ಐಟಂಹಾಡಿಗೆ ಹೆಜ್ಜೆ ಹಾಕಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡಿತ್ತು.

ಪುಷ್ಪ 1ರಲ್ಲಿ ನಟಿ ಸಮಂತಾ ಡ್ಯಾನ್ಸ್ ಮಾಡಿದ್ದ ಹಾಡು ಸಿಕ್ಕಾಪಟ್ಟೆ ಸದ್ದು ಮಾಡಿತ್ತು. ಚಿತ್ರದ ಗೆಲುವಿಗೆ ಕಥೆಯ ಜೊತೆ ಸಮಂತಾ ಅವರ ಡಾನ್ಸ್ ಪ್ಲಸ್ ಆಗಿತ್ತು. ಹಾಗಾಗಿಯೇ ಪುಷ್ಪ 2ರಲ್ಲೂ ಇದೇ ಫಾರ್ಮುಲಾವನ್ನು ಚಿತ್ರತಂಡ ಬಳಸುತ್ತಿದೆ. ಈ ಹಿಂದೆ ಐಟಂ ಹಾಡಿಗೆ ಹೆಜ್ಜೆ ಹಾಕಲು ಜಾನ್ವಿ ಕಪೂರ್, ತೃಪ್ತಿ ದಿಮ್ರಿ, ಶ್ರೀಲೀಲಾ ಹೀಗೆ ಅನೇಕರ ಹೆಸರು ಕೇಳಿಬಂದಿತ್ತು. ಈಗ ನಟಿ ಶ್ರೀಲೀಲಾ ಅವರ ಹೆಸರು ಫೈನಲ್ ಆಗಿದೆ. ಅವರು ಅಲ್ಲು ಅರ್ಜುನ್ ಜತೆ ಕುಣಿದಿರೋದೇ ಪಕ್ಕಾ ಆಗಿದೆ ಈಗಾಗಲೇ ಈ ಹಾಡಿನ ಚಿತ್ರೀಕರಣವೂ ಸಹ ಮುಗಿದಿದೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 10.11.2024




Vol. 40 No. 23 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com